ಕುಸುಮಾಕರ ದೇವರಗೆಣ್ಣೂರ ನಾಲ್ಕನೆಯ ಆಯಾಮ

ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್. ಸಂಪ್ರಬಂಧ

ಸಂಶೋಧಕಿ

ಅನುಪಮಾ ಎಸ್. ಉತ್ನಾಳ

ಮಾರ್ಗದರ್ಶಕರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಪ್ರಾಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೭

162

ಕುಸುಮಾಕರ ದೇವರಗೆಣ್ಣೂರ ನಾಲ್ಕನೆಯ ಆಯಾಮ : ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್. ಸಂಪ್ರಬಂಧ

ಸಂಶೋಧಕಿ
ಅನುಪಮಾ ಎಸ್. ಉತ್ನಾಳ

ಮಾರ್ಗದರ್ಶಕರು
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಪ್ರಾಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೭

ಪ್ರಮಾಣ ಪತ್ರ

"ಕುಸುಮಾಕರ ದೇವರಗೆಣ್ಣೂರ ನಾಲ್ಕನೆಯ ಆಯಾಮ" ಒಂದು ಅಧ್ಯಯನ ಎಂಬ ನಿಬಂಧವನ್ನು ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಅನುಪಮಾ ಎಸ್.ಉತ್ನಾಳ
ಸಂಶೋಧಕಿ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ದಿನಾಂಕ : 30 JUL 2007
ಸ್ಥಳ : ವಿದ್ಯಾರಣ್ಯ

ದೃಢೀಕರಣ ಪತ್ರ

"ಕುಸುಮಾಕರ ದೇವರಗೆಣ್ಣೂರ ನಾಲ್ಕನೆಯ ಆಯಾಮ" ಒಂದು ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಕು.ಅನುಪಮಾ ಎಸ್.ಉತ್ನಾಳ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಲ್ಲೇಪುರಂ ಜಿ.ವೆಂಕಟೇಶ

ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ
ಮಾರ್ಗದರ್ಶಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 30 JUL 2007
ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

ನಿಬಂಧವನ್ನು ಸಿದ್ಧಪಡಿಸಲು ಸೂಕ್ತ ಸಲಹೆ ಸೂಚನೆಗಳೊಂದಿಗೆ ತಾಳ್ಮೆಯಿಂದ ಮಾರ್ಗದರ್ಶನ ನೀಡಿದ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ. ನಿಬಂಧದ ಅಧ್ಯಯನಕ್ಕೆ ಎಲ್ಲಾ ರೀತಿಯ ನೆರವು ನೀಡಿದ ವಿವಿಧ ಆಯಾಮಗಳನ್ನು ಬೋಧಿಸುವ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದ ಡಾ.ಸುಬ್ಬಣ್ಣ ರೈ, ಡಾ.ಮಾಧವ ಪೆರಾಜೆ, ಸಿ.ವೆಂಕಟೇಶ, ಡಾ.ಸುಚೇತಾ ನವರತ್ನ ಅವರ ಸಹಕಾರವನ್ನು ನೆನೆಯುತ್ತೇನೆ. ವಿಭಾಗದ ಬೋಧಕೇತರ ಸಿಬ್ಬಂದಿಗಳಿಗೂ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ಸಂಶೋಧನೆಯನ್ನು ನಡೆಸಲು ಸೂಕ್ತ ವಾತಾವರಣವನ್ನು ಕಲ್ಪಿಸಿದ ಹಿಂದಿನ ಕುಲಪತಿಗಳಾದ ಮಾನ್ಯ ಡಾ.ಬಿ.ಎ.ವಿವೇಕ ರೈ ಮತ್ತು ಇಂದಿನ ಪ್ರಭಾರಿ ಕುಲಪತಿಗಳಾದ ಡಾ.ಕೆ.ವಿ.ನಾರಾಯಣ ಅವರಿಗೆ, ಕುಲಸಚಿವರಿಗೆ, ಅಧ್ಯಯನಾಂಗದ ನಿರ್ದೇಶಕರಿಗೆ, ಗ್ರಂಥಪಾಲಕರಿಗೆ ಆಭಾರಿಯಾಗಿದ್ದೇನೆ.

ಸದಾ ನನ್ನ ಏಳ್ಗೆಯನ್ನು ಬೆನ್ನುತಟ್ಟಿ ಪ್ರೋತ್ಸಾಯಿಸುತ್ತಾ ಬರುತ್ತಿರುವ ಅಪ್ಪ ಶ್ರೀ ಸಿದ್ಧಣ್ಣ ಉತ್ನಾಳ ಅವರ ಬೆಂಬಲವಿಲ್ಲದಿದ್ದರೆ ನಾನು ಏನೂ ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ. ಅವರಿಗೆ ಗೌರವಪೂರ್ವಕ ಕೃತಜ್ಞತೆಗಳು. ಪ್ರೀತಿಯ ಅಣ್ಣಂದಿರಾದ ಶಶಿಧರ, ಪ್ರವೀಣ, ತಂಗಿ ಅಪರ್ಣಾ ಇವರು ಹಾಗೂ ಪ್ರೋತ್ಸಾಹವನ್ನು ನೀಡಿದ ಮಾಮಾ, ಮಾಮಿ, ದೊಡ್ಡಮ್ಮ, ದೊಡ್ಡಪ್ಪ ಇವರಿಗೆ ನನ್ನ ಕೃತಜ್ಞತೆಗಳು. ಅಧ್ಯಯನದ ಸಂದರ್ಭದಲ್ಲಿ ಸಹಕಾರವನ್ನು ನೀಡಿದ ಭೀಮರಾವ್ ರಾಯರ್ ಮತ್ತು ಗುರುವಾದ ಡಾ.ವೆಂಕಟಗಿರಿ ದಳವಾಯಿಯವರನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ. ಈ ಅಧ್ಯಯನಕ್ಕೆ ಎಲ್ಲ ರೀತಿಯಿಂದಲೂ ಸಹಕಾರ ನೀಡಿದ ನನ್ನ ಗೆಳತಿಯರಾದ ಮೇಘಾ, ಉಮಾ, ಬೇಬಿ, ಅನು, ಸುಕನ್ಯಾ, ಸಾವಿತ್ರಿ, ಲಲಿತಾ ಇವರೆಲ್ಲರಿಗೂ ನನ್ನ ಕೃತಜ್ಞತೆಗಳು. ಅಲ್ಪಾವಧಿಯಲ್ಲಿ ಅಂದವಾಗಿ ಡಿ.ಟಿ.ಪಿ. ಮಾಡಿಕೊಟ್ಟ ಫಾಂಟ್‌ಲೈನ್ ಗ್ರಾಫಿಕ್ಸ್‌ನ ಜಿ. ಉಲ್ಲಾಸ್ ಅವರನ್ನು ನಾನು ನೆನೆಯುತ್ತೇನೆ.

ಅನುಪಮಾ ಎಸ್.ಉತ್ನಾಳ

ದಿನಾಂಕ

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ / ೧

ಅಧ್ಯಾಯ ಎರಡು

ಕುಸುಮಾಕರ ದೇವರಗೆಣ್ಣೂರ ಮತ್ತು ಸಮಕಾಲೀನ ಕಾದಂಬರಿ ಪ್ರಪಂಚ / ೭

ಅಧ್ಯಾಯ ಮೂರು

ನಾಲ್ಕನೆಯ ಆಯಾಮದ ವಿವಿಧ ಅಧ್ಯಯನಗಳು / ೧೮

೪.೧. ಕಾದಂಬರಿಯ ಇತಿವೃತ್ತ

೪.೨. ಕಾದಂಬರಿಯ ಆಶಯ

೪.೩. ಕಾದಂಬರಿಯ ಪಾತ್ರಪ್ರಪಂಚ

೪.೪. ಕಾದಂಬರಿಯ ಭಾಷೆ ಮತ್ತು ಶೈಲಿ

ಅಧ್ಯಾಯ ನಾಲ್ಕು

ಸಮಾರೋಪ / ೬೩

ಅನುಬಂಧಗಳು / ೬೭

೧. ಕುಸುಮಾಕರ ಕೃತಿ ವಿವರ

೨. ಆಕರ ಗ್ರಂಥಗಳು

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಕುತೂಹಲ ಹಾಗೂ ಅಷ್ಟೇ ಶ್ರದ್ಧೆಯಿಂದ ಓದಬೇಕಾದ ನಮ್ಮದ ಅನನ್ಯ ಲೇಖಕರಲ್ಲಿ ಒಬ್ಬರಾದ ಕುಸುಮಾಕರ ದೇವರಗೆಣ್ಣೂರರು ಒಬ್ಬರು. ಇವರ ಸಾಹಿತ್ಯ ಕೃಷಿ ವಿಫಲವಾಗಿಲ್ಲದಿದ್ದರೂ ವೈವಿಧ್ಯಪೂರ್ಣವಾಗಿದೆ. ಮೊದಲು ಇವರು ಕವನ ಸಂಕಲನದ ಮೂಲಕ ಸಾಹಿತ್ಯ ಕ್ಷೇತ್ರವನ್ನು ಪ್ರವೇಶ ಮಾಡಿದರು ಕೂಡಾ, ನಂತರ ದಿನಗಳಲ್ಲಿ ಕಾದಂಬರಿಯನ್ನೇ ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಂಡರು. ಅಂದು ಕಾದಂಬರಿಯು ಜನರ ಆಸಕ್ತಿಯ ಕೇಂದ್ರಬಿಂದು ಆಗಿತ್ತು. ಅಷ್ಟೇ ಅಲ್ಲದೇ ಕುಸುಮಾಕರರಿಗೆ ತಾವು ಹೇಳಬೇಕೆಂದಿರುವ ಹೊಸ ಹೊಸ ಸಂವೇದನೆಯ ವಿಚಾರಗಳನ್ನು ಜನರಿಗೆ ತಲುಪಿಸಲು ಎಲ್ಲರ ಮೆಚ್ಚುಗೆಯನ್ನು ಪಡೆದುಕೊಂಡಿರುವ ಇಂದಿಗೂ ಎಲ್ಲರ ಆಸಕ್ತಿಯ ಕೇಂದ್ರಬಿಂದುವಾಗಿರುವ ಕಾದಂಬರಿಯ ಮೂಲಕವೇ ಇವರಿಗೆ ತಮ್ಮ ಹೊಸ ಹೊಸ ಚಿಂತನೆಗಳನ್ನು ತೆರೆದಿಡಲು ಸಾಧ್ಯವಾಯಿತು.

ಕುಸುಮಾಕರ ದೇವರಗೆಣ್ಣೂರರು ಬರೆದಂತಹ ಕಾದಂಬರಿಗಳು ಐದು ಇದ್ದರು, ಪ್ರತಿಯೊಂದು ಕಾದಂಬರಿಗಳು ವಿಶಿಷ್ಟತೆಯಿಂದ ಕೂಡಿವೆ. ಆದರೂ ಕೂಡಾ ಕನ್ನಡ ಸಾಹಿತ್ಯದಲ್ಲಿ ಚರ್ಚೆ ಅಷ್ಟಾಗಿ ನಡೆಯದೆ ಕೆಲವೊಂದು ವಿಮರ್ಶೆಗಳನ್ನು ಹೊರತು ಪಡಿಸಿದರೆ ಇನ್ನುಳಿದವುಗಳು ಎಲೆಮರದ ಕಾಯಿಯಂತೆ ಉಳಿದು ಬಿಟ್ಟಿವೆ ಎಂದರೆ ತಪ್ಪಾಗಲಿಕ್ಕಿಲ್ಲ. ಸಿ.ಎನ್.ರಾಮಚಂದ್ರನ್‌ರವರು ಇವರ ನಾಲ್ಕು ಕಾದಂಬರಿಗಳ ಕುರಿತು ಸಂಕ್ಷಿಪ್ತ ಚರ್ಚೆ ಮಾಡಿ ಆ ಕೃತಿಗಳ ಮೇಲೆ ಪಕ್ಷಿನೋಟ ಬೀರಿದ್ದಾರೆ. ಡಾ.ರಹಮತ್ ತರೀಕೆರೆ ಅವರು 'ಜಾಗತೀಕರಣಕ್ಕೆ ಪ್ರತಿಕ್ರಿಯೆಯಾಗಿ' ಎಂಬ ಶೀರ್ಷಿಕೆಯಡಿಯಲ್ಲಿ ಕುಸುಮಾಕರರ ಕಾದಂಬರಿಗಳ ಬಗ್ಗೆ ಲೇಖನ 'ಮಯೂರ' ಮಾಸಪತ್ರಿಕೆಯಲ್ಲಿ ಬಂದಿದೆ. ಇಷ್ಟೇ ಅಲ್ಲದೆ ಇತ್ತೀಚೆಗೆ ಪ್ರೊ.ಜಿ.ವೆಂಕಟಸುಬ್ಬಯ್ಯ ಅವರು 'ಗತಿಪ್ರಜ್ಞೆ' ಎಂಬ ಪುಸ್ತಕದಲ್ಲಿ ಮೂರು ಕಾದಂಬರಿಗಳ ಬಗ್ಗೆ ಸಂಕ್ಷಿಪ್ತ

ಪರಿಚಯ ಮಾಡಿಕೊಟ್ಟಿದ್ದಾರೆ. ಇವರ ಐದು ಕಾದಂಬರಿಗಳಲ್ಲಿ ಕೇವಲ `ನಾಲ್ಕನೆಯ ಆಯಾಮ`ವನ್ನೇ ಕೇಂದ್ರವಾಗಿಟ್ಟುಕೊಂಡು ಬರೆದಂತಹ ವಿಮರ್ಶೆಗಳೆಂದರೆ, ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ ಅವರು ತಮ್ಮ ಪ್ರಜ್ಞಾಪ್ರವಾಹ ತಂತ್ರ ಎಂಬ ಪುಸ್ತಕದಲ್ಲಿ ಈ ಕೃತಿಯ ತಂತ್ರದ ಬಗ್ಗೆ ಮಾತ್ರ ವಿಶ್ಲೇಷಣೆ ಮಾಡಿದ್ದಾರೆ. ಅಷ್ಟೇ ಅಲ್ಲದೆ ಶಾಂತಿನಾಥ ದೇಸಾಯಿ ಅವರು `ನಾಲ್ಕನೆಯ ಆಯಾಮ`ವನ್ನು ಆಧುನಿಕ ಮಾನಸ ಶಾಸ್ತ್ರದ ದೃಷ್ಟಿಯಿಂದ ಅಭಿವ್ಯಕ್ತಿಗೊಳಿಸಿದ್ದಾರೆ. ಹಾಗೂ ಡಾ.ಕೆ.ವಿಜಯಶ್ರೀ `ಕನ್ನಡ ನವ್ಯ ಕಾದಂಬರಿಗಳು` ಎಂಬ ಪುಸ್ತಕದಲ್ಲಿ ಈ ನಾಲ್ಕನೆಯ ಆಯಾಮ ಕಾದಂಬರಿ ಆಧುನಿಕ ಸಂದರ್ಭದಲ್ಲಿ ತೀರ ಪೇಲವ ಕೃತಿ ಎಂಬುದನ್ನು ವಿಮರ್ಶೆ ಮಾಡಿದ್ದಾರೆ. ಗಿರಡ್ಡಿ ಗೋವಿಂದರಾಜರು ತಮ್ಮ ಕಾದಂಬರಿಯ `ವಸ್ತು ಮತ್ತು ತಂತ್ರ` ಎಂಬ ಪುಸ್ತಕದಲ್ಲಿ ಈ ಕೃತಿಯ ವಸ್ತು ಪ್ರಜ್ಞಾಪ್ರವಾಹ ತಂತ್ರಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟು ಈ ಕಾದಂಬರಿಯನ್ನು ವಿಮರ್ಶಿಸಿದ್ದಾರೆ. ಇಷ್ಟನ್ನು ಹೊರತುಪಡಿಸಿದರೆ ಬೇರೆ ಯಾವುದೇ ವಿಮರ್ಶೆಯು ಇವರ ಕೃತಿಗಳನ್ನು ಕುರಿತು ಈವರೆಗೂ ನಡೆಯದೇ ಇರುವುದು ನಮ್ಮ ಸಾಹಿತ್ಯದ ಬಹುದೊಡ್ಡ ನಷ್ಟ ಎಂದು ಹೇಳಿದರು ಕೂಡಾ ಅತಿಶಯೋಕ್ತಿಯಾಗಲಾರದು. ಇವರ ಕಾದಂಬರಿಯ ಕಥನ ಕ್ರಿಯೆಯ ಓಂದಿದ್ದ ಹೊಸ ದೃಷ್ಟಿಕೋನ ನಮ್ಮ ಮನಸ್ಸನ್ನು ಸೆಳೆಯುತ್ತದೆ. ಅಷ್ಟೇ ಅಲ್ಲದೆ ಸಮಾಜ, ವ್ಯಕ್ತಿ ಇವುಗಳ ಸಂಬಂಧಗಳನ್ನು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿ, ನಮ್ಮನ್ನು ನಾವು ಹೆಚ್ಚು ಸ್ಪಷ್ಟವಾಗಿ ಬಿಚ್ಚಿನೋಡಿಕೊಳ್ಳುವಂತೆ ಅವರ ಕೃತಿಗಳು ಮಾಡುತ್ತವೆ. ಆದರೂ ಕೂಡಾ ಸಾಹಿತ್ಯ ಲೋಕದಲ್ಲಿ ಇವರ ಚರ್ಚೆ ಅಷ್ಟಾಗಿ ನಡೆದಿಲ್ಲದಿರುವುದು ಆಶ್ಚರ್ಯ ತರಿಸುತ್ತದೆ.

ಸೃಜನಶೀಲ ಮತ್ತು ಹೊಸ ಪ್ರಯೋಗಶೀಲ ಅಭಿವ್ಯಕ್ತಿಯನ್ನು ಬೆಳೆಸಿಕೊಂಡ ಕುಸುಮಾಕರರು ನಾಲ್ಕನೆಯ ಆಯಾಮದ ವಸ್ತು ವಿನ್ಯಾಸ, ಅಭಿವ್ಯಕ್ತಿಯಲ್ಲಿ ತೀರ ಹೊಸ ಜಾಡನ್ನು ಹಿಡಿದು ಸಾಗಿರುವುದರಿಂದ, ಹಾಗೂ ಆಸಕ್ತಿ ಕುತೂಹಲವಿರುವುದರಿಂದ ಇದನ್ನು ಅಧ್ಯಯನಕ್ಕೆ ಆರಿಸಿಕೊಂಡಿದ್ದೇನೆ. ಅಷ್ಟೇ ಅಲ್ಲದೆ ಇದರಲ್ಲಿ ಮನೋವಿಶ್ಲೇಷಣೆಯು ಯಾವ ರೀತಿಯಾಗಿ ಮೂಡಿಬಂದಿದೆ. ದುರ್ಬಲ ನಾಯಕನನ್ನು ಕಥೆಯ ಕೇಂದ್ರವ್ಯಕ್ತಿಯನ್ನಾಗಿ ಮಾಡಿಕೊಂಡು ಅವನ ಮನಸ್ಸಿನ ವಿಶ್ಲೇಷಣೆ, ಕುಟುಂಬ ಹಾಗೂ ವ್ಯಕ್ತಿಪ್ರಜ್ಞೆಯನ್ನು ಕಟ್ಟಿಕೊಡುವುದರ ಮೂಲಕ ವಸ್ತುವಿಗೆ ತಕ್ಕ ಹಾಗೆ ತಂತ್ರವನ್ನು ಬಳಸಿದ ರೀತಿ ಇವೇ ಮೊದಲಾದ ಅಂಶಗಳನ್ನು ಈ ಅಧ್ಯಯನದಲ್ಲಿ ಚರ್ಚಿಸುವುದು ನನ್ನ ಉದ್ದೇಶವಾಗಿದೆ.

ಅಷ್ಟೇ ಅಲ್ಲದೇ ಇಂದಿನ ಕಾಲೇಜು ವಿದ್ಯಾರ್ಥಿಗಳ ವರ್ತನೆಯ ಹಿನ್ನೆಲೆಯಲ್ಲಿ ಇದು ಯಾವ ರೀತಿಯಾಗಿ ಸೂಕ್ಷ್ಮದೃಷ್ಟಿ ಬೀರಿದೆ ಎಂಬುದರ ಬಗ್ಗೆ ಅಧ್ಯಯನ ಮಾಡುವುದು ನನ್ನ ಉದ್ದೇಶವಾಗಿದೆ.

ಸ್ವರೂಪ :

ಕುಸುಮಾಕರರ `ನಾಲ್ಕನೆಯ ಆಯಾಮ`ವನ್ನು ಮುಖ್ಯ ಕೇಂದ್ರವನ್ನಾಗಿಟ್ಟುಕೊಂಡು ಚರ್ಚಿಸುವುದು ನನ್ನ ಮುಖ್ಯ ಉದ್ದೇಶವಾಗಿದೆ. ಅಧ್ಯಯನಕ್ಕೆ ಇರುವ ಸ್ವರೂಪವನ್ನು ಹೇಳುತ್ತಾ ನನ್ನ ಅಧ್ಯಯನಕ್ಕಿರುವ ಇತಿಮಿತಿ ಸೂಚಿಸಲಾಗಿದೆ. ಈ ಅಧ್ಯಯನದ ಸ್ವರೂಪವನ್ನು ಹೀಗೆ ವರ್ಗೀಕರಿಸಿಕೊಂಡಿದ್ದೇನೆ.

೧. [ಕಾದಂಬರಿಯ ಸಮಕಾಲೀನತೆ.]

೨. ನಾಲ್ಕನೆಯ ಆಯಾಮದ ವಿವಿಧ ಅಧ್ಯಯನಗಳು.

a. [ಕಾದಂಬರಿಯ ಇತಿವೃತ್ತ]

b. [ಕಾದಂಬರಿಯ ಆಶಯ]

c. [ಕಾದಂಬರಿಯ ಪಾತ್ರ ವೈವಿಧ್ಯ]

d. [ಕಾದಂಬರಿಯ ಭಾಷೆ ಮತ್ತು ಶೈಲಿ]

ಇವುಗಳನ್ನು ಸ್ವರೂಪದಲ್ಲಿ ಚರ್ಚಿಸಿದ್ದೇನೆ.

ಮೊದಲನೆಯ ವರ್ಗೀಕರಣದಲ್ಲಿ ಕುಸುಮಾಕರರ ಕಾದಂಬರಿಗಳ ಮೇಲೆ ಅಂದಿನ ಸಮಕಾಲೀನ ನವ್ಯ ಕಾದಂಬರಿಕಾರರ ಪ್ರಭಾವ ಯಾವ ರೀತಿಯಾಗಿ ಬೀರಿದೆ ಹಾಗೂ ಅವರೆಲ್ಲರಿಗಿಂತ ಯಾವ ರೀತಿಯಲ್ಲಿ ಇವರ ಕಾದಂಬರಿಗಳು ಭಿನ್ನ ರೀತಿಯಾಗಿ ನಿಲ್ಲುತ್ತವೆ ಎಂಬುದನ್ನು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕಾದಂಬರಿಯ ವಿವಿಧ ಅಧ್ಯಯನವನ್ನು ಹಲವು ವರ್ಗೀಕರಣದ ಮೂಲಕ ಹೇಳಲಾಗಿದೆ.

ಮೊದಲನೆಯ ವರ್ಗೀಕರಣವು ಕುಸುಮಾಕರರ ನಾಲ್ಕನೆಯ ಆಯಾಮ ಕಾದಂಬರಿಯನ್ನು ಸಂಕ್ಷಿಪ್ತವಾಗಿ ಹೇಳಲು ಪ್ರಯತ್ನ ಮಾಡಲಾಗಿದೆ.

ಎರಡನೆಯ ವರ್ಗೀಕರಣದಲ್ಲಿ ಕುಸುಮಾಕರರು ಈ ನಾಲ್ಕನೆಯ ಆಯಾಮ ಕಾದಂಬರಿಯು ಕೃತಿ ಮತ್ತು ಕೃತಿಕಾರರನ್ನು ಹಿನ್ನೆಲೆಯಾಗಿಟ್ಟುಕೊಂಡು ಅವರ ಒಟ್ಟು ಆಶಯದ ಅಡಿಯಲ್ಲಿ ಈ ಆಕೃತಿ ಯಾವ ರೀತಿಯಾಗಿ ಮೂಡಿಬಂದಿದೆ ಎಂಬುದನ್ನು ಚರ್ಚಿಸಲಾಗಿದೆ. ಮೂರನೆಯ ವರ್ಗೀಕರಣದಲ್ಲಿ ಕುಸುಮಾಕರರ ನಾಲ್ಕನೆಯ ಆಯಾಮ ಕಾದಂಬರಿಯಲ್ಲಿ ಬರುವ ಪಾತ್ರಗಳು ಅವರ ಸಂಭಾಷಣೆ ಮತ್ತು ಆ ಪಾತ್ರಗಳು ಈ ಕಾದಂಬರಿಯ ಮೂಲಕ ಓದುಗರಿಗೆ ಏನನ್ನು ಹೇಳಲು ಬಯಸುತ್ತವೆ ಎಂಬುದನ್ನು ಗುರುತಿಸಲು ಪ್ರಯತ್ನ ಮಾಡಲಾಗಿದೆ.

ನಾಲ್ಕನೆಯ ವರ್ಗೀಕರಣದಲ್ಲಿ ಆ ಕಾದಂಬರಿಯ ಭಾಷೆ ಮತ್ತು ಶೈಲಿಯ ಬಗ್ಗೆ ಹೇಳಲಾಗಿದೆ ಈ ಕಾದಂಬರಿಯಲ್ಲಿ ಕುಸುಮಾಕರರು ಯಾವ ಭಾಷೆ ಬಳಸಿದ್ದಾರೆ ಎಂಬುದನ್ನು ಹೇಳುತ್ತಾ ಸಂಭಾಷಣೆಯ ಕನಸಿನ ಸ್ವಾರಸ್ಯ ವಿವರಿಸಿ ಅವುಗಳ ಸಾರ್ಥಕತೆಯನ್ನು ಗುರುತಿಸಲಾಗಿದೆ. ಕಾದಂಬರಿಯಲ್ಲಿ ಬಳಸಲಾದ ಹಿಂದಿ ಕವನದ ತುಣುಕುಗಳನ್ನು ಬರವಣಿಗೆಯ ಶೈಲಿಯನ್ನು ಗುರುತಿಸಲು ಪ್ರಯತ್ನ ಮಾಡಲಾಗಿದೆ.

ವ್ಯಾಪ್ತಿ :

ಕುಸುಮಾಕರ ದೇವರಗೆಣ್ಣೂರ ಅವರ 'ಮುಗಿಯದ ಕತೆ', 'ನಾಲ್ಕನೆಯ ಆಯಾಮ', ''ಸಿರಿದ್ವಯಿ', 'ಘರಿಘ', 'ಬಯಲು - ಬಸಿರು' ಈ ಐದು ಕಾದಂಬರಿಗಳು ಪ್ರಕಟಗೊಂಡಿವೆ. ಇವು ಸಾಹಿತ್ಯದಲ್ಲಿ

ಸ್ವಲ್ಪಮಟ್ಟಿಗೆ ಚರ್ಚೆಯಾಗಿದ್ದರೂ ಕೂಡಾ ನಾಲ್ಕನೆಯ ಆಯಾಮ ಕಾದಂಬರಿಯ ವೈಶಿಷ್ಟ್ಯ ಮತ್ತು ವೈವಿಧ್ಯತೆ ಮತ್ತು ಸಾಹಿತ್ಯ ಲೋಕದಲ್ಲಿ ಅದು ವ್ಯಾಪ್ತಿಸಿರುವ ಬಗೆಯನ್ನು ಅಧ್ಯಯನದ ವ್ಯಾಪ್ತಿಯಲ್ಲಿ ಹೇಳಲಾಗಿದೆ.

ನಾಲ್ಕು ಕಾದಂಬರಿಗಳ ಸಂಕ್ಷಿಪ್ತ ವಿವರ ಈ ರೀತಿಯಾಗಿದೆ.

೧. ಮುಗಿಯದ ಕಥೆ :

ಒಬ್ಬ ಸಾಮಾನ್ಯ ವಿದ್ಯಾರ್ಥಿಯು ಕೈಗೆ ನಿಲುಕದಂತಹ ಆಸೆ ಆಕಾಂಕ್ಷೆಗಳಿಂದ ಪ್ರಚೋದಿತನಾಗುತ್ತಾನೆ. ಆದರೆ ಯಾವುದು ಕೈಗೂಡುವುದಿಲ್ಲ. ಕಾಲ ಕಳೆದ ಹಾಗೆ ಹೈಸ್ಕೂಲ್ ಶಿಕ್ಷಕನಾಗುತ್ತಾನೆ. ಮದುವೆಯಾಗಿ ಮಕ್ಕಳಾಗುತ್ತವೆ. ಸಮಾಜದಲ್ಲಿ ಅಧಿಕಾರ - ಪ್ರತಿಷ್ಠೆಗಳನ್ನು ಪಡೆಯುತ್ತಾನೆ. ಆದರೆ ಗಂಡ - ಹೆಂಡರಲ್ಲಿ ವಿರಸ ಉಂಟಾಗಿ ಹೆಂಡತಿಯಿಂದ ದೂರವಾಗುವುದನ್ನು ಈ ಕಾದಂಬರಿ ಚಿತ್ರಿಸುತ್ತದೆ.

೨. ನಿರಿಂದ್ರಿಯ :

ಮಧ್ಯಮ ವರ್ಗದ ಒಬ್ಬ ವ್ಯಕ್ತಿಯ ಹತಾಶೆಯ ಜೀವನದ ಕಥೆ ಎಂದು ನೋಡಬಹುದು. ನಾಳೆ ಬದುಕಿನ ಬಗ್ಗೆ ಹೆಚ್ಚು ಹೆಚ್ಚಾಗಿ ಚಿಂತಿಸುತ್ತಾ ಇಂದಿನ ಸಂತೋಷದ ದಿನಗಳನ್ನು ಸಂಪೂರ್ಣವಾಗಿ ಕಳೆದುಕೊಳ್ಳುವ ಮಧ್ಯಮವರ್ಗದ ವ್ಯಕ್ತಿಯ ಒಂಟಿತನ, ಹತಾಶೆ, ಬದುಕಿನ ಬಗ್ಗೆ ನಿರಾಶೆ ತೋರಿಸುವ ಕಥೆಯಾಗಿ ಮೂಡಿಬಂದಿದ. ಕೇಂದ್ರ ಪಾತ್ರನಾದ ರೊಳ್ಳಿ ಮುಂಬಯಿಯಂತಹ ನಗರದಲ್ಲಿ ನಿವೃತ್ತಿಯಾಗುವುದರೊಂದಿಗೆ ಕಥೆ ಪ್ರಾರಂಭವಾಗುತ್ತದೆ. ಕಥಾನಾಯಕನಾದ ರೊಳ್ಳಿಯು ಅತಿ ಕಷ್ಟದಿಂದ ಕಲಿತು ಎಲ್ಲ ಅವಮಾನವನ್ನು ಸಹಿಸಿಕೊಂಡು ಕಾರಕೂನ ವೃತ್ತಿಯನ್ನು ಗಿಟ್ಟಿಸಿಕೊಳ್ಳುತ್ತಾನೆ. ವಯಸ್ಸಿಗನುಗುಣವಾಗಿ ಇರುವಂತಹ ಎಲ್ಲ ಆಸೆ ಆಕಾಂಕ್ಷೆಗಳನ್ನು ಅದುಮಿಡುತ್ತಾ ಕೊನೆಗೆ ಪತ್ನಿಯನ್ನು ಸೇರದಂತೆ ಯಾರೊಡನೆಯೂ ನಿಕಟ ಸಂಬಂಧವನ್ನು ಸ್ಥಾಪಿಸಿಕೊಳ್ಳಲಾಗದೆ ಎಲ್ಲದರಿಂದಲೂ ತನ್ನನ್ನು ನಿಯಂತ್ರಣಗೊಳಪಡಿಸುತ್ತಾನೆ. ನಿವೃತ್ತಿಯಾದ ಮೇಲೆ ಮುಂದೇನು? ಎಂಬ ಚಿಂತೆ ಕಾಡತೊಡಗುತ್ತದೆ. ನನ್ನ ಬದುಕಿನಲ್ಲಿ ಯಾವುದನ್ನು ಪಡೆಯದೆ ಜೀವನವನ್ನು ನಿರರ್ಥಕವಾಗಿ ಕಳೆದೆನ್ನಲ್ಲಾ ಎಂಬ ಭಾವನೆಯಿಂದ ತತ್ತರಿಸಿ, ಈಗ ಅದನ್ನು ಪಡೆದುಕೊಳ್ಳಬೇಕೆಂಬ ಬಯಕೆ ಪಡುವ ಕಥಾನಾಯಕನು, ತಾನು ತನ್ನ ಬದುಕನ್ನು ನಿರಿಂದ್ರಿಯನ್ನಾಗಿ ಕಳೆದುಬಿಟ್ಟೆ ಎಂದುಕೊಳ್ಳುತ್ತಾನೆ.

೩. ಪರಿಘ :

ಈ ಕಾದಂಬರಿಯಲ್ಲಿ ಸಹಜವಾಗಿ ಮನೆಯ ಪರಿಸರ ಕೌಟುಂಬಿಕ ಹಿನ್ನೆಲೆಯಾಗಿ ಮೂರು ಬೇರೆ ಬೇರೆ ಮನಸ್ಸುಗಳುಳ್ಳ ಒಂದೇ ಶಾಲೆಯಲ್ಲಿ ಕಲಿಯುವ ಗೆಳೆಯರಾದಂತಹ ಅರವಿಂದ, ಅಜೇಯ ಮತ್ತು ವಿನಯ ಎಂಬ ವಿದ್ಯಾರ್ಥಿಗಳು ಮುಂದೆ ಈ ಮೂರು ಪಾತ್ರಗಳು ಸಮಾಜದಲ್ಲಿ ಗುರುತಿಸುವಿಕೆಗಾಗಿ ಯಾವ ರೀತಿಯಾಗಿ ನಿರಂತರ ಹೋರಾಟ ನಡೆಸುತ್ತಾರೆ ಎಂಬುದನ್ನು ಈ ಕೃತಿ ತಿಳಿಸಿಕೊಡುತ್ತದೆ.

೪. ಬಯಲು - ಬಸಿರು :

ನಾರ್ಮನ್ ಎಂಬ ಅಮೆರಿಕಾ ಸಂಜಾತ ಶ್ರೀಮಂತ ಯುವಕ ತಂದೆ ತಾಯಿಗಳ ಪ್ರೀತಿ ಮತ್ತು ಕಾಳಜಿಯಿಂದ ವಂಚಿತನಾಗಿ ಬದುಕಿನಲ್ಲಿ ವೈರಾಗ್ಯ ತಾಳಿ, ತನ್ನ ನೆಲವಾದ ಅಮೇರಿಕೆಯನ್ನು ಬಿಟ್ಟು, ಭಾರತಕ್ಕೆ ಆಧ್ಯಾತ್ಮವನ್ನು ಅರಸುತ್ತಾ ಬರುತ್ತಾನೆ. ಇಲ್ಲಿಯೇ ಅವತಾರ ಪುರುಷನಂತೆಯೂ, ಮಹಾನ್ ಸಾಧಕನಂತೆಯೂ ನಿರ್ಮಾಣಗೊಂಡುಬಿಡುತ್ತಾನೆ. ಆದರೆ ನಂತರ ಜಾಗತೀಕರಣ, ಅಣ್ವಸ್ತ್ರ ನೀತಿ, ಮುಕ್ತ ವ್ಯಾಪಾರ ನೀತಿ, ಬಾಂಬು, ಯುದ್ಧ ಮುಂತಾದ ಸಂದಿಗ್ಧತೆಯ ಮಧ್ಯೆಯೂ ಹೇಗೆ ತನ್ನ ಮಾನಸಿಕ ಶಾಂತಿಯನ್ನು ಕಾಪಾಡಿಕೊಳ್ಳಬಲ್ಲ ಎಂಬುದನ್ನು ಕಾದಂಬರಿಯುದ್ದಕ್ಕೂ ಸ್ಫುಟವಾಗಿ ಚಿತ್ರಿತವಾಗಿದೆ.

ಈ ರೀತಿಯಾಗಿ ಕುಸುಮಾಕರ ದೇವರಗೆಣ್ಣೂರರ ಸಾಹಿತ್ಯ ಕೃಷಿ ವಿಪುಲವಾಗಿಲ್ಲದಿದ್ದರು ಕೂಡಾ ಬರೆದಂತಹ ಈ ಕಾದಂಬರಿಗಳು ತುಂಬಾ ವೈವಿಧ್ಯಪೂರ್ಣದಿಂದ ಕೂಡಿದೆ. ಅವರಲ್ಲಿಯೂ ಇವರ ನಾಲ್ಕನೆಯ ಆಯಾಮ ಕಾದಂಬರಿಯ ತಲಸ್ಪರ್ಶಿ ಅಧ್ಯಯನ ಮಾಡುವ, ತನ್ಮೂಲಕ ಕುಸುಮಾಕರ ಸಾಹಿಕ ಒಲವು ನಿಲುವುಗಳನ್ನು ವಿವೇಚಿಸುವುದನ್ನು ಅಧ್ಯಯನದ ವ್ಯಾಪ್ತಿಯಾಗಿರಿಸಿಕೊಳ್ಳಲಾಗಿದೆ.

ಅಧ್ಯಾಯ ಎರಡು

ಕುಸುಮಾರಕರ ದೇವರಗೆಣ್ಣೂರ ಮತ್ತು ಸಮಕಾಲೀನ ಕಾದಂಬರಿ ಪ್ರಪಂಚ

ಅಧ್ಯಾಯ ಎರಡು

ಕುಸುಮಾಕರರ ದೇವರಗೆಣ್ಣೂರ ಮತ್ತು ಸಮಕಾಲೀನ ಕಾದಂಬರಿ ಪ್ರಪಂಚ

ಒಂದು ಸಂಪ್ರದಾಯವಾಗಿ ರೂಪುಗೊಂಡ ಈ ಕಾದಂಬರಿ ಮಾರ್ಗವು ಕೆಲವೊಂದು ಉತ್ತಮ ಕೃತಿಗಳನ್ನು ಕೊಟ್ಟು, ನಂತರ ತನ್ನ ಸಮಕಾಲೀನ ಅವಶ್ಯಕತೆಗಳನ್ನು ಪೂರೈಸುವ ಶಕ್ತಿ ಕಳೆದುಕೊಳ್ಳುತ್ತದೆ. ಆಗ ಅದಕ್ಕೆ ಪ್ರತಿಕ್ರಿಯೆಯಾಗಿ ಹೊಸ ರೀತಿಯ ಬರವಣಿಗೆ ಚಲಾವಣೆಗೆ ಬರುತ್ತದೆ. ಅಷ್ಟೇ ಅಲ್ಲದೆ, ಜಡ್ಡುಗಟ್ಟಿ ಹೋದ ಹಳೆಯ ಸಂಪ್ರದಾಯಗಳಿಗೆ ಹೊಸ ತಿರುವನ್ನು ಕೊಡಲು ಹಾಗೂ ಬದಲಾದಂತಹ ಸಾಮಾಜಿಕ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವಂತಹ ಹೊಸ ದೃಷ್ಟಿಕೋನವುಳ್ಳ ಮತ್ತು ಮೌಲ್ಯಗಳುಳ್ಳ ಕಾದಂಬರಿಗಳನ್ನು ನೀಡುವುದು ಅನಿವಾರ್ಯ ಕೂಡಾ ಆಗಿದೆ.

ಪ್ರಸ್ತುತ ಅಧ್ಯಯನಕ್ಕೆ ಅನುಗುಣವಾಗಿ ನಾನು ೧೯೫೦-೭೫ರವರೆಗಿನ ಒಂದು ಸಿಮೀತ ಕಾಲಾವಧಿಯ ಕಾದಂಬರಿಗಳ ಅಧ್ಯಯನದ ಮೂಲಕ ಅಂದಿನ ಸಮಕಾಲೀನ ಪರಿಸರವನ್ನು ಚರ್ಚೆ ಮಾಡುತ್ತಿದ್ದೇನೆ. ಈ ಕಾಲಾವಧಿಯಲ್ಲಿ ಬರುವ ಕಾದಂಬರಿಕಾರರು ನವೋದಯ ಪ್ರಗತಿಶೀಲ ಕಾಲಘಟ್ಟದಲ್ಲಿ ಬರೆಯುತ್ತಿದ್ದ ಕಾದಂಬರಿಕಾರರಿಗಿಂತ ಭಿನ್ನ ಮನೋಭಾವದ ಮೂಲಕ ಕಾದಂಬರಿಗೆ ಹೊಸ ತಿರುವನ್ನು ಕೊಟ್ಟರು. ನವ್ಯದವರು ತಳೆದ ವಿಭಿನ್ನ ಧೋರಣೆಯನ್ನು ಆಯಾ ಕಾದಂಬರಿಗಳ ಇಲ್ಲವೇ ಕೃತಿಕಾರರ ಮನೋಭೂಮಿಕೆಯ ಹಿನ್ನೆಲೆಯಲ್ಲಿ ಚರ್ಚೆ ಮಾಡಬಹುದಾಗಿದೆ.

ಯಾವುದೇ ಸಾಹಿತ್ಯ ಪರಂಪರೆಯಾಗಲೀ ಕಾಲಕ್ಕೆ ತಕ್ಕಂತೆ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಾ, ಸಮಕಾಲೀನ ಜಗತ್ತಕ್ಕೆ ರೂಪುಗೊಳ್ಳುತ್ತಾ ಹೋಗುವುದು ಸರಿಯಷ್ಟೆ! ಯಾವುದೇ ಹೊಸ ಕಾದಂಬರಿ ಮಾರ್ಗವು ಹಳೆಯದರ ಮುಂದುವರಿದ ರೂಪವೇ ಆಗಿರುತ್ತದೆ. ಆದರೆ ಹಳೆಯದಕ್ಕಿಂತ ಸ್ವರೂಪದಲ್ಲಿ,

[illegible]

[illegible]

[illegible]

[illegible]

[illegible]

ವ್ಯತ್ಯಾಸವಾಗಿರುತ್ತದೆ ಅಷ್ಟೇ. ಅಲ್ಲದೆ, ಹೊಸ ಪ್ರಯೋಗಗಳೆಲ್ಲ ಪರಂಪರೆಯ ತಳಹದಿಯ ಮೇಲೆಯೇ ನಡೆದಿರುತ್ತವೆ. ಸತ್ವಶಾಲಿ ಪರಂಪರೆಯನ್ನು ರೂಪಿಸಬಲ್ಲಂಥ ಕಾದಂಬರಿಕಾರರು ಹುಟ್ಟಿಕೊಂಡದ್ದು ೧೯೩೦ರ ದಶಕದಲ್ಲಿ ಇದರಲ್ಲಿ ಅ.ನ.ಕೃ, ಶಿವರಾಮ ಕಾರಂತರು ಪ್ರಮುಖರು. ಅ.ನ.ಕೃ ಕನ್ನಡಿಗರಲ್ಲಿ ಒಂದು ಓದುವ ಜನಪ್ರಿಯ ಪರಂಪರೆಯನ್ನು ನಿರ್ಮಿಸಿದರು ಹಾಗೂ ಆ ಪರಂಪರೆಯನ್ನು ಮುಂದುವರಿಸಿ ಸತ್ವಯುತ ಕೃತಿಗಳನ್ನು ಕೊಟ್ಟವರು.

ಆದರೆ ಆದರ್ಶದಂತಹ ಮೌಲ್ಯಗಳಿಂದ ದೂರನಿಂತು ಶುದ್ಧ ಜೀವನಾನುಭವವನ್ನೇ ಕೊಟ್ಟ ಶಿವರಾಮ ಕಾರಂತರು ಕನ್ನಡಕ್ಕೆ ಅಮೂಲ್ಯವಾದ ಕಾದಂಬರಿಗಳನ್ನು ನೀಡಿದ್ದಾರೆ. ನೋವು - ನಲಿವು, ಸುಖ - ದುಃಖಗಳ ಪುರುಷಾರ್ಥಗಳ ಪೂರ್ಣಚಿತ್ರ ಅವರ ಕಾದಂಬರಿಗಳಲ್ಲಿ ಕಾಣಸಿಕೊಳ್ಳುತ್ತವೆ. ಆದರೆ ಅವರ ಈ ಸಾಹಿತ್ಯ ಮಾರ್ಗವು ಅ.ನ.ಕೃ ಮಾಡಿದಷ್ಟು ಪ್ರಭಾವಕಾರಿಯಾಗಲಿಲ್ಲ. ಕಾರಣ ಕಾರಂತರು ಮತ್ತು ಅ.ನ.ಕೃ ಓದುಗರ ನಡುವಣ ಅಂತರ ಇದ್ದುದರ ಕಾರಣ ಕೇವಲ ಮನೋರಂಜನೆಗಾಗಿ ಓದುವರು. ಇವರಲ್ಲಿ ಕಾರಂತರನ್ನು ಅರಗಿಸಿಕೊಳ್ಳುವಷ್ಟು ಇದ್ದವರ ಸಂಖ್ಯೆ ಕಡಿಮೆಯೇ. ಬರವಣಿಗೆ ಗೊತ್ತಿದ್ದಷ್ಟು ಮಾತ್ರದಿಂದಲೇ ಅ.ನ.ಕೃ ಪ್ರಭಾವದಿಂದಾಗಿ ಲೇಖಕರಾದವರು ಇವರ ಸಮಕಾಲೀನರು. ಆದರೆ, ಇವರು ಎರಡನೆಯ ದರ್ಜೆಯ ವೃತ್ತಿ ಕಾದಂಬರಿಕಾರರು ಎಂಬುದನ್ನು ನಾವು ಮರೆಯುವಂತಿಲ್ಲ.

ಕಾರಂತರನ್ನು ಓದಿ ಮೆಚ್ಚಿಕೊಂಡ ಇನ್ನೊಂದು ವರ್ಗದ ಓದುಗರು ಕೇವಲ ಬುದ್ಧಿವಂತರಷ್ಟೇ ಅಲ್ಲದೇ ಪಾಶ್ಚಿಮಾತ್ಯ ಸಾಹಿತ್ಯವನ್ನು ಓದಿಕೊಂಡಿದ್ದರು. ಅದರಿಂದ ಪ್ರಭಾವಿತರಾಗಿದ್ದವರು. ಸಾಮಾಜಿಕ ಬದಲಾವಣೆಗಳು ಹೊಸ ಪರಿಸರದಿಂದಾಗಿ ಉಂಟಾದ ಸಂವೇದನೆ, ವಸ್ತುಸ್ಥಿತಿ, ಸಮಕಾಲೀನ ಸಂಕೀರ್ಣತೆ ಹೀಗೆ ಕಾರಂತರ ಕಾದಂಬರಿಯಲ್ಲಿ ಒಂದು ವೈಚಾರಿಕ ಪರಂಪರೆ ಅದರ ಹಿಂದಿರುವ ಜೀವನದ ಮೌಲ್ಯಪ್ರಜ್ಞೆ ಇದೆಲ್ಲದರ ಪ್ರಭಾವ ನವ್ಯ ಲೇಖಕರ ಮೇಲಾಗಿದೆ ಎನ್ನಬಹುದು. ಕಾರಂತರು ಮೊದಲಿನಿಂದಲೇ ವಾಸ್ತವ ಮಾರ್ಗದಲ್ಲಿ ಭಿನ್ನರೀತಿಯನ್ನು ಅನುಸರಿಸಿದವರು. ಸಮಕಾಲೀನ ಜೀವನದ ಸಮಸ್ಯೆಗಳನ್ನು ಆಮೂಲಾಗ್ರವಾಗಿ ವಾಸ್ತವತೆಯ ಬೆಳಕಿನಲ್ಲಿ ಚರ್ಚಿಸುವುದೇ ಅವರ ಉದ್ದೇಶವಾಗಿದೆ. ಇವರು ಬರೆದ ಅನೇಕ ಕಾದಂಬರಿಗಳಲ್ಲಿ "ದೇವದೂತರು" ಒಂದು ದೃಷ್ಟಿಯಿಂದ ಕನ್ನಡದಲ್ಲಿ ಅನನ್ಯ ಕೃತಿಯಾಗಿದೆ. ವಿಪರೀತವಾದ ಪುರಾಣವನ್ನಾಗಲಿ, ಲೋಕವನ್ನಾಗಲಿ ಕಲ್ಪಿಸಿಕೊಂಡು ಅದರ ಮೂಲಕ ಸಮಕಾಲೀನತೆಯ ವಿಕೃತಿಗಳನ್ನು ಟೀಕಿಸುವುದು ಈ ಮಾದರಿಯ ವೈಶಿಷ್ಟ್ಯವಾಗಿದೆ." (ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಪೃ.೯೯) ಅವರು ಯಾವ ಸಂಪ್ರದಾಯಕ್ಕೂ ಸೇರಿದವರಲ್ಲ. ಅದಕ್ಕೂ ಹೆಚ್ಚಾಗಿ ಯಾವ ಸಂಪ್ರದಾಯವನ್ನೂ ನಿರ್ಮಿಸಲಿಲ್ಲ. ತಮ್ಮ ಸಮಕಾಲೀನ ಸಾಹಿತಿಗಳ ನಡುವೆ ಕಾರಂತರು ತುಂಬಾ ವಿಶಿಷ್ಟ ವ್ಯಕ್ತಿ. ತಾವು ಆಸಕ್ತರಾದ ಎಲ್ಲ ವಿಷಯಗಳನ್ನೂ ಭಾವನಾತ್ಮಕವಾಗಿ ಮಾತ್ರವಲ್ಲದೆ ಬುದ್ಧಿಯನ್ನು ಹಚ್ಚಿ ಪರೀಕ್ಷಿಸುವುದು ಇವರ ವಿಶಿಷ್ಟತೆ. ಸಮಕಾಲೀನ ಸಮಾಜದ ಅತ್ಯಂತ ಚಿಂತನಶೀಲ ವ್ಯಕ್ತಿಗಳಲ್ಲಿ ಒಬ್ಬರಾದ ಅವರನ್ನು ನಮ್ಮ ಸಂಸ್ಕೃತಿಯ ಹೆಸರಿನಲ್ಲಿ ನಡೆಯುವ ಈ ಅವಿವೇಕಿ ವಿಷಯಗಳನ್ನು

[illegible]

ಕಾದಂಬರಿಯಲ್ಲಿ ಬರೆಯುವುದರ ಮೂಲಕ ಇದರಿಂದಲೇ ಹೊಸ ಸಮಾಜವನ್ನು ಕಟ್ಟಿ ಬೆಳೆಸುವ ಗುಣ ಅವರ ಬರವಣಿಗೆಯಲ್ಲಿ ವಿಶೇಷವಾಗಿದೆ. ಆದುದರಿಂದಲೇ, ನವೋದಯದ ಸಂದರ್ಭದಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಕುರಿತು ಬರೆಯುತ್ತಿದ್ದ ಕಾರಂತರನ್ನು ಈಗ ನಮ್ಮರಿಗೆ ಹತ್ತಿರದವರೆಂದು ಪರಿಗಣಿಸಬೇಕಾದದ್ದು ಈ ದೃಷ್ಟಿಯಿಂದಲೇ.

ಅ.ನ.ಕೃ ಸಮಕಾಲೀನರು ಹಾಗೂ ಅನಂತರ ಇವರ ಜಾಡನ್ನು ಹಿಡಿದು ನಡೆದ ಲೇಖಕರೆಲ್ಲರ ಇತ್ತೀಚಿನ ಕೃತಿಗಳು ಕಾದಂಬರಿ ಪ್ರಭೇದವನ್ನು ಹೇಗೋ ಮುಂದುವರಿಸಿಕೊಂಡು ಹೋಗುವಂತಾಗಿ ಬಂದು ಈ ಮಧ್ಯೆ ಹೊಸ ಲೇಖಕರು ಒಂದೆರಡು ಭಿನ್ನವಾದ ಕಾದಂಬರಿಗಳನ್ನು ಕೊಟ್ಟಿರುವರು. ಇವರ್ಯಾರು ಬದಲಾದ ಜೀವನಸ್ಥಿತಿ, ಕೈಗಾರೀಕರಣದ ಫಲವಾದ ನಗರಗಳ ದಾರುಣ ಬದುಕು, ಮನಶ್ಯಾಸ್ತ್ರ, ವಿಜ್ಞಾನದ ಸಂಶೋಧನೆಗಳು, ರಾಜಕೀಯ ಅಸ್ಥಿರತೆ, ಕುಟುಂಬ ಸಮಷ್ಠಿಯ ಜೀವನ, ಮೊದಲಾದ ಸಾಮಾಜಿಕ ಹಾಗೂ ಧಾರ್ಮಿಕ ಮೌಲ್ಯಗಳಲ್ಲಾದ ಏರುಪೇರುಗಳು ತಟ್ಟಿಲ್ಲ. ಬಹುಮಟ್ಟಿಗೆ ಇವರೆಲ್ಲ ಸಾಂಪ್ರದಾಯಿಕ ಮೌಲ್ಯಗಳನ್ನು ವರಿಸಿದ ಮನಸ್ಸಾದ್ದರಿಂದಲೋ ಏನೋ ಇವರ್ಯಾರು ಸಮಕಾಲೀನ ಬದುಕಿನ ಕಡೆಗೆ ಓಗೊಡಲಿಲ್ಲ. ಕಾದಂಬರಿಗೆ ನಿರೀಕ್ಷಿಸಿದ್ದಷ್ಟು ಹೊಸ ಆಯಾಮವನ್ನು ಅವರು ತಂದುಕೊಡಲಿಲ್ಲ.

ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯ ಕಾಲ ಘಟ್ಟದಲ್ಲಿ ಯು.ಆರ್.ಅನಂತಮೂರ್ತಿ, ಲಂಕೇಶ್, ಶಾಂತಿನಾಥ ದೇಸಾಯಿ, ಕೆ.ವಿ.ತಿರುಮಲೇಶ, ಜಿ.ಸದಾಶಿವ, ಆಲನಹಳ್ಳಿ ಶ್ರೀಕೃಷ್ಣ, ಸುಧಾಕರ, ಬೆಸಗರಹಳ್ಳಿ ರಾಮಣ್ಣ, ಮುಂತಾದವರ ಪ್ರವೇಶ ಆಯಿತು. ಈ ಪ್ರವೇಶವು ಕಾಲದ ಒತ್ತಡದಿಂದ ನಿರ್ಮಾಣವಾಯಿತು.

ಸ್ವಾತಂತ್ರ್ಯ ನಂತರ ಸಮಾಜ ಪ್ರತಿಯೊಬ್ಬ ಲೇಖಕನಿಗೂ ಒಂದು ಸವಾಲಾಯಿತು. ಮುಖ್ಯವಾಗಿ ಈ ಕಾಲದ ಲೇಖಕ ಎದುರಿಸಬೇಕಾಗಿ ಬಂದದ್ದು ಮೌಲ್ಯಗಳ ಸಂಘರ್ಷ ಸ್ವಾತಂತ್ರ್ಯ ಹೋರಾಟದ ಆದರ್ಶ, ಭಾವಪರವಶತೆಗಳು ಮಾಯವಾಗಿ ದೇಶ ಆಮೂಲಾಗ್ರ ಬದಲಾವಣೆಗೆ ಹಾತೊರೆದು ನಿಂತಾಗ ಸ್ವಾತಂತ್ರ್ಯ ಹೋರಾಟಗಾರರ ಹಿರಿಯ ಪೀಳಿಗೆ ಸ್ವಾತಂತ್ರ್ಯ ದೊರಕಿದ ಸಂತೃಪ್ತಿಯಿಂದ ತಟಸ್ಥವಾಗಿ ಕುಳಿತು ಬಿಟ್ಟರು. ಅಧಿಕಾರಕ್ಕೆ ಬಂದ ಜನ ಭ್ರಷ್ಟರಾದರು. ಒಂದು ಕಡೆ ಭ್ರಷ್ಟ ಅಧಿಕಾರ ವರ್ಗ, ಇನ್ನೊಂದು ಕಡೆ ಬದಲಾವಣೆಗೊಂಡ ಒಳ್ಳೆಯ ಜೀವನಕ್ಕೆ ಹಾತೊರೆದು ನಿಂತ ಜನತೆ. ಇವರೆಡರ ನಡುವೆ ಸಾಹಿತ್ಯದ ಮುಂದಿನ ಭವಿಷ್ಯಸೂಚಿ ನಿಂತಿತ್ತು.

ಸಾಮಾಜಿಕ ಮೌಲ್ಯಗಳಲ್ಲಾದ ಬದಲಾವಣೆ ಆಚಾರ - ವಿಚಾರ ಸಂಪ್ರದಾಯ ಇಡೀ ಜೀವನ ವಿಧಾನವನ್ನೇ ಬದಲಿಸಿತು. ವಿಜ್ಞಾನದ ಹೊಸ ಸಂಶೋಧನೆಗಳು ವೈಚಾರಿಕ ಕ್ಷೇತ್ರದಲ್ಲಿನ ಕ್ರಾಂತಿ. ಔದ್ಯೋಗೀಕರಣದ ತೀವ್ರ ಬೆಳವಣಿಗೆ, ನಗರೀಕರಣ, ಕೃಷಿ ಪ್ರಧಾನ ಬದುಕಿನ ಅವನತಿ ಈ ಎಲ್ಲ ಕಾರಣದಿಂದಾಗಿ ಹಳೆಯ ಮೌಲ್ಯಗಳು ಅರ್ಥಕಳೆದುಕೊಳ್ಳತೊಡಗಿದವು. ಆದರೆ ಇವುಗಳಿಂದೆಲ್ಲಾ, ಪ್ರಾಪ್ತವಾದ ಜ್ಞಾನ ಹಾಗೂ ಪಾಶ್ಚಿಮಾತ್ಯದ ಪ್ರಭಾವ. ಔದ್ಯೋಗೀಕರಣದಿಂದಾಗಿ ಬೆಳೆದ ನಗರಗಳ ಗೊಂದಲ ಜೀವನ; ನಗರಗಳಿಗೆ ಹಳ್ಳಿಗರು ವಲಸೆ ಬಂದ ಕಾರಣದಿಂದಾಗಿ ಉಂಟಾದ ಸಮಸ್ಯೆಗಳು

[illegible]

[illegible]

[illegible]

[illegible]

ಎಲ್ಲಕ್ಕೂ ನಗರಗಳಿಗೆ ಹಳ್ಳಿಗರು ವಲಸೆ ಬಂದ ಕಾರಣದಿಂದಾಗಿ ಉಂಟಾದ ಸಮಸ್ಯೆಗಳು ಎಲ್ಲಕ್ಕೂ ಮಿಗಿಲಾಗಿ ಆರ್ಥಿಕ ಸ್ವಾವಲಂಬನೆ ಸಿದ್ಧಿಸದಿರುವುದು, ನಿರುದ್ಯೋಗ ಇತ್ಯಾದಿ ಕಾರಣಗಳಿಂದಾಗಿ ವಾತಾವರಣ ಪೂರ್ತಿ ಬಿಗಿಗೊಂಡು ಸಮಾಜದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ತಲೆದೋರಿತು. ಹಳೆ ಮೌಲ್ಯಗಳಲ್ಲಿ ವ್ಯಾಪಕ ಬದಲಾವಣೆಗಳಾದವು. ಡಾರ್ವಿನ್, ಫ್ರಾಯ್ಡ್, ಮಾರ್ಕ್ಸ್ ಮೊದಲಾದವರ ವೈಚಾರಿಕ ವಿಚಾರಗಳು ಮನುಷ್ಯನ ಆಲೋಚನ ವಿಧಾನದಲ್ಲಿಯೇ ಅದ್ಭುತ ಕ್ರಾಂತಿಯನ್ನುಂಟು ಮಾಡಿತು. ಇವರ ವಿಚಾರ ಧಾರೆಗಳು ಮನುಷ್ಯ ಸಂಬಂಧಗಳನ್ನು ಹೊಸ ನೆಲೆಯಲ್ಲಿ ಅರ್ಥೈಸ ತೊಡಗಿದವು. ಇದರಿಂದಾಗಿ ಹಳೆ - ಹೊಸ ತಲೆಮಾರುಗಳ ನಡುವೆ ದೊಡ್ಡ ವೈಚಾರಿಕ ಕಂದಕ ಉಂಟಾಯಿತು.

ಜೀವನಕ್ಕೆ ಹೊಸ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕಾಗಿದೆ. ಹೊಸ ಲೇಖಕ ಈ ಸಾಮಾಜಿಕ ಸಂದರ್ಭದಿಂದ ಹೊರತಾಗಿಲ್ಲ. ಒಂದು ದಿಕ್ಕಿನಿಂದ ಮೌಲ್ಯಗಳಲ್ಲಾದ ಬದಲಾವಣೆ, ಮತ್ತೊಂದು ಕಡೆಯಿಂದ ಅಗ್ಗದ ಸಂಸ್ಕೃತಿಯ ಪ್ರಭಾವ - ಇವುಗಳಿಂದಾಗಿ ಸೃಜನಶೀಲ ಲೇಖಕ ಪರಂಪರೆಯ ಜೀವಂತಿಕೆಯನ್ನು ಉಳಿಸುವ ಹೊಣೆಗಾರಿಕೆಯನ್ನು ಸಂಸ್ಕೃತಿಯನ್ನು ರಕ್ಷಿಸುವ ಜವಾಬ್ದಾರಿಯನ್ನು ಹೊರಬೇಕಾಯಿತು.

ಇಂಥ ಪ್ರಕ್ಷುಬ್ಧ ಸಮಾಜ ನವ್ಯ ಲೇಖಕರಿಗೆ ಸವಾಲಾಯಿತು. ನವ್ಯ ಲೇಖಕ ತನ್ನ ಸುತ್ತ ಮುತ್ತಣ ಸಮಾಜದ ಈ ಪರಿಸ್ಥಿತಿಗೆ, ಈ ಬದುಕಿನ ಅದರ ಬೇಡಿಕೆಗಳಿಗೆ ಗಮನ ಕೊಡಬೇಕಾಯಿತು. ಕಾದಂಬರಿಯನ್ನು ಮೊದಲಿನ ಒಂದು ಪರಂಪರೆಯಿಂದ ಪಾರುಮಾಡಿ ಸಮಕಾಲೀನ ಜೀವನಕ್ಕೆ ಹತ್ತಿರವಾಗುವಂತಹ ಹಾಗೂ ಸಮಕಾಲೀನ ಸಮಾಜದ ಅಭಿವ್ಯಕ್ತಿ ಮಾಧ್ಯಮವಾಗಿಸುವುದು ಹೊಸ ಬರಹಗಾರನ ಕರ್ತವ್ಯವಾಯಿತು.

ಸಮಕಾಲೀನತೆ ಎನ್ನುವುದು ಬರಹಗಾರನೊಬ್ಬ ತನ್ನ ಕೃತಿಗಳ ಮೂಲಕ ಆ ಕಾಲದ ಬದುಕಿನ ವಿಷಯಗಳನ್ನು ಎಷ್ಟರ ಮಟ್ಟಿಗೆ ಶೋಧಿಸಿವೆ. ಇದು ಕೇವಲ ಬರಹಗಾರನೊಬ್ಬನ ಸಮಕಾಲೀನತೆ ಆಗಿರದೆ, ಅಂದಿನ ಸಮಸ್ಯೆ ವಿಷಯಗಳೂ ಕೂಡಾ ಬಂದು ಹೋಗುತ್ತವೆ. ಬದುಕಿನ ಬಾಹ್ಯ ಆಂತರಿಕ ಎಲ್ಲವೂ ಸಮ್ಮಿಳಿತವಾಗುವುದರೊಂದಿಗೆ ಕೃತಿಯ ಕಾಲತತ್ತ್ವ ಒಡಮೂಡುತ್ತದೆ. ಕೃತಿಯ ಸಮಕಾಲೀನತೆ ಕೃತಿಕಾರ ತಾನು ಬದುಕಿದ ರೀತಿ ನೀತಿಯಿಂದ ತಾನು ಪಡೆದುಕೊಂಡ ಸಂಗತಿಗಳನ್ನು ತನ್ನದೇ ಆದ ಒಳನೋಟಗಳ ಮೂಲಕ ಗ್ರಹಿಸಿಕೊಂಡು ಪ್ರಪಂಚಕ್ಕೆ ಹೇಗೆ ನೀಡುತ್ತಾನೆ ಎಂಬುದನ್ನು ಅವಲಂಬಿಸಿದೆ ಎಂದು ಹೇಳಬಹುದು.

ಅಂದರೆ ಸಮಕಾಲೀನವೆನ್ನಿಸಿಕೊಳ್ಳುವ ಒಂದು ಕೃತಿಯಲ್ಲಿ ಆ ಕಾಲದ ಸಾರಸರ್ವಸ್ವವೂ ಯಾವುದೇ ಪಕ್ಷಪಾತವಿಲ್ಲದೆ ಒಡಮೂಡಿ ಬರಬೇಕಾಗುತ್ತದೆ. ಬದಲಾಗುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ಸಹಜ ಪ್ರತಿಕ್ರಿಯೆಯಾಗಿ ಹುಟ್ಟಿಕೊಂಡ ನವ್ಯ ಕಾದಂಬರಿಕಾರ ಪರಂಪರೆಯು ಬಳುವಳಿಯಾಗಿ ಬಂದ ಸಿದ್ಧ ಭಾಷೆ, ಸಿದ್ಧ ಶೈಲಿ ಕಣ್ಣಿಗೆ ಕಾಣುವ ಜೀವನದ ತದ್ರೂಪ ನಕಲು ತೆಗೆಯುವುದಾಗಲೀ ನವ್ಯ ಲೇಖಕನ ಏಕಮಾತ್ರ

ಕಾಳಜಿಯಾಗಲಿಲ್ಲ. ಆದರೆ ಸಂಪೂರ್ಣವಾಗಿ ಪರಂಪರೆಯನ್ನು ಬಿಡದೆ, ಅದರೊಳಗೆ ಇದ್ದುಕೊಂಡು ಬೇರೆ ದೃಷ್ಟಿಕೋನದ ಮೂಲಕ ನಡೆಸಿದ ಸಾಂಸ್ಕೃತಿಕ ಹುಡುಕಾಟ ಅತ್ಯಂತ ಮಹತ್ವದ್ದು. ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಗಳು, ಹಳೆಯ ವಿಚಾರಗಳನ್ನು ಪ್ರಶ್ನಿಸುವ ಮನೋಭಾವನೆ, ಮೌಲ್ಯಗಳಲ್ಲಾದ ಹೊಸ ತಿರುವು, ನೈತಿಕ ಬಿಕ್ಕಟ್ಟುಗಳು, ಮನುಷ್ಯನ ವರ್ತನೆಯಲ್ಲಿ ಕಾಣಿಸಿಕೊಳ್ಳುವ ಬದಲಾವಣೆಗಳು. ಇದರಿಂದ "ಪರಂಪರೆಯೊಳಗಿನ ವ್ಯವಸ್ಥೆಯ ಕೇಂದ್ರದೆಡೆಗೆ ಒಳನೋಟಗಳು ಸಾಧ್ಯವಾಗುವುದರಿಂದ ಸಾಂಸ್ಕೃತಿಕವಾದ ಬದಲಾವಣೆಗೆ ಮುಖ್ಯವಾದ ದಾರಿ ಇದರಿಂದ ಸಾಧ್ಯವಾಗುತ್ತದೆ. ಏಕೆಂದರೆ ವ್ಯಕ್ತಿಯ ಬದುಕು, ಅವನ ಅವ್ಯಕ್ತ ಪ್ರಜ್ಞೆಯಿಂದಲೇ ನಿರ್ದೇಶಿತವಾಗುವುದರಿಂದ, ಈ ನಿರ್ದೇಶನಗಳಲ್ಲಿ ಆಗುವ ಚಲನೆಯು ಸಂಸ್ಕೃತಿಯನ್ನು ಹೊಸ ನಿಟ್ಟಿನಲ್ಲಿ ರೂಪಿಸಲು ಅನುವಾಗುತ್ತದೆ." (ಏಕ-ಅನೇಕ, ಪುಟ ೧೭) ನವೋದಯ ಕಾಲದ ಕಾದಂಬರಿಕಾರರಿಗಿದ್ದಂತಹ ನಿಶ್ಚಿತ ಮೌಲ್ಯಗಳು, ಅವುಗಳಲ್ಲಿನ ಅಚಲ ನಂಬಿಕೆ ನವ್ಯ ಲೇಖಕನಿಗಿಲ್ಲವಾದ ಪ್ರಯುಕ್ತ ಅವನು ಅನುಭವಗಳನ್ನು ಆಧರಿಸಿಯೇ ಪ್ರಜ್ಞೆಯ ಮಟ್ಟದಲ್ಲೇ ಮೌಲ್ಯಗಳ ತಾಕಲಾಟವನ್ನು ಎದುರಿಸಬೇಕಾಗುತ್ತದೆ. ಹಿಂದಿನ ಸಾಹಿತ್ಯದಲ್ಲಿ ಸಾಮಾಜಿಕ ಜೀವನ, ಸಾಮಾಜಿಕ ಸಮಸ್ಯೆಗಳು ಮುಖ್ಯವಾಗಿದ್ದರೆ ನವ್ಯ ಸಾಹಿತ್ಯದಲ್ಲಿ ಬರೆಯುತ್ತಿರುವ ತೇಜಸ್ವಿ, ಯು.ಆರ್.ಅನಂತಮೂರ್ತಿ, ರಾಘವೇಂದ್ರ ಖಾಸನೀಸ್, ಎ.ಕೆ.ರಾಮಾನುಜನ್, ಬಿ.ಸಿ.ರಾಮಚಂದ್ರಶರ್ಮರವರು ಬೇರೆ ದೃಷ್ಟಿಕೋನದ ಕಡೆಗೆ ಮುಖಮಾಡಿ ಸಾಮಾಜಿಕ ಸಮಸ್ಯೆಗಳಿಗಿಂತ ವ್ಯಕ್ತಿಯ ವೈಯಕ್ತಿಕ ಅಥವಾ ವ್ಯಕ್ತಿನಿಷ್ಠ ಸಮಸ್ಯೆಗಳ ಕಡೆಗೆ ತಿರುಗಿದರು. ತನ್ನಿಂದಲೇ ಎಲ್ಲವನ್ನೂ ಗುರುತಿಸಿಕೊಳ್ಳುತ್ತಾ, ತನಗೂ ಸಮಾಜಕ್ಕೂ ಇವರು ಸಂಬಂಧವನ್ನು ಕಂಡುಕೊಳ್ಳುತ್ತಾ ವೈಯಕ್ತಿಕ ನೆಲೆಯ ಅನುಭವಗಳನ್ನು, ಮೌಲ್ಯಗಳನ್ನು ಸಾರ್ವತ್ರಿಕ ಪರೀಕ್ಷೆಗೆ ಒಡ್ಡುತ್ತಾ ಸಮಸ್ಯೆಯನ್ನು ತಲಸ್ಪರ್ಶಿಯಾಗಿ ವಿಶ್ಲೇಷಿಸುವುದು ನೀತಿಯ ಮಟ್ಟದಲ್ಲಿ ಹಾಗೂ ಪ್ರಜ್ಞೆಯ ಮಟ್ಟದಲ್ಲಿ ಸಮಸ್ಯೆಯನ್ನು ಗುರುತಿಸುವುದು, ಅದರ ಒಟ್ಟು ಪರಿಣಾಮವನ್ನು ಕಂಡು ಹಿಡಿಯುವುದು ನವ್ಯ ಲೇಖಕರ ಕಾಳಜಿಯಾಯಿತು.

ನವ್ಯ ಲೇಖಕರಲ್ಲಿ ಅನೇಕರು ಕಾದಂಬರಿ ಕ್ಷೇತ್ರವನ್ನು ಸಣ್ಣಕತೆಯ ಮೂಲಕ ಪ್ರವೇಶಿಸಿದುದು ಒಂದು ಕುತೂಹಲಕಾರಿಯಾದ ಅಂಶವಾಗಿದೆ. ಕನ್ನಡದಲ್ಲಿ ಹೊಸ ಕಾದಂಬರಿಯ ಬೆಳೆ ನವ್ಯಕಾವ್ಯ, ಕತೆಯಷ್ಟು ಹುಲಸಾಗಿಲ್ಲವಾದರೂ ಬಂದಿರುವ ಕೆಲವೇ ಕೃತಿಗಳು ಕನ್ನಡ ಕಾದಂಬರಿಗೆ ಹೊಸ ಹಾದಿಯನ್ನು ತೋರಿಸುವ ಮಹತ್ವದ ಕೃತಿಗಳಾಗಿವೆ. ನವ್ಯ ಕಾದಂಬರಿಗಳ ಹೊಸತನಕ್ಕೂ ಅವುಗಳ ಮೌಲ್ಯ ಪ್ರಜ್ಞೆಗೂ ಸಾಮ್ಯವಿದೆ. ಮನಸ್ಸಿನ ಅನುಭವವನ್ನೇ ವಸ್ತುವಾಗಿ ಸ್ವೀಕರಿಸುವ ನವ್ಯ ಕಾದಂಬರಿಯ ನಾಯಕರು ಪರಂಪರಾಗತ ಮೌಲ್ಯಗಳನ್ನು ಇದ್ದಕ್ಕಿದ್ದಂತೆ ಒಪ್ಪಿಕೊಳ್ಳುವುದಿಲ್ಲ. ಇದು ಅವರ ಇಂಗಿತ ಮತ್ತು ತಾತ್ವಿಕ ದೃಷ್ಟಿ. ಹೊಸ ಮೌಲ್ಯಗಳನ್ನು ಶೋಧಿಸುವುದರ ಮೂಲಕ ಸಂಸ್ಕೃತಿಯ ಸ್ವರೂಪವನ್ನೇ ಬದಲಿಸಲು ನವ್ಯ ಕಾದಂಬರಿಕಾರ ಪ್ರಯತ್ನಿಸುತ್ತಾನೆ. ನವ್ಯ ಕಾದಂಬರಿ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿದರೂ ಅವನ ಅಭಿವ್ಯಕ್ತಿ ಮಾರ್ಗ ಭಿನ್ನವಾಯಿತು. ವ್ಯಕ್ತಿಯೊಬ್ಬನ ಮನಸ್ಸಿನ ಮೂಲಕ ಸಾಮಾಜಿಕ ಸಮಸ್ಯೆಗಳನ್ನು

ಗುರುತಿಸುವ ಪ್ರಯತ್ನ ನವ್ಯ ಕಾದಂಬರಿಯದಾಯಿತು. ``ನವ್ಯ ಕಾದಂಬರಿ ಗುರಿ ಕೂಡ ವಾಸ್ತವತೆಯೆ. ಆದರೆ ವಾಸ್ತವತೆಗೆ ಅದು ಕೊಡುವ ವ್ಯಾಖ್ಯೆ ಮಾತ್ರ ಬೇರೆಯಾಗಿದೆ. ವಾಸ್ತವತೆಯ ಅಸ್ತಿತ್ವ ಬಾಹ್ಯ ಜಗತ್ತಿನಲ್ಲಿರದೆ ಮನುಷ್ಯನ ಪ್ರಜ್ಞೆಯಲ್ಲಿದೆ ಎಂದು ವ್ಹರ್ಜಿನಿಯಾ ವುಲ್ಫಳ ಹೇಳಿಕೆ ವಾಸ್ತವ ಮಾರ್ಗದ ಕಾದಂಭರಿ ಮತ್ತು ನವ್ಯ ಮಾರ್ಗದ ಕಾದಂಬರಿ ಇವುಗಳ ನಡುವಿನ ಅಂತರವನ್ನು ತಿಳಿಯುವುದಕ್ಕೆ ಸಹಾಯ ನೀಡುತ್ತದೆ.``(ಅರ್ಥಲೋಕ, ಪುಟ ೧೦) ಅಲ್ಲದೆ ಈ ಕಾಲಘಟ್ಟದ ಕಾದಂಬರಿಗಳು ನವ್ಯದ ಅಂಶಗಳನ್ನು ಪ್ರತಿಪಾದಿಸಿದರೂ ಕೂಡ ಭಿನ್ನವಾಗಿವೆ. ವಾಸ್ತವದ ಸಮಸ್ಯೆಗಳ ಚಿತ್ರಣದ ಜೊತೆಗೆ ವ್ಯಕ್ತಿ ಪ್ರಜ್ಞೆಯಂತಹ ಕೇಂದ್ರ ಪ್ರಜ್ಞೆಯಲ್ಲಿ ಈ ಸಮಸ್ಯೆಗಳು ಸುತ್ತುವುದನ್ನು ನವ್ಯ ಕಾದಂಬರಿಗಳು ಪ್ರತಿಪಾದಿಸುತ್ತವೆ.

ಕನ್ನಡದ ಕಾದಂಬರಿಗಳು ಭಾವಪರವಶತೆಯಿಂದ ಪಾರಾಗುತ್ತ ವೈಚಾರಿಕ ನೆಲೆಗೆ ಹೊರಳಿ ಹೊಸತನ ರೂಪಿಸಿಕೊಳ್ಳುವಲ್ಲಿ ಶಾಂತಿನಾಥ ದೇಸಾಯಿ ಅವರ ಕೊಡುಗೆ ಅಲ್ಪವಲ್ಲ. ಕನ್ನಡದ ಪ್ರಥಮ ನವ್ಯ ಕಾದಂಬರಿ ಎನಿಸಿರುವ `ಮುಕ್ತಿ` ಈ ದೆಸೆಯಲ್ಲಿ ಅವರ ಮೊದಲ ಹೆಜ್ಜೆ. ಪಾತ್ರದ ಮನಸ್ಸಿನೊಳಗಿನಿಂದ ಜಗತ್ತನ್ನು ನೋಡುವ ನವ್ಯ ತಂತ್ರವನ್ನು ಬಳಸಿಕೊಂಡಿದ್ದಾರೆ. ಗೌರೀಶನ ಮನಸ್ಸಿನ ವ್ಯಾಪಾರಗಳೇ ಮುಖ್ಯ ವಸ್ತು. ನಡೆದು ಹೋದ ಕಾಲವನ್ನು ಅರ್ಥಮಾಡಿಕೊಂಡು ನಡೆಯುತ್ತಿರುವ ಕಾಲಮಾನವನ್ನು ರೂಪಿಸಿಕೊಳ್ಳುವ ಗೌರೀಶನ ಉದ್ದೇಶಕ್ಕನುಗುಣವಾಗಿ ಕಾದಂಬರಿಯಲ್ಲಿ ಕಾಲದ ಗತಿಯನ್ನು ನಿಯಂತ್ರಿಸುವ, ಕನ್ನಡದ ಮಟ್ಟಿಗೆ ತೀರ ಹೊಸ ತಂತ್ರವನ್ನು ಲೇಖಕರು ಬಹಳ ಸಮರ್ಥ ರೀತಿಯಿಂದ ಉಪಯೋಗಿಸಿ ಕೊಂಡಿದ್ದಾರೆ.

``ಪ್ರಯೋಗಶೀಲತೆ ದೇಸಾಯಿಯವರ ಪ್ರಮುಖ ಆಸಕ್ತಿ. ಮುಕ್ತಿಯಲ್ಲಿ ಹೊಸ ಸಂವೇದನೆಗೆ ಆಕಾರ ಕೊಡುವ ಪ್ರಯತ್ನದಲ್ಲಿ ಅವರು ಪ್ರಜ್ಞಾಪ್ರವಾಹ ತಂತ್ರವನ್ನು ಕನ್ನಡಕ್ಕೆ ತಂದರು. ಅವರ ಇನ್ನೊಂದು ಕಾದಂಬರಿಯಾದ `ವಿಕ್ಷೇಪ`ದಲ್ಲಿ ಇಂದಿನ ಯುವಕರ ವಿಕ್ಷಿಪ್ತ ಮನಸ್ಥಿತಿಯ ಚಿತ್ರಣವನ್ನು ನೀಡುತ್ತದೆ.`` (ಕನ್ನಡ ನವ್ಯ ಕಾದಂಬರಿಗಳು, ಪುಟ ೬೫) ಇವರ ಎಲ್ಲ ಕಾದಂಬರಿಗಳು ವ್ಯಕ್ತಿಯ ಅಂತರಂಗ ಶೋಧನೆಗೆ ಒತ್ತು ಕೊಡುತ್ತದೆ. ವ್ಯಕ್ತಿಯನ್ನು ಸಮಾಜಜೀವಿ ಎಂದು ನೋಡುವ ನವೋದಯ ಸಾಹಿತ್ಯಕ್ಕೂ ಮೂಲಭೂತ ವ್ಯತ್ಯಾಸವಿದೆ.

ಆಧುನಿಕ ಯುವಕನನ್ನು ಕಾದಂಬರಿಯ ಕೇಂದ್ರವಾಗಿಸಿ ಹೊಸ ದೃಷ್ಟಿಕೋನವನ್ನು ಕೊಡುವುದರೊಂದಿಗೆ ವ್ಯಕ್ತಿಯ ಪ್ರಜ್ಞೆಯ ಮೂಲಕ ಸಮಾಜವನ್ನು ತಿಳಿಯಲೆತ್ನಿಸಿದವರಲ್ಲಿ ಲಂಕೇಶರು ಕೂಡಾ ಒಬ್ಬರು. ಇವರ `ಬಿರುಕು` ಕಾದಂಬರಿ ಅಂದಿನ ಸಮಕಾಲೀನ ಒಳನೋಟಗಳನ್ನು ಕೊಡುವುದರೊಂದಿಗೆ ಇಂದಿನ ವಾಸ್ತವ ಜೀವನಕ್ಕೂ ಹತ್ತಿರವಾಗುತ್ತದೆ. ಯಾವ ವ್ಯಾಖ್ಯಾನಕ್ಕೂ ಪೂರ್ಣವಾಗಿ ಒಳಪಡದೆ ಕೊಂಚವಾದರೂ ಅವುಗಳಾಚೆಗೆ ನಿಲ್ಲುವ ಇವರ `ಬಿರುಕು` ಕಾದಂಬರಿ ಅಂದಿನ ಎಲ್ಲ ವಿಮರ್ಶಕರ ಮುಕ್ತ ಪ್ರಶಂಸೆ ಗಳಿಸಿದೆ. ಈ ಕಾದಂಬರಿಯ ನಾಯಕ ಹಳ್ಳಿಯಿಂದ ಸಂಶೋಧನೆಗೆಂದು ಪಟ್ಟಣಕ್ಕೆ ಬಂದವನು. ನಗರ ಸಮಾಜ, ಪರಿಸರ ಮತ್ತು ವ್ಯಕ್ತಿಗಳ ಜೊತೆ ಸಂಬಂಧ ಸ್ಥಾಪಿಸಲಾಗದ ಈ ನಾಯಕ ಹಳ್ಳಿಯಿಂದ ನಗರಕ್ಕೆ ಬಂದಾಗ ಆಗುವ ಮನಸ್ಸಿನ ತೊಳಲಾಟ ಬಿರುಕು ಕಾದಂಬರಿಯ ಬಸವರಾಜ ಆಧುನಿಕ ಯುವಕರ ಪ್ರತಿನಿಧಿಯಾಗಿದ್ದಾನೆ.

"'ಬಿರುಕು' ಕಾದಂಬರಿಯ ನಾಯಕ ಒಂದು ಪರಿಸರದಿಂದ ಇನ್ನೊಂದು ಪರಿಸರಕ್ಕೆ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಸುತ್ತ ಅವನಿಗೆ ಕಾಣುವುದೇ 'ಪೋಲಿ' ಜನರೇ ಆಷಾಢಭೂತಿಗಳೆ ಇಲ್ಲಿ 'ಫ್ಯಾಂಟಸಿ' ತಂತ್ರವನ್ನು ಲೇಖಕರು ಬಳಸಿಕೊಂಡಿದ್ದಾರೆ." (ಹೊಸಗನ್ನಡ ಸಾಹಿತ್ಯದ ರೂಪಗಳು, ಪುಟ ೧೬೩) ಹೊಸ ಪರಿಸರಕ್ಕೆ ಹೊಂದಿಕೊಳ್ಳಲಾರದೆ, ಅರ್ಥಪೂರ್ಣ ಸಂಬಂಧಗಳನ್ನು ಸಾಧಿಸಲಾಗದೆ ಬಸವರಾಜ ಕನಸಿನ ಲೋಕಕ್ಕೆ ಕಾಲಿಡುತ್ತಾನೆ. ಅದೂ ವಾಸ್ತವದ ಪಡಿನೆರಳಾಗಿ, ಅಲ್ಲಿನ ಅನುಭವಗಳಲ್ಲಿ ಮಾಗಿದ ಬಸವರಾಜ ಕೊನೆಗೆ ಸಮಾಜದ ಜೊತೆ ಸಾಮರಸ್ಯ ಕುದುರಿಸಿಕೊಳ್ಳುವ ಹಂತಕ್ಕೆ ಬರುತ್ತಾನೆ. 'ಶಾಂತಿನಾಥ ದೇಸಾಯಿ' ಅವರು ಹೇಳುವಂತೆ "ಬಸವರಾಜು ನಮ್ಮ ಸಮಾಜದಲ್ಲಿ ಅತ್ಯಂತ ತೀಕ್ಷ್ಣವಾಗಿ ಬೆಳೆಯುತ್ತಿರುವ 'ಅನಾಥಪ್ರಜ್ಞೆ'ಯ ಪ್ರತೀಕ. ಈ ಅನಾಥಪ್ರಜ್ಞೆ ಇಷ್ಟೊಂದು ಹರಿತವಾಗಿ ಸ್ಪಷ್ಟವಾಗಿ ಪ್ರಭಾವಿಯಾದ ಅಭಿವ್ಯಕ್ತಿಯಾಗಿ ಕನ್ನಡದಲ್ಲಿ ಕಾಣಿಸಿಕೊಂಡಿರುವುದು ಇದೆ ಮೊದಲು."

'ಜಿ.ಎಸ್.ರಂಗನಾಥರಾವ್' ಅವರ ಅಭಿಪ್ರಾಯದಲ್ಲಿ 'ಬಿರುಕು' ಒಂದು ಪರಿಸರದಿಂದ ಮತ್ತೊಂದು ಪರಿಸರಕ್ಕೆ ಬಂದು ಅಲ್ಲಿ ಬೇರೂರಲಾಗದೆ, ಅಲ್ಲಿನ ಜನರ ಜೊತೆಗೆ ಸಂಬಂಧ ಎಸ್ಟಾಬ್ಲಿಷ್ ಮಾಡಲಾಗದೆ, ಅನಾಥವಾಗಿ ಕಳೆದು ಹೋಗುವ ಒಬ್ಬನ ಕಥೆಯಷ್ಟೇ ಆಗಿರದೆ, ನಗರ ಸಂಸ್ಕೃತಿ (ಜೀವನ) ಮತ್ತು ಗ್ರಾಮ ಸಂಸ್ಕೃತಿಗಳ ನಡುವಣ ಕಂದಕವನ್ನೂ, ತಿಕ್ಕಾಟವನ್ನು ಚಿತ್ರಿಸುವ ಕಾದಂಬರಿಯಾಗಿದೆ.

ಈ ಕಾದಂಬರಿಯಲ್ಲಿ ನಾವು ಕಾಣುವ ಜಗತ್ತು ನಮ್ಮ ಬದುಕಿಗೆ ತೀರ ಹತ್ತಿರವಾಗಿದೆ. ನಮ್ಮನ್ನು ಪ್ರಖರವಾಗಿ ತಟ್ಟುವ ಸಮಕಾಲೀನ ಕೃತಿಯಾಗಿದೆ. ನಮ್ಮ ಜನವಾಹಿನಿಗೆ ನೇರ ಸಂಬಂಧಿಸಿದ್ದರಿಂದ, ತೀರ ಸಮಕಾಲೀನವಾದ್ದರಿಂದ ಹಾಗೂ ಇಂದಿನ ಯುವಜನಕ್ಕೆ ಹತ್ತಿರವಾದ ಕಾದಂಬರಿಯಾದ್ದರಿಂದ ಮಹತ್ವಪೂರ್ಣವಾಗಿದೆ. ಲಂಕೇಶರ ಹೊಸ ದೃಷ್ಟಿಕೋನ ಮತ್ತು ಕಾದಂಬರಿಯಲ್ಲಿ ಬರುವ 'ಫ್ಯಾಂಟಸಿ' ತಂತ್ರ ಒಂದು ರೀತಿಯ ಕಾದಂಬರಿಗೆ ಹೊಸತನವನ್ನು ತಂದುಕೊಟ್ಟಿದೆ.

ನವ್ಯದ ದೃಷ್ಟಿಯಿಂದ ಕೂತುಹಲಕಾರಿಯಾದ ಇನ್ನೊಂದು ಕಾದಂಬರಿಯೆಂದರೆ ಯು.ಆರ್.ಅನಂತಮೂರ್ತಿ ಅವರ 'ಸಂಸ್ಕಾರ'. ಆಳವಾದ ಚಿಂತನೆ, ಬಾಳಿನ ಮೂಲಭೂತ ಪ್ರಶ್ನೆಗಳ ಅರಿವು, ನಿಕಟವಾದ ಜೀವನಾನುಭವ ಜಟಿಲವಾದ ಸಂದಿಗ್ಧವಾದ ಮನಃಕ್ರಿಯೆಯನ್ನು ಪದರು ಪದರಾಗಿ ಬಿಡಿಸಿ ತೋರಿಸುವ ಜಾಣ್ಮೆ, ಎಲ್ಲಕ್ಕಿಂತ ಹೆಚ್ಚಾಗಿ ಅನುಭವಕ್ಕೆ ಮೂರ್ತರೂಪ ಕೊಡಬಲ್ಲ ಶಕ್ತಿ ಇವೆಲ್ಲವುಗಳ ಫಲವಾಗಿ ಬಂದ ಸಂಸ್ಕಾರ ಸತ್ವಯುತವಾದ ಬಹುದಿನ ಬಾಳಬಲ್ಲ ಕೃತಿಯಾಗಿದೆ.

'ಸಂಸ್ಕಾರ' ಕಾದಂಬರಿಯು ಅಸ್ತಿತ್ವವಾದಿ ದೃಷ್ಟಿಕೋನ ಇದರ ಮುಖ್ಯ ಆಶಯಗಳಲ್ಲೊಂದಾಗಿದ್ದು, ಅದು ಸಂಸ್ಕಾರದಲ್ಲಿ ಹೆಚ್ಚು ಯಶಸ್ವಿಯಾಗುವುದಕ್ಕೆ ಕಾರಣ ಆ ಅಗ್ರಹಾರದ ಪರಿಸರಕ್ಕೆ ಅನನ್ಯವಾದ ಜೀವನ ವಿವರಗಳು, ಆ ಜನರ ನಂಬಿಕೆ, ಅವರ ಪುರಾಣ ಕಲ್ಪನೆಗಳು, ಪ್ರತೀಕಗಳು ಮತ್ತು ಆ ಜನರ ದೈನಿಕಗಳು ಇವೆಲ್ಲ ಲೇಖಕರ ವಿಚಾರವನ್ನು ನಿರ್ವಹಿಸುವ ಜೊತೆಗೆ ಲೇಖಕರ ವಿಚಾರ ಕೂಡ ಇವುಗಳನ್ನು ನಿರ್ವಹಿಸುವುದನ್ನು ನಾವು ಕಾಣುತ್ತೇವೆ." (ಸಾಹಿತ್ಯ ವಿಮರ್ಶೆ, ೧೯೯೦, ಪುಟ ೧೫೧-೧೫೩)

ಸಂಸ್ಕಾರ ಕಾದಂಬರಿಯ ಪರಂಪರಾಗತ ಮೌಲ್ಯಗಳನ್ನು ಪ್ರಶ್ನಿಸುವುದರೊಂದಿಗೆ ಹೊಸ ಮೌಲ್ಯಗಳಿಗೆ ಇಂಬುಕೊಟ್ಟಿದೆ. ಈ ಕಾದಂಬರಿಯ ನಾಯಕ ಪ್ರಾಣೇಶಾಚಾರ್ಯರು ಹಳೆಯ ಮೌಲ್ಯಗಳನ್ನು ನಂಬಿ ಸ್ವಂತ ವಿಚಾರಗಳನ್ನು ಅದುಮಿಟ್ಟುಕೊಂಡರು ಕೂಡಾ ನಾಯಕನ ಜೀವನದಲ್ಲಿ ನಡೆದ ಒಂದು ಘಟನೆಯಿಂದ ಹಳೆಯ ಮೌಲ್ಯಗಳನ್ನು ಪ್ರಶ್ನಿಸುವ ಮನೋಭಾವನೆ ಬೆಳೆಯುವುದರೊಂದಿಗೆ ತನ್ನ ಜೀವನಕ್ಕೆ ಹೊಸ ರೂಪವನ್ನು ಕಂಡುಕೊಳ್ಳುತ್ತಾನೆ. ``ಪ್ರಾಣೇಶಾಚಾರ್ಯ ನಂಬಿಕೊಂಡಿದ್ದ ಪರಂಪರೆ, ನಾರಣಪ್ಪನ ಸಂಸ್ಕಾರಕ್ಕೆ ಉತ್ತರ ದೊರಕಿಸಿಕೊಡದೇ ಹೋದಾಗ, ಇಂದಿನ ಸವಾಲುಗಳನ್ನು ಎದುರಿಸುವ ಸಾಮರ್ಥ್ಯ ಅಲ್ಲಿನ ಮೌಲ್ಯಗಳಿಗೆ ಇಲ್ಲದೆ ಹೋದಾಗ ದಿಗ್ಭ್ರಾಂತರಾಗುತ್ತಾರೆ. ಮತ್ತು ಇದುವರೆಗೆ ಕಾಣದೊಂದು ಅನುಭವಕ್ಕೆ ಚಂದ್ರಿಯೊಡನೆ ತೆರೆದುಕೊಂಡಾಗ, ತಾನು ಪರಂಪರೆಯಲ್ಲಿನ ಆದರ್ಶವನ್ನು ಪಾಲಿಸಲು ಸಿದ್ಧವಾಗಿ, ಕಳೆದುಕೊಂಡಿರುವುದೇನು ಎಂಬುದು ಅರಿವಿಗೆ ಬರುತ್ತದೆ.`` (ಏಕ-ಅನೇಕ, ಪುಟ ೪೬) ಹೊಸ ಮೌಲ್ಯಗಳನ್ನೊಪ್ಪಿಕೊಂಡು ತನ್ನ ಜೀವನಕ್ಕೆ ಅರ್ಥಪೂರ್ಣವಾದ ತಿರುವನ್ನು ಕೊಟ್ಟುಕೊಳ್ಳುತ್ತಾನೆ.

ಈ ಕಾದಂಬರಿಯ ಮೂಲಕ ಲೇಖಕರು ಅಂದಿನ ಸಮಾಜದಲ್ಲಿ ಯಾವ ರೀತಿಯಾಗಿ ಸಾಂಪ್ರದಾಯಿಕ ಮೌಲ್ಯಗಳಿಗೆ ಜೋತುಬಿದ್ದು, ಕಾಲ ಬದಲಾದರೂ ಕೂಡ ಮನುಷ್ಯ ತನ್ನ ಹಳೆ ಜಾಡಿನಿಂದ ಎದ್ದು ಹೊರಬರದೆ ಹೋದರೆ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವು ನಂಬಿಕೊಂಡಿದ್ದ ಸಂಪ್ರದಾಯಗಳು ನಮ್ಮ ಜೀವನಕ್ಕೆ ಎಷ್ಟರ ಮಟ್ಟಿಗೆ ಬಳಸಿಕೊಳ್ಳುವಲ್ಲಿ ನಾವು ಸಮರ್ಥರಾದೆವು. ಹಳೆಯ ಮೌಲ್ಯಗಳಿಂದ ಆಚೆ ಬಂದು ಹೊಸ ಸಂಗತಿಗಳನ್ನು ರೂಪಿಸಿಕೊಳ್ಳಬೇಕು. ಈ ಕೃತಿ ಅಂದಿನ ಸಮಾಜದ ಸಮಕಾಲೀನತೆಯನ್ನು ನಮ್ಮ ಮುಂದೆ ಬಿಚ್ಚುವದರೊಂದಿಗೆ ಇಂದಿಗೂ ಈ ಕೃತಿ ಪ್ರಸ್ತುತ ಎನ್ನಿಸುತ್ತದೆ. ``ಯಾವ ಧರ್ಮಗ್ರಂಥವೇ ಆಗಲಿ ಸಂದಿಗ್ಧ ಸಮಯದಲ್ಲಿ ಪ್ರಯೋಜನಕ್ಕೆ ಬರುವುದಿಲ್ಲವೆಂಬುದು ಈ ಕೃತಿಯ ಅಂತಃಸೂತ್ರ.'' (ಎಚ್ಚೆಸ್ಕೆ : ಸಂಸ್ಕಾರ ಸಮೀಕ್ಷೆ)

ಎಂ.ಜಿ.ಕೆ.ಯವರು ಹೇಳುವಂತೆ ``ಈ ಕಾದಂಬರಿ ಆ ಸಮಾಜದ ಅವನತಿಯನ್ನು ಮಾತ್ರ ವಿಮರ್ಶಿಸುವ ಸಾಂಪ್ರದಾಯಿಕ ಕೃತಿಯಲ್ಲ. ಆ ಸಮಾಜದ ಜೊತೆಗೆ ಆ ಸಮಾಜದ ಮೂಲಭೂತ ತತ್ವಗಳನ್ನೂ ಪ್ರಶ್ನಿಸುವ ಕೃತಿ.``

ಅನಂತಮೂರ್ತಿಯವರು ಪ್ರತಿಯೊಂದು ಬಗೆಯ ವ್ಯವಸ್ಥೆಯನ್ನು ಸಂದೇಹಿಸುತ್ತಾರೆ. ಅವರು ಮಹತ್ವ ಕೊಡುವುದು ಅಮೂರ್ತ ತತ್ವಗಳಿಗಿಂತ ವೈಯಕ್ತಿಕ ಬದುಕಿನ ಗುಣಗಳಿಗೆ. ತೀರ ಸಮಕಾಲೀನವಾದ, ಮುಖ್ಯವಾದ ಸಮಸ್ಯೆಯನ್ನು ಆಧುನಿಕ ಪ್ರಜ್ಞೆ ಎರಡನ್ನೂ ಸಮರ್ಥವಾಗಿ ಕಾದಂಬರಿಯಲ್ಲಿ ಬಳಸಿದ್ದಾರೆ.

ಪ್ರಜ್ಞೆಯ ಮೂಲಕ ಸಮಾಜವನ್ನು ತಿಳಿಯಲೆತ್ನಿಸಿದವರಲ್ಲಿ ಕುಸುಮಾಕರ ದೇವರಗೆಣ್ಣೂರರು ಕೂಡಾ ಒಬ್ಬರು. ಬದಲಾಗುತ್ತಿರುವ ಜೀವನದ ವಿಧಾನವನ್ನು ಅಲಕ್ಷಿಸಿ ಕಾದುವ ಯಾವ ಲೇಖಕನೂ ತನ್ನ ಕಾಲದ ಓದುಗರನ್ನು ತಟ್ಟಲಾರ. ಆದರೆ, ಈ ಪರಿವರ್ತನ ಶೀಲತೆಯನ್ನು ಕುಸುಮಾಕರರು

ಸಾಮಾಜಿಕ ಮಟ್ಟದಲ್ಲಿ ಹಿಡಿಯದೆ, ಅದು ವ್ಯಕ್ತಿಯ ಪ್ರಜ್ಞೆಯ ಮೇಲೆ ಮಾಡುವ ಪರಿಣಾಮಗಳ ಮೇಲಿಂದ ಗುರುತಿಸುತ್ತಾರೆ. ಹೊಸ ಮೌಲ್ಯಗಳ ಅನ್ವೇಷಣೆಗೆ ಇವರ ಕಾದಂಬರಿಗಳು ಕೂಡ ಉಳಿದ ಕಾದಂಬರಿಗಳಂತೆ ವಾಸ್ತವ ಜೀವನದ ಘಟನೆಗಳನ್ನು ಅವಲಂಬಿಸಿರುತ್ತವೆ. ಸಮಕಾಲೀನ ಜೀವನದ ಅನೇಕ ಸಮಸ್ಯೆಗಳನ್ನು ಅವರ ಕಾದಂಬರಿಗಳು ಚರ್ಚಿಸುತ್ತವೆ. ಅವರ ಪ್ರತಿಯೊಂದು ಕಾದಂಬರಿಯ ವಸ್ತುವೂ ಸಮಕಾಲೀನ ಜೀವನವನ್ನು ಒಳಗೊಳ್ಳುತ್ತವೆ. ಇವರ ಕಾದಂಬರಿಯ ಕಥನ ಕ್ರಿಯೆಯ ಹಿಂದಿದ್ದ ಹೊಸ ದೃಷ್ಟಿಕೋನ ನಮ್ಮ ಮನಸ್ಸನ್ನು ಕೂಡಲೇ ಸೆಳೆಯುತ್ತದೆ. ಇವರ ಎಲ್ಲ ಕಾದಂಬರಿಗಳು ಕುಟುಂಬ ಜಗತ್ತಿನ ಮೂಲಕ ಸಾಮಾಜಿಕ ಜಗತ್ತನ್ನು ಅರ್ಥೈಸುತ್ತವೆ. ಅಂತೆಯೇ ಅಗತ್ಯದ ತೀವ್ರತೆಯಿಂದ ಇವರು ಬರೆಯುತ್ತಾರೆ. ಸಾಮೂಹಿಕ ದೃಷ್ಟಿಕೋನವನ್ನು ಅಳವಡಿಸಿಕೊಂಡು ಬರೆಯುವುದಕ್ಕಿಂತ ಕುಸುಮಾಕರರು ವೈಯಕ್ತಿಕ ಬದುಕಿನ ನಂಬಿಕೆ, ನೋವು, ಆಸೆ, ತೃಪ್ತಿಗಳತ್ತ ತಿರುಗಿದ್ದಾರೆ. ಸಮಸ್ಯೆಗಳ ಸಾಮೂಹಿಕ ಸ್ವರೂಪ ಪರಿಣಾಮಗಳಿಗಿಂತ ಆ ಸಮಸ್ಯೆಗಳ ಮಿತಿಯಲ್ಲೇ ವ್ಯಕ್ತಿಗಳು ಪಡೆಯುವ ಅನುಭವ ಮತ್ತು ಆ ಅನುಭವಗಳ ಬಗೆಗಿರುವ ಲೇಖಕರ ಆಸಕ್ತಿ ಇವರ ಕಾದಂಬರಿಗಳಿಗೆ ಹೊಸ ಆಯಾಮವನ್ನು ಕೊಟ್ಟಿದೆ. ಇವೆಲ್ಲಾ ತಾತ್ವಿಕ ಸಮಸ್ಯೆಗಳು ಬದುಕಿನ ಮೂಲಭೂತ ಪ್ರಶ್ನೆಗಳನ್ನು ತಟ್ಟುತ್ತವೆ. ನಗರದ ಯಾಂತ್ರಿಕ ಬದುಕು. ನಶಿಸುತ್ತಿರುವ ಕೌಟುಂಬಿಕ ಮೌಲ್ಯಗಳು, ಅನಾಥ ಪ್ರಜ್ಞೆ ಇವುಗಳನ್ನು ಸಮರ್ಥವಾಗಿ ಇವರ ಕಾದಂಬರಿಗಳು ಕಟ್ಟಿಕೊಡುತ್ತವೆ. ಕುಸುಮಾಕರರ ಕಾದಂಬರಿಯ ಸಾಹಿತ್ಯದ ಒತ್ತು ಇರುವುದು ಮನುಷ್ಯನ ಅನುಭವ ವೈಯಕ್ತಿಕತೆಯ ಪಾತಳಿಯ ಮೇಲೆಯೇ. ಇವರ ಕಾದಂಬರಿಗಳು ಜೀವನ ಅರ್ಥಕ್ಕಾಗಿ ಹುಡುಕಾಟ ನಡೆಸುವುದರೊಂದಿಗೆ ಸಾಂಸ್ಕೃತಿಕ ಪರಿಸರಕ್ಕೆ ಅನ್ವಯಿಸುವಂತೆ ವಾಸ್ತವ ನೆಲೆಯಲ್ಲಿ ಕೂಡಾ ಪ್ರಸ್ತುತವಾಗುತ್ತದೆ.

ಮನುಷ್ಯನ ಅನುಭವದ ಬಗ್ಗೆ ಇವರು ತಾಳುವ ಧೋರಣೆಯ ಅಭಿವ್ಯಕ್ತಿಗೆ ಇವರ ಕಾದಂಬರಿಗಳು ಸ್ಪಷ್ಟ ನಿದರ್ಶನಗಳಾಗಿವೆ. ಸಾಂಪ್ರದಾಯಿಕವಾದ ಚಿಂತನೆಗಳನ್ನು ತಿರಸ್ಕರಿಸಿ, ಮನುಷ್ಯ ಸ್ವಭಾವದ ಬಗ್ಗೆ ವಿಶಿಷ್ಟ ನಿಲುವೊಂದನ್ನು ತಮ್ಮದೇ ಆದ ಹೊಸ ದೃಷ್ಟಿಕೋನದ ಮೂಲಕ ಪರೋಕ್ಷವಾಗಿ ಪ್ರಕಟಿಸುತ್ತಾರೆ. ಮನುಷ್ಯನ ಮನಸ್ಸಿನ ಎಲ್ಲಾ ತುಮುಲಗಳ ಹಿಂದಿರುವ ಸೂಕ್ಷ್ಮ ಮಾನಸಿಕ ಸಂವೇದನೆಯನ್ನು ಅನುಭವದ ನಿಜವಾದ ಸ್ವರೂಪವನ್ನು ಗುರುತಿಸುತ್ತಾರೆ. ಮನುಷ್ಯನ ಇಡೀ ಮಾನಸಿಕ ಜೀವನವನ್ನು ಅವನು ಇತರರ ಮೇಲೆ ಅವಲಂಬನೆ, ಹಿಂಸೆ, ಸಾಧ್ಯವಾಗದಿದ್ದಾಗ ಅನುಭವಿಸುವ ಅವಮಾನ ಇವುಗಳನ್ನು ಶೋಧಿಸುತ್ತಾರೆ. ಸ್ನೇಹ, ಸಂಬಂಧ, ಅಪನಂಬಿಕೆ, ಒಳ್ಳೆಯತನ ಇವೆಲ್ಲಾ ಅವರ ಕಾದಂಬರಿಗಳಲ್ಲಿ ಶೋಧನೆಗೆ ಒಳಗಾಗಿವೆ. ಇದರ ಜೊತೆಗೆ ಇಲ್ಲಿಯ ಎಲ್ಲಾ ಕಾದಂಬರಿಗಳಲ್ಲಿ ಕಂಡುಬರುವ ದುರ್ಬಲ ನಾಯಕ, ನೋವು, ಅಸಹಾಯಕತೆ ಇತ್ಯಾದಿ ಒಂದಲ್ಲ ಒಂದು ಸನ್ನಿವೇಶಗಳಿಗೆ ಸಿಕ್ಕಿ ತಮ್ಮ ವ್ಯಕ್ತಿತ್ವದಲ್ಲಿ ಅಡಗಿರುವ ಹೊಸತನ ಹೊರಗೆಡವಲು ಹವಣಿಸುವ ತುಡಿತವನ್ನು ಕಾಣಬಹುದು. ಇದರ ಜೊತೆಗೆ ಹೊರನೋಟಕ್ಕೆ ಕಾಣದೇ ಇರುವ ಮನಸ್ಸಿನ ವ್ಯಕ್ತಿತ್ವದ ಒಳಸ್ವರೂಪ, ಅವನ ಅಂತರಂಗದ ಪ್ರವೃತ್ತಿ, ಅವನ ಸುಪ್ತ

[illegible]

ಪ್ರಜ್ಞೆಯ ಭಾವನೆಗಳು, ಕನಸುಗಳ ಒಳಪದರಗಳನ್ನು ಬಿಚ್ಚಿಡುವಲ್ಲಿ ಈ ಕಾದಂಬರಿಗಳು ಸಾಗುತ್ತವೆ. ಬದುಕಿನ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಸಂಕೀರ್ಣತೆಯನ್ನು ಪ್ರಕಟಿಸುವುದರೊಂದಿಗೆ ವರ್ತಮಾನದ ಜೊತೆಗೆ ಭೂತಕಾಲವನ್ನು ತರುವುದು ಇವರ ಕಾದಂಬರಿಯ ವೈಶಿಷ್ಟ್ಯ. ಇವರು ತಮ್ಮ ಕಾದಂಬರಿಗಳಲ್ಲಿ ಸಮಕಾಲೀನ ವಸ್ತು ಮತ್ತು ಆಧುನಿಕ ಪ್ರಜ್ಞೆಯನ್ನು ಸಮರ್ಥವಾಗಿ ಬಳಸುವುದರೊಂದಿಗೆ ಬದಲಾಗುತ್ತಿರುವ ಬಾಹ್ಯ ಪ್ರಪಂಚ ಇವೆಲ್ಲದರ ನಡುವೆ ಸಿಕ್ಕ ಮನುಷ್ಯನ ಮನಸ್ಸು ಸೃಷ್ಟಿಸುವುದರೊಂದಿಗೆ ತಮ್ಮ ಕಾದಂಬರಿಗಳ ಮೂಲಕ ಹೊಸತನವನ್ನು ತಂದಿದ್ದಾರೆ.

ಹಳೆಯ ಹಾಗೂ ಹೊಸ ಕಾದಂಬರಿಗಳ ಪ್ರಯೋಗಗಳಿಂದ ಕಲಿಯಬೇಕಾದದ್ದನ್ನು ಕಲಿತು, ಸ್ವಂತದ್ದೇ ಆದ ದೃಷ್ಟಿಕೋನ, ತಾತ್ವಿಕ ನಿಲುವು, ದಾಟಿಗಳನ್ನು ಪಡೆದು ಸಾರ್ವಕಾಲಿಕ ಸಾರ್ವತ್ರಿಕ ಸಮಸ್ಯೆಗಳನ್ನು ಭಾವಪರವಶರಾಗದಂತೆ ದೂರನಿಂತು ಅತ್ಯಂತ ವೈಯಕ್ತಿಕವಾದ ನಿಲುವಿನಿಂದ ಅಭಿವ್ಯಕ್ತಿಸುವ ಕುಸುಮಾಕರರ ಪ್ರತಿಭೆ ಅನನ್ಯವಾದದ್ದು, ಅಷ್ಟೇ ಅಲ್ಲದೆ, ಇವರ ಒಂದು ಕಾದಂಬರಿಗೂ ಇನ್ನೊಂದಕ್ಕೂ ಕಾಲದ ಅಂತರ ತುಂಬಾ ಇದೆ. ಪ್ರತಿಯೊಂದು ಕಾದಂಬರಿಯಲ್ಲಿ 'ಬೆಳವಣಿಗೆ' ಅವರ ಕೃತಿಯಲ್ಲಿ ಕಾಣುತ್ತದೆ. ಇವರು ಎತ್ತಿಕೊಂಡ ಮಾನವೀಯ ಸ್ವಭಾವಗಳ ಪ್ರಶ್ನೆ ಎಲ್ಲಾ ಕಾಲಕ್ಕೂ ಪ್ರಸ್ತುತ. ಇವರ ಕಾದಂಬರಿಗಳಲ್ಲಿ ಬರುವ ವ್ಯಕ್ತಿಗಳು ಅವರ ಮನಸ್ಸಿನ ತೊಳಲಾಟಗಳು, ಸಮಾಜ-ವ್ಯಕ್ತಿ-ಮನಸ್ಸು ಇವುಗಳ ಸಂಬಂಧವನ್ನು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿ ಜೀವಂತ ಸಮಸ್ಯೆಯೊಂದನ್ನು ಅತ್ಯಂತ ನಿರ್ದಾಕ್ಷಿಣ್ಯವಾಗಿ, ತೀಕ್ಷ್ಣವಾಗಿ ವಿಶ್ಲೇಷಿಸಿ ನಮ್ಮನ್ನು ನಾವು ಹೆಚ್ಚು ಸ್ಪಷ್ಟವಾಗಿ ತಿಳಿದುಕೊಳ್ಳುವಂತೆ ಮಾಡುವ ಇವರ ಕಾದಂಬರಿಗಳು ಸರ್ವಕಾಲೀನ ಮಹತ್ವ ಎದ್ದು ಕಾಣುತ್ತದೆ.

ಇವರ ಕಾದಂಬರಿಗಳು ಅನುಭವ ಪ್ರಪಂಚ ಬದುಕಿನ ಬಗೆಗೆ ನಮಗಿರುವ ಪ್ರಜ್ಞೆಯನ್ನು ವಿಸ್ತರಿಸುತ್ತವೆ. ಹೊಸದೊಂದು ದೃಷ್ಟಿಕೋನವೊಂದರ ಸಾಧ್ಯತೆಯನ್ನು ಬಿಂಬಿಸುತ್ತವೆ. ನಿರೀಕ್ಷಣಾ ಸಾಮರ್ಥ್ಯವನ್ನು ಹರಿತಗೊಳಿಸುತ್ತವೆ. ಇವೆಲ್ಲಾ ಇವರಿಗೆ ಸಾಧ್ಯವಾಗಿರುವುದು. ಜೀವನದ ಮೂಲಭೂತ ಸಮಸ್ಯೆಗಳ ಆಂತರಿಕ ತೊಡಕುಗಳ ಬಗ್ಗೆ ಇರುವ ಆಳವಾದ ತಿಳುವಳಿಕೆಯಿಂದ.

ಅಂದಿನ ಒಂದು ಸಾಂಸ್ಕೃತಿಕ ಪರಿಸರ, ಸಾಮಾಜಿಕ ಸಮಸ್ಯೆಗಳ ಚರ್ಚೆಯೂ ಬರುತ್ತದೆ. ಆದರೆ ಅದರ ಹಿಂದೆ ಇರುವ ವೈಯಕ್ತಿಕ ಅಗತ್ಯ ತೀವ್ರತೆ ಮಾತ್ರ ಅವರ ಸಮಕಾಲೀನ ಲೇಖಕರಿಗಿಂತ ಸ್ವಲ್ಪ ಭಿನ್ನವಾಗಿದ್ದಾರೆ.

ಈ ಬಗೆಯ ವ್ಯಕ್ತಿನಿಷ್ಠ ಸಮಸ್ಯೆಗಳ ಚಿಂತನದಲ್ಲಿ ಈ ಸಮಸ್ಯೆಗಳನ್ನು ಗಟ್ಟಿಮುಟ್ಟಾಗಿ ತಲಸ್ಪರ್ಶಿಯಾಗಿ ಶೋಧಿಸುವುದರೊಂದಿಗೆ ಈ ಪ್ರಶ್ನೆಗಳನ್ನು ವ್ಯಕ್ತಿಗಳ ಬದುಕಿನಲ್ಲೇ ಗ್ರಹಿಸಿ ಅಲ್ಲೇ ಅವುಗಳಲ್ಲಿ ಉತ್ತರ ಪಡೆಯಬೇಕೆನ್ನುವವರಲ್ಲಿ ಕುಸುಮಾಕರರು ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ.

ಅಧ್ಯಾಯ ಮೂರು

ನಾಲ್ಕನೆಯ ಆಯಾಮದ ವಿವಿಧ ಅಧ್ಯಯನಗಳು

೩.೧ ಕಾದಂಬರಿಯ ಇತಿವೃತ್ತ

೩.೨ ಕಾದಂಬರಿಯ ಆಶಯ-ಆಕೃತಿ

೩.೩ ಕಾದಂಬರಿಯ ಪಾತ್ರ ಪ್ರಪಂಚ

೩.೪ ಕಾದಂಬರಿಯ ಭಾಷೆ ಮತ್ತು ಶೈಲಿ

ಅಧ್ಯಾಯ ಮೂರು

ನಾಲ್ಕನೆಯ ಆಯಾಮದ ವಿವಿಧ ಅಧ್ಯಯನಗಳು

೩.೧ ಕಾದಂಬರಿಯ ಇತಿವೃತ್ತ

ಕುಸುಮಾಕರ ದೇವರಗೆಣ್ಣೂರು ಮೊದಲು ಕವನ ಸಂಕಲನ ಬರೆದರೂ ಕೂಡಾ ಅವರ ಪ್ರತಿಭೆ ಪ್ರಖರವಾಗಿ ಕಾಣುವುದು ಅವರ ಆರು ಕಾದಂಬರಿಗಳಲ್ಲಿ. ಆಧುನಿಕ ಬದುಕಿನ ಭಿನ್ನ ಭಿನ್ನ ಸಂವೇದನೆ ಹಾಗೂ ಸಂಕೀರ್ಣತೆಗಳನ್ನು ಹಿಡಿಯುವಲ್ಲಿ ಇವರ ಕಾದಂಬರಿಗಳು ಹೆಚ್ಚು ಯಶಸ್ಸನ್ನು ಕಂಡಿವೆ. ವ್ಯಕ್ತಿಕೇಂದ್ರಿತ, ಚಿಂತನಶೀಲ, ಜಿಜ್ಞಾಸು, ದಾರ್ಶನಿಕ ಬರಹಗಾರರು ಒಂದಲ್ಲ ಒಂದು ರೀತಿಯ ಜೀವನದ ಹುಡುಕಾಟವನ್ನು ಒಳಗೊಳ್ಳುವುದರೊಂದಿಗೆ ಹೊಸ ಮೌಲ್ಯಗಳ ಅನ್ವೇಷಣೆ ಇವರ ಕಾದಂಬರಿಗಳ ಕೇಂದ್ರಬಿಂದು. ಕನ್ನಡದಲ್ಲಿ ಆಗಷ್ಟೇ ನವ್ಯ ಕಾದಂಬರಿಗಳು ಕುಡಿಯೊಡೆಯುವ ದಿನಗಳಲ್ಲಿ ಮೊದಲು ಬಂದ ನವ್ಯ ಕೃತಿಗಳಿಗಿಂತ ಭಿನ್ನವಾದ ಹೊಸ ಸಂವೇದನೆಯುಳ್ಳ ಕಾದಂಬರಿಗಳನ್ನು ನೀಡಿದರು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇವರು ಈಗಾಗಲೇ ಬರೆದ ಆರು ಕಾದಂಬರಿಗಳಲ್ಲಿ ಒಂದಾದ 'ನಾಲ್ಕನೆಯ ಆಯಾಮ' ಒಂದು ವಿಶಿಷ್ಟ ಕೃತಿಯಾಗಿದೆ.

ಈಗಾಗಲೇ ನಾಲ್ಕನೆಯ ಆಯಾಮದ ಬಗ್ಗೆ ಚರ್ಚೆ ವಿಪುಲವಾಗಿಲ್ಲದಿದ್ದರೂ ಕೆಲವು ಕಡೆ ಚರ್ಚೆಯಾಗಿದೆ. ತುಂಬಾ ಕುತೂಹಲ ಹುಟ್ಟಿಸುವ ಮನಶಾಸ್ತ್ರೀಯ ಹಿನ್ನೆಲೆಯಲ್ಲಿ ಮೂಡಿಬಂದಿದೆ. ಇಲ್ಲಿನ ಹೆಸರಿಲ್ಲದ ನಾಯಕ ಸ್ವತಂತ್ರವಾಗಿ ತನ್ನ ಬದುಕನ್ನು ರೂಪಿಸಿಕೊಳ್ಳಲಾರದ ತರುಣ. ವರ್ತಮಾನದಲ್ಲಿ ಕುಳಿತು ಭೂತಕಾಲವನ್ನು ಅಗೆಯುವಾಗ ಅವನ ಸ್ಮೃತಿಪಟಲದಲ್ಲಿ ಬಾಲ್ಯದಲ್ಲಿ ಕಳೆದ ಘಟನೆಗಳು ಕಣ್ಣೆದುರಿಗೆ ಒಂದೊಂದಾಗಿ ಬರತೊಡಗಿದವು. ಬಾಲ್ಯದಲ್ಲಿ ಅವನಿಗಾದ ಅವಮಾನವನ್ನು ಒಪ್ಪಿಕೊಂಡು ಬದುಕಿದರೂ ಒಮ್ಮೆಯಾದರೂ ಅದರ ವಿರುದ್ಧ ಪ್ರತಿಭಟಿಸಲಿಲ್ಲ. ತನ್ನ ಕಡೆ ತಪ್ಪು ಇರದೆ ಇದ್ದರೂ

[illegible]

[illegible]

[illegible]

[illegible]

[illegible]

ಕೂಡಾ ಮತ್ತೆ ಹೀಗೇಕಾಯಿತು? ಇದು ನನ್ನ ತಪ್ಪಲ್ಲ ತಂದೆ ತಾಯಿಗಳ ತಪ್ಪು. ತಂದೆಯಂತೂ ಯಾವಾಗಲೂ ಜೀವನ ನೀನು ತಿಳಿದುಕೊಂಡಷ್ಟು, ಸರಳ ಇಲ್ಲ ನಿಮಗೆ ಇರುವಷ್ಟು ಅಭ್ಯಾಸ ಅನುಕೂಲಗಳು ನಮಗೆ ಇರಲಿಲ್ಲ ಹಠದಿಂದ ಮುಂದೆ ಬಂದೆ, ನಿನ್ನ ಹಿತಕ್ಕಾಗಿ ಹೇಳುತ್ತಿದ್ದೇನೆ. ನೀವು ಇನ್ನೂ ಏನೇನು ಜೀವನದಲ್ಲಿ ಅನುಭವಿಸಬೇಕಾಗಿದೆಯೋ ತಂದೆಯ ಈ ಮಾತು ಅವನಲ್ಲಿ ನಡುಕ ಹುಟ್ಟಿಸುವಂತೆ ಮಾಡುತ್ತಿತ್ತು. ನಾನು ಏನೆ ಕೇಳಿದರು ಮಾಡಿದರು ಅದನ್ನ ಮಾಡಬೇಡ ಅಲ್ಲಿಗೆ ಹೋಗಬೇಡ ಪದೇ ಪದೇ ತಂದೆ ಹೇಳುವ ಈ ಮಾತುಗಳು ಅವನಿಗೆ ಜೀವನದ ಬಗ್ಗೆ ಭೀತಿಯನ್ನು ನಿರ್ಮಾಣ ಮಾಡಿ ಜೀವನವೆಂದರೆ ಕಷ್ಟಗಳ ಸಂಕೋಲೆ ಎಂಬ ತೀರ್ಮಾನಕ್ಕೆ ಬರುತ್ತಾನೆ. ಜೀವನದಲ್ಲಿ ಎದುರಿಸಲು ಬೇಕಾದ ಧೈರ್ಯ, ಸ್ಫೂರ್ತಿ, ಆತ್ಮವಿಶ್ವಾಸ ಇಲ್ಲದಂತಾಗುತ್ತದೆ. ಅವನು ಬೆಳೆದ ಹಾಗೆ ಬಾಲ್ಯದಲ್ಲಿ ಆದ ಅನುಭವಗಳು ಈಗ ಬೇರೆ ರೀತಿಯ ದಾರಿಯನ್ನು ಹಿಡಿಯುತ್ತವೆ. ಇಲ್ಲಿ ಲೇಖಕರು ಫ್ರಾಯ್ಡ್‌ನ ತತ್ವವನ್ನು ಉಪಯೋಗಿಸಿಕೊಂಡಿದ್ದಾರೆ.

೧. ಬಾಲ್ಯದ ಅನುಭವಗಳು ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ನಿರ್ಧಾರಕ ಪ್ರಭಾವ ಬೀರುತ್ತವೆ.

ಅವನು ಹತ್ತನೆಯ ಕ್ಲಾಸ್ ಪಾಸ್ ಆದಾಗ ಮುಂದೆ ಕಾಲೇಜಿಗೆ ಹೋಗುತ್ತೇನೆ ಅಂದಾಗ ಮುಂದೆ ಕಲಿತು ಏನು ಮಾಡುತ್ತಿ ವೇಳೆ, ಹಣ ಹಾಳು ಬೇಗನೆ ರೇಲ್ವೆ ಖಾತೆಗೆ ಸೇರಿಕೊಂಡರೆ ಹೇಗೋ ನಿನ್ನ ಜೀವನ ಸಾಗುತ್ತದೆ. "ತಾನು ಹೇಗೆ ಬಾಳಬೇಕು ಎಂಬುದನ್ನು ಮನುಷ್ಯ ತನ್ನ ಬಾಲ್ಯದ ನಿರ್ಧಾರಗಳಂತೆ ಜೀವಮಾನವಿಡೀ ಬಾಳುತ್ತಾನೆ." ತಂದೆ ಅವನಿಗೆ ಜೀವನದ ಬಗ್ಗೆ ಹುಟ್ಟಿಸಿದ ಭೀತಿ ಜೀವನವನ್ನು ಎದುರಿಸುವ ಧೈರ್ಯ ಕಳೆದುಕೊಳ್ಳುವದರೊಂದಿಗೆ ತಂದೆಯ ಬಗ್ಗೆ ದ್ವೇಷ ತಾಯಿಯ ಬಗ್ಗೆ ಸಹಾನುಭೂತಿ ಪ್ರಾರಂಭವಾಗುತ್ತದೆ.

೨. ಪ್ರತಿ ಕುಟುಂಬದಲ್ಲಿ oedipus ಸನ್ನಿವೇಶವಿರುತ್ತದೆ. ತಂದೆಯ ಬಗ್ಗೆ ಮಗನ ದ್ವೇಷ ಹಾಗೂ ತಾಯಿಯ ಬಗ್ಗೆ ಸಹಾನುಭೂತಿ, ಪ್ರೀತಿ; ತಂದೆ-ಮಕ್ಕಳ ಪ್ರಚ್ಛನ್ನ ಯುದ್ಧ ಹಾಗೂ ತಂದೆಯ ಮೇಲೆ ವಿಜಯ ಸಂಪಾದಿಸಬೇಕೆನ್ನುವ ಹಾಗೂ ಆತನನ್ನು ನಿರ್ನಾಮ ಮಾಡಬೇಕೆನ್ನುವ ಮಗನ ಸುಪ್ತ ಪ್ರವೃತ್ತಿ ಇವು ಸನ್ನಿವೇಶದ ಭಾವಭೂಮಿಗೆ.

ಈ ಕಾದಂಬರಿಯಲ್ಲಿ ಬರುವ ಅವನ ವರ್ತನೆಗಳು ಇದಕ್ಕೆ ಸಂಬಂಧಿಸಿವೆ. ಮಾತೆತ್ತಿದರೆ ಅಪ್ಪಗೆ ಒಂದು ಸಿನಿಮಾ ನೋಡಬೇಕಾದರೆ ಎಷ್ಟು ಪ್ರಯಾಸ. ಒಂಬಭತ್ತನೆ ಇಯತ್ತೆಯ ವಾರ್ಷಿಕ ಪರೀಕ್ಷೆ ಮುಗಿದಿತ್ತು. ಕೊನೆಯ ದಿನ ಎಲ್ಲ ವರ್ಗದ ಹುಡುಗರು ಸೇರಿ ಸಿನಿಮಾಕ್ಕೆ ಹೋಗುವ ತೀರ್ಮಾನ ಮನೆಗೆ ಬಂದು ಉತ್ಸಾಹದಿಂದ ತಂದೆಗೆ ಹೇಳಿದ. ಈ ಮಾತನ್ನು ಕಿವಿಗೆ ಹಾಕಿಕೊಳ್ಳದೆ. "ಯಾವ ಪೇಪರ ಇತ್ತು", ಹೇಗೆ ಬರೆದಿದೆಯಾ? ಎಷ್ಟು ಅಂಕಗಳು ದೊರೆತಾವು? ಸಿನೇಮಾದ ಮಾತೆ ಇಲ್ಲ. ತಂದೆಗೆ ನನ್ನ ಭಾವನೆಗಳು ಅರ್ಥವಾಗಲ್ಲೊಲ್ಲವು. ಬೇರೆ ಹುಡುಗರು ಎಷ್ಟೊಂದು ಸ್ವಚ್ಛಂದವಾಗಿ ನಗುತ್ತಾರೆ,

[illegible]

[illegible]

[illegible]

[illegible]

[illegible]

ಕುಣಿಯುತ್ತಾರೆ. ಮನಸ್ಸಿಗೆ ಬಂದ ಕಡೆ ಹೋಗುತ್ತಾರೆ. ಆದರೆ ನನ್ನ ಜೀವನ ಮಾತ್ರ ಹೀಗೇಕೆ' ತಂದೆಯ ಎದುರಿಗೆ ನಿಂತು ಮಾತನಾಡುವ ಹಾಗಿಲ್ಲ. ತಂದೆಯ ಬಗೆಗಿನ ದ್ವೇಷವನ್ನು ಕನಸುಗಳ ಮೂಲಕ ವ್ಯಕ್ತವಾಗುತ್ತದೆ. ಆ ಕನಸುಗಳು ಅವನಿಗೆ ಒಂದು ರೀತಿಯ ಮನಸ್ಸಿಗೆ ವೇದನೆಯುನ್ನುಂಟು ಮಾಡುತ್ತವೆ.

ಈ ಕನಸಿನ ವಿಚಾರವಾಗಿ ತಾಯಿಗೆ ಕೇಳಿದಾಗ ತಾಯಿ ಹಳೆ ಸಂಪ್ರದಾಯದಂತೆ ದೇವರ ಸ್ಮರಣೆ ಮಾಡಿ ಮಲಗು. ಆದರೂ ಕನಸು ಬೀಳುವುದು ತಪ್ಪುವುದಿಲ್ಲ. ತಂದೆಯ ಪ್ರಭುತ್ವದಿಂದ ಪಾರಾಗಲು ಹವಣಿಸುತ್ತಾನೆ. ಮುಂದೆ ತಾಯಿ ಇವನ ಪರವಾಗಿ ನಿಂತು ಕಾಲೇಜು ಸೇರಲು ಅನುಮತಿ ದೊರೆಯುತ್ತದೆ. ಕಾಲೇಜಿನ ವಾತಾವರಣ ಅವನ ವ್ಯಕ್ತಿತ್ವದಲ್ಲಿ ಹೊಸ ಬದಲಾವಣೆ ತರುತ್ತದೆ. ಅಲ್ಲಿ ಅವನಿಗೆ ದೊರೆತ ಗೆಳೆಯನ ಸಹವಾಸ. ಗೆಳೆಯನ ನಡವಳಿಕೆ, ಅಚ್ಚುಕಟ್ಟುತನ, ಜೀವನವನ್ನು ರೂಪಿಸಿಕೊಂಡ ರೀತಿ, ಅಭ್ಯಾಸ ಮಾಡುವ ಕ್ರಮ ಆ ಆದರ್ಶತನವನ್ನು ತನ್ನ ಜೀವನದಲ್ಲು ಅಳವಡಿಸಿಕೊಳ್ಳಬೇಕು. ಇವೆಲ್ಲವು ಅವನನ್ನು ಇನ್ನೂ ಹೆಚ್ಚು ಆತನ ಕಡೆಗೆ ಆಕರ್ಷಿತನನ್ನಾಗಿ ಮಾಡಿದವು. ಮೊದಲ ಬಾರಿಗೆ ತಾನು ತಂದೆಯಂತಾಗಬಾರದು ಎಂಬ ನಿರ್ಧಾರ ಅವನಲ್ಲಿ ಮೂಡಿತು. ಈ ಸ್ನೇಹಿತ ಹೇಗೆ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡನೋ ಹಾಗೇ ಅವನ ಹೆಜ್ಜೆಯಲ್ಲಿ ಹೆಜ್ಜೆ ಹಾಕುವುದು ಎಂದುಕೊಂಡ ಗೆಳೆಯನ ಪ್ರೇರಣೆಯಿಂದ ಅವನು ಹೊಸ ಜೀವನಕ್ಕೆ ಕಾಲಿಟ್ಟರು ಕೂಡಾ ಗೆಳೆಯ ಕಾಲೇಜು ಬಿಟ್ಟು ಹೋದಾಗ ಮತ್ತೆ ಸೂತ್ರವಿಲ್ಲದ ಗಾಳಿಪಟದಂತೆ ಆಗುತ್ತಾನೆ. ಈ ನಡುವೆ ತಂದೆಗೆ ಬೇರೆ ಕಡೆಗೆ ವರ್ಗವಾದಾಗ ತಾಯಿಯ ಗೆಳತಿಯ ಮನೆಯಲ್ಲಿ ಇದ್ದು ಕಲಿಯುವ ಅವಕಾಶ ದೊರೆಯುತ್ತದೆ. ವಯಸ್ಸಿಗೆ ಅನುಗುಣವಾಗಿ ತಾಯಿಯ ಗೆಳತಿಯ ಮಗಳ ಮೇಲೆ ಅವನಿಗೆ ಮನಸ್ಸಾಗುತ್ತದೆ. ಆ ಹುಡುಗಿಯ ಅಲಕ್ಷತನ ಅವನಿಗೆ ಒಂದು ರೀತಿಯ ಜಿಗುಪ್ಸೆ ಹುಟ್ಟಿಸುತ್ತದೆ. ನಾನು ಅನುಕೂಲಸ್ಥನಲ್ಲ ನನ್ನ ಕಡೆ ಏನು ಇದೆ ಎಂದು ಅವಳು ನನ್ನನ್ನು ಪ್ರೀತಿಸಬೇಕು. ತಾಯಿಯ ಗೆಳತಿಯ ಮನೆಯವರು ತನ್ನನ್ನು ಗಮನಿಸಲಿಲ್ಲ ಎನ್ನುವ ಕೊರಗು. ಒಮ್ಮೊಮ್ಮೆ ಅವನ ತಲೆಯಲ್ಲಿ ಈ ರೀತಿ ಕಾಲಹರಣ ಮಾಡುವದರಲ್ಲಿ ಪ್ರಯೋಜನವಿಲ್ಲ. ಹೊಣೆಗಾರಿಕೆಯಿಲ್ಲದೆ ವರ್ತಿಸುತ್ತಿದ್ದೇನೆ. ನಾನು ಬದಲಾಗಬೇಕು ಎನ್ನುವ ಹಂಬಲದಲ್ಲಿ ಸಿಗರೇಟನ್ನು ಸೇದಬೇಕು. ಸ್ನೇಹಿತ ಹೇಳಿದ ಹಾಗೆ ಅನ್ಯಾಯದ ವಿರುದ್ಧ ಬಂಡೇಳಬೇಕು ತಂದೆಯ ಆ ಕಡಿವಾಣ ತೆಗೆದುಹಾಕಬೇಕು. ಹಳೆಯ ಪರಂಪರೆಯ ಎಲ್ಲವನ್ನು ನಾನು ತಿರಸ್ಕರಿಸುತ್ತೇನೆ ಹೊಸ ಜೀವನವನ್ನು ರೂಪಿಸಿಕೊಳ್ಳುತ್ತೇನೆ. ಆದರೆ ಹೇಗೆ ಬದಲಾಗಬೇಕೆಂಬ ಸ್ಪಷ್ಟ ಅರಿವು ಅವನಿಗೆ ಇಲ್ಲ.

ಈ ನಡುವೆ ತಂದೆಯ ಬಗ್ಗೆ ದ್ವೇಷ ಇನ್ನು ಹೆಚ್ಚಾಗುತ್ತದೆ. ಪ್ರತಿಯೊಂದು ಕೆಲಸಕ್ಕೆ ಅಡ್ಡಿ ಬರುವ ತಂದೆಯನ್ನು ನನ್ನ ಜೀವನದಲ್ಲಿ ದೂರ ಸರಿಸಬೇಕು. ಎದುರಿಗೆ ನಿಂತು ಮಾತನಾಡಲು ಆಗದ ಅವನಿಗೆ ವಾಸ್ತವತೆಯನ್ನು ಎದುರಿಸಲು ಮನಸ್ಸು ನಿರ್ಬಲವಾದಾಗ ಅದು ಸ್ವಪ್ನಲೋಕದ ಮೂಲಕ ಈಡೇರಿಸಿಕೊಳ್ಳುವುದು. ಬಾಲ್ಯದಲ್ಲಿ ತಂದೆಯಿಂದ ತನ್ನ ಆಸೆ ಕೈಗೂಡದಿದ್ದಾಗ ಆಗ ಅವನಿಗೆ ಬೀಳುವ ಕನಸು

[illegible]

"ಕಣ್ಣೆದುರು ವಿಶಾಲವಾದ ಬಯಲು. ಪುಟ್ಟ ಪುಟ್ಟ ಮಾವಿನ ಸಸಿಗಳು ಎದ್ದಿದ್ದವು. ಏನು ಚೆಲುವು. ಏನು ಕೋಮಲತೆ. ಸಂತೋಷದಿಂದ ಅವನ ಹೃದಯ ಬೆಳಗಿತು. ಒಂದೇ ಒಂದು ನಿಮಿಷ. ಯಾರೋ ನಿರ್ದಯವಾಗಿ ರೋಡರೋಲರನ್ನು ಹಾಯಿಸಿದರು ಮಾವಿನ ಸಸಿಗಳಲ್ಲಿ ರಕ್ತವಿತ್ತು. ಆ ನೆಲವೆಲ್ಲ ಅವುಗಳ ರಕ್ತದಿಂದ ತೊಯ್ದು ಹೋಯಿತು. ಅವನ ಹೃದಯ ಅಯ್ಯೋ ಎಂದು ಕೂಗಿತು. ಕಣ್ಣು ಮುಚ್ಚಿದ್ದವು. ಭೀಕರವಾದ ಕತ್ತಲೆ ಮುರುಕು ಮನೆ. ಬಿದ್ದ ಗೋಡೆ. ಕತ್ತಲಲ್ಲಿ ತಾನು ಕರಗಿಹೋದೆ ಅನ್ನಿಸಿತು ಅವನಿಗೆ". (ಪುಟ ೨೨)

ಈ ಕನಸಿನಲ್ಲಿ ಕಾಣುವ ಎಳೆಯ ಸಸಿಗಳು ನಾಯಕನ ಕೋಮಲ ಆಸೆಗಳೆಂದೂ ರೋಡರೋಲರು ಅಪ್ಪನ ದಬ್ಬಾಳಿಕೆಯೆಂದು ತಿಳಿಯುತ್ತದೆ.

೩. ಸುಪ್ತ ಮನಸ್ಸು, ಸ್ವಾಭಾವಿಕ ಪ್ರವೃತ್ತಿಗಳು ದಮನ ಮಾಡಲ್ಪಟ್ಟಾಗ ಕನಸು, ಹಗಲು ಗನಸುಗಳ ಮುಖಾಂತರ ಅಭಿವ್ಯಕ್ತಗೊಳ್ಳಲು ಯತ್ನಿಸುತ್ತದೆ. (ಸಿಗ್ಮಂಡ ಫ್ರಾಯ್ಡ್), ತನ್ನ ದೌರ್ಬಲ್ಯವನ್ನು ಮುಚ್ಚಿಕೊಳ್ಳಲು ಇನ್ನೊಬ್ಬರನ್ನು ಹೊಣೆಯಾಗಿಸುವುದು ತಂದೆ - ತಾಯಿ, ಸ್ನೇಹಿತ ಯಾರಾದರೂ ಆಗಬಹುದು. ಅವನ್ನು ಸ್ವತಂತ್ರವಾಗಿ ವಿಚಾರ ಮಾಡಿ ಜೀವನವನ್ನು ರೂಪಿಸಿಕೊಳ್ಳಲು ಆಗದೆ ಒಬ್ಬ ಸ್ನೇಹಿತ ಮರೆಯಾದ ನಂತರ ಆತನಿಗೆ ಇನ್ನೊಬ್ಬ ಸ್ನೇಹಿತ ದೊರಕುತ್ತಾನೆ. ಆ ಸ್ನೇಹಿತನ ಸಹವಾಸದಿಂದ ಅವನಲ್ಲಿ ಕೀಳರಿಮೆ ಮೂಡಲು ಪ್ರಾರಂಭವಾಗುತ್ತದೆ. ನಾನು ಎಷ್ಟೊಂದು ತಪ್ಪು ಹೆಜ್ಜೆಗಳನ್ನು ಇಡುತ್ತಿದ್ದೇನೆ. ಸ್ನೇಹಿತ ಅವನಿಗೆ ಒಳ್ಳೊಳ್ಳೆ ವಿಚಾರಗಳನ್ನು ಹೇಳುತ್ತಾನೆ. ಕ್ರಮೇಣ ಗೆಳೆಯನ ಕಡೆಗೆ ಆಕರ್ಷಿತನಾಗುತ್ತಾನೆ. ನಿಮ್ಮ ಕಡೆ ತುಂಬಾ ಬುದ್ಧಿಯಿದೆ ನೀವು ಸರಿಯಾಗಿ ಬಳಸಿಕೊಳ್ಳುತ್ತಿಲ್ಲ.

ಗೆಳೆಯನ ಇಂತಹ ಮಾತುಗಳಿಂದ ನನ್ನ ಜೀವನಕ್ಕೂ ಬೆಲೆಯಿದೆ. ನಾನು ಇವನಂತೆ ಆಗಬಹುದು. ಜೀವನದ ದಾರಿ ತೋರಿಸಿಕೊಟ್ಟ ಗೆಳೆಯನ ಬಗ್ಗೆ ಕೃತಜ್ಞತೆಯ ಭಾವನೆ ಬೆಳೆಯುತ್ತದೆ. ಆದರೆ ಅದೇ ಉಪದೇಶ ಕೊಟ್ಟ ಸ್ನೇಹಿತನೆ ಬೇರೆ ಕಡೆಗೆ ಹೋದಾಗ ಮತ್ತೆ ಅನಾಥ ಪ್ರಜ್ಞೆ ಕಾಡಲು ಪ್ರಾರಂಭಿಸುತ್ತದೆ. ಮುಂದೆ ಆ ಸ್ನೇಹಿತನೆ ಎದುರಾಳಿಯಾಗಿ ಬರುತ್ತಾನೆ.

ಮೂರನೆಯ ಭಾಗದಲ್ಲಿ ನಾಯಕ ತಂದೆಯ ವಿರುದ್ಧ ಸಿಡಿದೇಳುತ್ತಾನೆ. ನೀವೆ ನನ್ನ ಭವಿಷ್ಯವನ್ನು ಹಾಳು ಮಾಡಿವಿರಿ. ಯಾವುದರಲ್ಲೂ ನನಗೆ ಸ್ವಾತಂತ್ರ್ಯ ಕೊಡಲಿಲ್ಲ. ಎಲ್ಲವೂ ನಿಮ್ಮ ಇಷ್ಟದಂತೆ ಆಗಬೇಕು. ಏನೇ ಕೇಳಿದರೂ ನೀವು ಕಲಿಯುವಾಗ ಇದ್ದ ಪರಿಸ್ಥಿತಿಯನ್ನು ನನಗೆ ಬೋಧಿಸುತ್ತೀರಿ. ಇಲ್ಲಿ ಅವನ ಮಾತುಗಳ ಮೂಲಕ ಲೇಖಕರು ಅಂದಿನ ಒಂದು ಶಿಕ್ಷಣ ಕ್ರಮ ಯಾವ ರೀತಿಯಾಗಿತ್ತು ಎಂಬುದರ ಕಡೆ ನಮ್ಮ ಗಮನ ಸೆಳೆಯುತ್ತಾರೆ. ಅಂದಿನ ಒಂದು ಶಿಕ್ಷಣ ಪದ್ಧತಿ, ಅನ್ಯ ಚಟುವಟಿಕೆಗಳಿಗೆ ಅವಕಾಶವಿಲ್ಲ. ಕಟ್ಟುನಿಟ್ಟಿನಲ್ಲಿಯೇ ಅಭ್ಯಾಸ ನಡೆಯಬೇಕು. ಕಲಿಯುವ ವಿದ್ಯಾರ್ಥಿಗಳು ಉಡುಗೆ-ತೊಡುಗೆಗಳಲ್ಲಿ ಸರಳ ರೀತಿಯಾಗಿರಬೇಕು. ಅಲ್ಲದೆ ಆ ಕಾಲಕ್ಕೆ ಕಾದಂಬರಿಗಳನ್ನು ಓದುವುದು

[illegible]

ವಿದ್ಯಾರ್ಥಿಗಳ ಅಭ್ಯಾಸಕ್ಕೆ ದಕ್ಕೆ ತರುವಂತಹದು. ಕಾದಂಬರಿಗಳು ತಪ್ಪುದಾರಿಗೆ ಒಯ್ಯುತ್ತವೆ ಎನ್ನುವ ಒಂದು ನಂಬಿಕೆ. ಈ ಕೃತಿಯಲ್ಲಿ ಬರುವ ಒಂದು ವ್ಯಾಖ್ಯೆ ಇದನ್ನು ದೃಢಪಡಿಸುತ್ತವೆ. "ಕತೆ ಕಾದಂಬರಿಗಳನ್ನು ಓದಿ ವೇಳೆ ಹಾಳುಮಾಡಿಕೊಳ್ಳಬೇಡ" "ಇಂಗ್ಲಿಷ್ ಚೆನ್ನಾಗಿ ಅಭ್ಯಾಸ ಮಾಡು" ಎಂಬ ತಂದೆಯ ಮಾತು. ಅಂದಿನ ಒಂದು ಪಾಶ್ಚಾತ್ಯ ಶಿಕ್ಷಣ ಪ್ರಭಾವ ಕೂಡಾ ಇಲ್ಲಿ ನಾವು ಕಾಣಬಹುದು. ಹೀಗೆ ತಂದೆಯ ಜೊತೆ ನಿರ್ಭೀತಿಂದ ವಾದಿಸುತ್ತಾನೆ. "ಭಾರತೀಯರ ಹಣೆಬರಹವೇ ಇಷ್ಟು, ನೀತಿ, ದೌರ್ಬಲ್ಯದ ಪರಮಾವದಿ, ನಮ್ಮಲ್ಲಿ ಹಾಸಿಗೆ ಇದ್ದಷ್ಟು ಕಾಲು ಚಾಚು, ಅಂಬಳಿ-ಕಂಬಳಿ ರಾಸ್ತು ಮಿಕ್ಕಿದೆಲ್ಲ ಓಸ್ತು" (ಪುಟ ೭೧) ಎಂದು ಕ್ರಾಂತಿ ಇರುವುದೇ ದುಶ್ಚಟಗಳಲ್ಲಿ ಎನ್ನುವ ನಿರ್ಣಯಕ್ಕೆ ಬರುತ್ತಾನೆ. ನಾನು ಸರಿ ದಾರಿಯಲ್ಲಿಯೇ ಹೆಜ್ಜೆ ಇಡುತ್ತಿದ್ದೇನೆ. ಈ ಸಮಾಜ ನನ್ನನ್ನು ತಪ್ಪುದಾರಿಗೆ ಎಳೆಯುತ್ತಿದೆ. ತನ್ನ ತಪ್ಪಿಗೆ ತಾನೇ ಹೊಣೆಗಾರನಾಗುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಾನೆ.

ಪರೋಕ್ಷವಾಗಿ ತಂದೆಯ ವಿರುದ್ಧ ಈ ಸಮಾಜದ ವಿರುದ್ಧ ಬಂಡೇಳುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತಾನೆ. ಈ ಮಧ್ಯೆ ಅವನಿಗೆ ಕಣ್ಣಿಗೆ ಕಾಣಿಸಿದ್ದು ಥೇಟರ ಮಾಲಿಕನ ಮಗನ ಗ್ಯಾಂಗ್. ಆ ಗುಂಪನ್ನು ನೋಡಿದಾಗ ಅವನಿಗೆ ಅವರೆಲ್ಲರೂ ಜೀವನದ ಪ್ರತಿಯೊಂದು ಕ್ಷಣವನ್ನು ಆನಂದದಿಂದ ಅನುಭವಿಸುತ್ತಿದ್ದಾರೆ. ಮಾಂಸ ತಿನ್ನುವುದು, ಕುಡಿಯುವುದು, ಸಿಗರೇಟು ಸೇದುವುದು ಎಲ್ಲವನ್ನು ಎಷ್ಟೊಂದು ನಿರ್ಭೀತಿಯಿಂದ ಮಾಡುತ್ತಿದ್ದಾರೆ. ಅಂದುಕೊಳ್ಳುತ್ತಾ ಅವನು ಆ ಗ್ಯಾಂಗಿಗೆ ಸೇರಿಕೊಳ್ಳುತ್ತಾನೆ. ಸ್ವತಂತ್ರವಾಗಿ ಬದುಕುವ, ಬಂಡೆಳುವ ಹೆಸರಿನಲ್ಲಿ ಎಲ್ಲವನ್ನು ರೂಢಿಸಿಕೊಳ್ಳುತ್ತಾನೆ. ತಾನು ಬಯಸಿದ ಹೊಸ ಆಯಾಮವನ್ನು ತಾನು ತಂದುಕೊಂಡನು ಎಂಬ ಹುಮ್ಮಸಿನೊಂದಿಗೆ ಬದುಕುತ್ತಾನೆ. ಹಣಗಳಿಸುವ ಹೊಸ ಹೊಸ ದಾರಿಗಳನ್ನು ಹುಡುಕ ತೊಡಗುತ್ತಾನೆ. ಕಾಲೇಜಿನಲ್ಲಿ ಪ್ರಾಧ್ಯಾಪಕರಿಗೆ ಗೌರವ ಕೊಡದೆ ಅಡ್ಡಾಡುವುದು, ಹುಡುಗಿಯರನ್ನು ಚೇಡಿಸುವುದು ಎಲ್ಲೆಂದರಲ್ಲಿ ಚಿತ್ರಗಳನ್ನು ಬಿಡಿಸುವುದು, ಏನಾದರೂ ಕೇಳಿದರೆ ಉದ್ಧಟತನದಿಂದ ಉತ್ತರ ಕೊಡುವುದು, ಅಶ್ಲೀಲ ಕಾದಂಬರಿಗಳನ್ನು ಓದತೊಡಗುತ್ತಾನೆ. ಎಲ್ಲರೂ ತನ್ನನ್ನು ಗುರುತಿಸಬೇಕು ಎನ್ನುವ ಉದ್ದೇಶದಿಂದ ಕಾಲೇಜ್ ಡೇ ದಿನ ತನಗೆ ತಾನೇ 'ಫಿಶ್‌ಪಾಂಡ್' (ಒಂದು ರೀತಿಯ ಆಟ) ಬರೆದ ಅದರಲ್ಲಿ ಗ್ಯಾಂಗ್‌ನಾಯಕ ಥೇಟರ್ ಮಾಲಿಕನ ಮಗನ ಪ್ರೇಯಸಿಯ (N2)ಯ ಹೆಸರು ಬರೆದು ಸೇರಿಸುತ್ತಾನೆ. ಅದರಿಂದ ಅವಮಾನಿತನಾಗಿ ಹೊರ ಬರುತ್ತಾನೆ. ಇಲ್ಲಿ ಕೃತಿಯ ನಾಯಕ ಮುಖವಾಡ ಹಾಕಿ ಬದುಕಿದನೆ ಹೊರತು. ತನ್ನ ನಿಜವಾದ ಅಸ್ತಿತ್ವ ಯಾವುದು ಎಂಬುದರ ಕಲ್ಪನೆ ಕೂಡಾ ಇಲ್ಲ. ಬಂಡೇಳುವ ನೆಪದಲ್ಲಿ ಅವನು ಮಾಡಿದ ಎಲ್ಲಾ ಕಾರ್ಯಗಳು ಅಯಶಸ್ವಿಯಾಗುತ್ತವೆ. ಉಳಿದವರ ಹಾಗೆ ಸುಖವಾಗಿರಲು, ಸ್ವತಂತ್ರವಾಗಿ ಬಾಳಲು ನನಗೆ ಸಾಧ್ಯವಿಲ್ಲವೇ' ಎಂಬ ಪ್ರಶ್ನೆಗಳ ಮೂಲಕ ಕಂಡುಕೊಂಡ ಕ್ರಾಂತಿಯ ದಾರಿಗಳು ಚಕ್ರವ್ಯೂಹದೊಳಗೆ ಸಿಕ್ಕರಿಕೊಂಡು ಹೊಸ ಬರಲು ಸಾಧ್ಯವಾಗದೆ ಜೀವನದ 'ನಾಲ್ಕನೆಯ ಆಯಾಮ'ವನ್ನು ಅನುಭವಿಸಲು ಮಾಡಿದ ಪ್ರಯೋಗ ನಿಷ್ಫಲವಾಗುತ್ತದೆ.

ನಾಲ್ಕನೆಯ ಭಾಗದಲ್ಲಿ ಇಲ್ಲಿ ನಾಯಕನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ತಾನು ಹೀಗೆ ವೇಳೆ ಹಾಳು ಮಾಡಿದರೆ ನನ್ನ ಜೀವನಕ್ಕೆ ಬೆಲೆಯಿರುವುದಿಲ್ಲ. ನನ್ನ ಸ್ನೇಹಿತ ಈಗಾಗಲೇ ಉನ್ನತ ಮಟ್ಟಕ್ಕೆ ಹೋಗಿರಬಹುದು. ನಾನು ಮಾತ್ರ ಈ ಚೌಕಟ್ಟಿನಲ್ಲಿಯೇ ಬಂಧಿಯಾಗಿದ್ದೇನೆ. ತನ್ನನ್ನು ತಾನು ಪ್ರಶ್ನೆ ಮಾಡಿಕೊಳ್ಳುತ್ತಾನೆ. ತಂದೆಯ ಇಚ್ಛೆಯಂತೆ ಸರ್ಕಾರಿ ನೌಕರಿ ಹಿಡಿಯದೆ, ತನ್ನ ಮನಸ್ಸಿನಲ್ಲಿ ಮೆಡಿಕಲ್ ರಿಪ್ರೆಜೆಂಟೆಟೀವ್ ಆಗುವ ಆಸೆ ಬೆಟ್ಟದಷ್ಟು ಇದ್ದರು ಕೂಡಾ ಅದು ತನ್ನಿಂದ ಸಾಧ್ಯವಿಲ್ಲ ಎನ್ನುವುದು ಅನುಭವಕ್ಕೆ ಬಂದಾಗ ಅನಿವಾರ್ಯವಾಗಿ ಚಹಾ ಏಜೆಂಟನಾಗುತ್ತಾನೆ. ಇಲ್ಲಿಯೂ ಕೂಡಾ ಬೇರೆ ರೀತಿಯ ದಾರಿಯನ್ನು ಹುಡುಕಿಕೊಳ್ಳುತ್ತಾನೆ. ಸಮಾಜದಲ್ಲಿ ತಾನು ಗುರುತಿಸಿಕೊಳ್ಳಬೇಕು ಎನ್ನುವ ತುಮುಲ ಮಾತ್ರ ಸಂಪೂರ್ಣವಾಗಿ ಮನಸ್ಸಿನಿಂದ ಹೊರ ಹಾಕಿಲ್ಲ ತನ್ನಲ್ಲಿರುವ ಪ್ರತಿಭೆಗಿಂತ ಹೆಚ್ಚಿನ ಪ್ರಭಾವವನ್ನು ಜನರ ಮೇಲೆ ಬೀರುವುದರೊಂದಿಗೆ ಮತ್ತೆ ಮುಖವಾಡ ಧರಿಸಿ ಸಾಕಷ್ಟು ಬಡಾಯಿ ಕೊಚ್ಚಿಕೊಳ್ಳುತ್ತಾನೆ. ಎಲ್ಲವನ್ನು ಬಲ್ಲವನಂತೆ ನಟಿಸುತ್ತಾ ಶ್ರೀಮಂತರೊಬ್ಬರ ಮಗಳ ಮೇಲೆ ಪ್ರಭಾವ ಬೀರಿ ನೃತ್ಯಕಲಿಸುವ ನೆಪದೊಂದಿಗೆ ಅವಳನ್ನು ಸ್ಪರ್ಶ ಮಾಡುವ ಹಂತಕ್ಕೆ ಇಳಿಯುತ್ತಾನೆ. ಆದರೆ ಅದು ಅವನಿಂದ ಸಾಧ್ಯವಾಗದೆ ಅಲ್ಲಿಂದ ಪಲಾಯನ ಹೊಂದುತ್ತಾನೆ. ಏಕೆಂದರೆ ದೌರ್ಬಲ್ಯ ಅವನ ನಿಜಾವಾದ ವ್ಯಕ್ತಿತ್ವ ಹೊರ ಸೂಸುತ್ತದೆ. ಮುಖವಾಡ ಹಾಕಿ ಬದುಕು ನಡೆಸುವವರಿಗೆ ಸತ್ಯವನ್ನು ಎದುರಿಸುವ ಧೈರ್ಯ ಇರದು. ಕಾಲೇಜು ಹಂತದಲ್ಲಿ ಕಾಡುತ್ತಿದ್ದ ಹೊಸ ಬಯಕೆಯಾದ 'ಕಾಮ'ವನ್ನು ಅನುಭವಿಸಬೇಕೆಂಬ ಉತ್ಕಟ ಹಸಿವೆ ಅವನನ್ನು ವೇಶ್ಯೆ ಮನೆಗೆ ಕರೆದುಕೊಂಡು ಚೆಲ್ಲುತ್ತದೆ. ಈ ಘಟನೆ ನಂತರ ಅವನ ಮನಸ್ಸು ಈನ್ನಷ್ಟು ವಿಚಲಿತವಾಗುತ್ತದೆ. ತನ್ನನ್ನು ತಾನು ಹಳಿದುಕೊಳ್ಳಲು ಪ್ರಾರಂಭಿಸುತ್ತಾನೆ. ದಾರಿಯಲ್ಲಿ ನಡೆಯುತ್ತಿರುವಾಗ ಎಲ್ಲರು ತನ್ನ ಕಡೆಗೆ ಬೊಟ್ಟು ಮಾಡಿ ತೋರಿಸುತ್ತಿದ್ದಾರೆ ಎಂಬ ಭೀತಿ ಪ್ರಾರಂಭವಾಗುವವರೊಂದಿಗೆ ಸಿಫಿಲಿಸ್‌ದ ರೋಗ ತನಗೆ ಬಂದಿದೆ ಎಂಬ ಆತಂಕದಿಂದ ಬಳಲುತ್ತಾನೆ. ಈ ನಡುವೆ ಅವನ ಸುಪ್ತ ಪ್ರಜ್ಞೆಯಲ್ಲಿ ಅಡಗಿದ ಆ ಹುಡುಗಿ ಸ್ನೇಹಿತ ಇಬ್ಬರು ಮದುವೆಯಾಗಿರುವ ಚಿತ್ರವನ್ನು ಪತ್ರಿಕೆಯಲ್ಲಿ ನೋಡುತಿದ್ದಂತೆ ರೈಲ್ವೆ ಸ್ಟೇಶನ್ನಿನಲ್ಲಿ ಮೂರ್ಛೆ ಹೋಗುತ್ತಾನೆ. ಕಣ್ಣು ತೆಗೆದಾಗ ತಂದೆ ತಾಯಿಯನ್ನು ನೋಡುತ್ತಿದ್ದಂತೆ ತಾನು ಆಸ್ಪತ್ರೆಯಲ್ಲಿ ಇರುವುದು ಅನುಭವಕ್ಕೆ ಬರುತ್ತದೆ. ತಾನು ಮಾಡಿದ ಕಾರ್ಯಕ್ಕೆ ಪ್ರಾಯಶ್ಚಿತ ಆದಂತೆ ಕಣ್ಣಿನಿಂದ ನೀರು ಮಾತ್ರ ಅವಿರತವಾಗಿ ಹರಿಯುತ್ತಿರುತ್ತದೆ.

ನಾಲ್ಕನೆಯ ಆಯಾಮ ಕಾದಂಬರಿಯನ್ನು ಇಡೀಯಾಗಿ ಓದಿದಾಗ ಇದೊಂದು ಹೊಸ ದೃಷ್ಟಿಯಿಂದ ರಚಿತವಾದ ಕೃತಿ ಎಂಬುದು ನಮ್ಮ ಗಮನಕ್ಕೆ ಬರುತ್ತದೆ. ಈ ಕೃತಿ ಸಂಪೂರ್ಣವಾಗಿ ಮನಃಶಾಸ್ತ್ರೀಯ ಹಿನ್ನೆಲೆಯಲ್ಲಿ ಮೂಡಿ ಬಂದಿದೆ. ನಮ್ಮ ಲೇಖಕರ ಮೇಲೆ ಬೀರಿದ ಪಾಶ್ಚಾತ್ಯರ ಪ್ರಭಾವದಿಂದ ಕಾದಂಬರಿಯಲ್ಲಿ ಅನೇಕ ಬದಲಾವಣೆಗಳಾದವು. ಅಸ್ತಿತ್ವವಾದ, 'ಅಸಂಗತವಾದ', 'ಅನಾಥ ಪ್ರಜ್ಞೆ', ಮುಂತಾದ ಪಾಶ್ಚಾತ್ಯ ಪರಿಕಲ್ಪನೆಗಳನ್ನು ಸ್ವೀಕರಿಸಿದ ಕನ್ನಡ ಕಾದಂಬರಿ ಸಾಹಿತ್ಯ ಹೊಸ ರೂಪವನ್ನು ಪಡೆದುಕೊಂಡಿತು. ಈ ಹೊಸ ರೂಪಗಳನ್ನು ಬಳಸಿಕೊಂಡ ಕನ್ನಡ ಕಾದಂಬರಿಕಾರರು ಬರಬರುತ್ತ ತಮ್ಮ

ಕಾಲ ಮತ್ತು ಅನುಭವದ ಪ್ರತೀತವಾಗಿ ಹೊಸ ನೆಲೆಯಲ್ಲಿ ಬಳಕೆಯಾದವು. ನವ್ಯ ಕಾದಂಬರಿಕಾರರು ಹೆಚ್ಚಿನ ರೀತಿಯಲ್ಲಿ ಅಸ್ತಿತ್ವವಾದದ ಹಿನ್ನೆಲೆಯಲ್ಲಿ ಬರೆದರು. ಆದರೆ ಕುಸುಮಾಕರರು ಎಲ್ಲಾ ಕಾದಂಬರಿಗಳನ್ನು ಪರಿಶೀಲಿಸಿದಾಗ ಮನಃಶಾಸ್ತ್ರದ ಹಿನ್ನೆಲೆಯಲ್ಲಿ ಮೂಡಿರುವುದು ಕಂಡುಬರುತ್ತದೆ. ಇವರ `ನಾಲ್ಕನೆಯ ಆಯಾಮ`ದಲ್ಲಿ ಅಸ್ತಿತ್ವವಾದ ನೇರವಾಗಿ ಬಳಕೆಯಾಗಿರದಿದ್ದರು ಕೂಡಾ ಪರೋಕ್ಷವಾಗಿ ಬಂದಿರುವುದು ಕಾಣುತ್ತದೆ. "ಮನುಷ್ಯ ತಾನೇನಾಗಬೇಕೆಂದು ನಿಶ್ಚಯಿಸಿ ಏನಾಗುತ್ತಾನೋ ಅದೇ ನಿಜ ಎನ್ನುವುದು ಅಸ್ತಿತ್ವವಾದದ ಮೊದಲ ತತ್ವ". ಆದರೆ ಇಲ್ಲಿಯ ನಾಯಕ ತಾನು ಏನಾಗಬೇಕೆಂಬ ಯೋಚನೆಯಾಗಲಿ, ಸ್ವಂತ ನಿರ್ಧಾರ ಕೂಡಾ ಇಲ್ಲದ ಪ್ರತಿಯೊಂದಕ್ಕೂ ಬೇರೆಯವರ ಮೇಲೆ ಅವಲಂಬಿತ ಮತ್ತೊಬ್ಬರ ಅನುಕರಣೆ ಮಾಡುವುದರಲ್ಲಿಯೇ ತನ್ನ ಜೀವನವನ್ನು ರೂಪಿಸಿಕೊಳ್ಳುವುದನ್ನು ನಾವು ಕಾಣುತ್ತೇವೆ.

ಉದಾ :

"ಕಾಲೇಜಿನಲ್ಲಿ ಅವನಿಗೆ ಒಬ್ಬ ಸ್ನೇಹಿತ ದೊರೆತ ಅವನು ಸ್ನೇಹಿತನ ಅಟ್ಟುಕಟ್ಟುತನಕ್ಕೆ ಮಾರುಹೋದ, ಅವನಿಗೂ ಪ್ಯಾಂಟ್ ಇರಲಿಲ್ಲ. ಆದರೆ ಇದ್ದ ಪಾಯಜಾಮಾವನ್ನೇ ಸ್ವಚ್ಛವಾಗಿಟ್ಟುಕೊಂಡಿದ್ದ. ಕಾಲಲ್ಲಿ ಚಪ್ಪಲಿ ಅವನ ಜತೆಗಾರನ ಮನಸ್ಸು ಪ್ರಸನ್ನವಾಗಿತ್ತು. ಈ ಪ್ರಸನ್ನತೆ ತನ್ನದಾಗಬೇಕೆಂದು ಅವನು ಪ್ರಯತ್ನಿಸಿದ ಸ್ನೇಹಿತನ ಜೀವನದಲ್ಲಿಯ ನಿತ್ಯ ಕ್ರಮವನ್ನು ನೋಡಿ ತನ್ನ ಬದುಕಿನಲ್ಲಿ ಅದನ್ನು ಅಳವಡಿಸಿಕೊಳ್ಳಲು ನಿರ್ಧರಿಸಿದ. ಇಂದಿನಿಂದ ಸ್ನೇಹಿತನ ಹೆಜ್ಜೆಯಲ್ಲಿ ಹೆಜ್ಜೆ ಹಾಕುವುದು ಸ್ನೇಹಿತನಂತೆನಾನು ಆಗಬೇಕು." (ಪುಟ ೨೦, ನಾಲ್ಕನೆಯ ಆಯಾಮ)

ಇಲ್ಲಿಯ ನಾಯಕನಿಗೆ ತನ್ನದೇ ಆದ ಸ್ವಂತ ವಿಚಾರ ಮಾಡುವ ಶಕ್ತಿಯಾಗಲಿ ಪರಿಸ್ಥಿತಿ ಎದುರಾದಾಗ ಸ್ವತಂತ್ರವಾಗಿ ನಿಂತು ಎದುರಿಸುವ ಧೈರ್ಯವಿಲ್ಲದೆ ಪರಿಹಾರಕ್ಕಾಗಿ ಬೇರೆಯವರ ಮೇಲೆ ಅವಲಂಬಿಸುವರು. ತಾನು ಏನಾಗಬೇಕು ಎಂಬ ಕಲ್ಪನೆ ಕೂಡಾ ಇಲ್ಲದ ನಾಯಕ. ಆ ಸ್ನೇಹಿತ ಅವನು ಆಗಬಹುದಾದ ವ್ಯಕ್ತಿಯ ಸಂಕೇತವಾಗುತ್ತಾನೆ. ಸ್ನೇಹಿತ ಇವನನ್ನು ಬಿಟ್ಟು ಹೋದ ಮರುಕ್ಷಣವೇ ತೂತುಬಿದ್ದ ಬೆಲೂನಿನಂತೆ ಆಗುತ್ತಾನೆ. ಆಗ ಅವನಿಗೆ ಅನಾಥಪ್ರಜ್ಞೆ ಕಾಡಲು ಪ್ರಾರಂಭಿಸುತ್ತದೆ.

"ಹೆಜ್ಜೆ ಹೆಜ್ಜೆಗೆ ಬೆಳಕು ಕೊಟ್ಟು ಕೈ ಹಿಡಿದು ನಡೆಸಿಕೊಂಡು ಬಂದ ಸ್ನೇಹಿತ ದೂರ ಹೋದುದರಿಂದ ಅವನ ಕಣ್ಣೆದುರು ಕತ್ತಲೆ ಕವಿಯಿತು. ಅವನ ಹೃದಯ ಬರಿದೊ ತೆರವೊ ತೆರವು ಎಂಬಂತಾಯಿತು. ಸ್ನೇಹಿತನ ಪ್ರೇರಣೆಯಿಂದ ಅವನುತನ್ನ ಹೃದಯದಲ್ಲಿ ಅಗ್ನಿಕುಂಡವೊಂದನ್ನು ಹೊತ್ತಿಸಿಕೊಂಡಿದ್ದ. ತರಗೆಲೆಗಳನ್ನು ತಂದು ತಂದು ಅದರಲ್ಲಿ ಹಾಕಿ ಅದನ್ನು ಉರಿಯುತ್ತಿರುವಂತೆ ಮಾಡಿದ್ದ. ಇದಕ್ಕೆಲ್ಲ ಪ್ರೇರಕಶಕ್ತಿಯಾದ ಸ್ನೇಹಿತನೇ ಹೋದಾಗ ಅವನು ದಾರಿ ತಪ್ಪಿದವರಂತೆ ಚಡಪಡಿಸಿದ." (ಪುಟ ೪೪)

[illegible]

ಈ ರೀತಿಯಾಗಿ ಅವನಿಗೆ ಆತಂಕ, ಭಯ, ಅಸ್ತಿತ್ವವಿಲ್ಲದಿರುವಿಕೆ, ಅನಾಥಪ್ರಜ್ಞೆ ಕಾಡಲು ಕಾರಣ ಅವನು ಬೆಳೆದ ವಾತಾವರಣ. ತಂದೆ ಜೀವನದ ಬಗ್ಗೆ ಹೇಳಿದ ಕೆಲವೊಂದು ಮಾತುಗಳು ಇದು ಸ್ಪರ್ಧೆಯ ಯುಗ ಸ್ಪರ್ಧೆಯಲ್ಲಿ ಗೆದ್ದರೆ ಬದುಕು ಇಲ್ಲದಿದ್ದರೆ ಸಾವು, ಕಾಲ ತುಂಬ ಕಷ್ಟತರದ್ದಾಗುತ್ತದೆ. ನಮ್ಮ ಕಾಲ ಹೇಗೋ ಸರಿಯಿತು. ನೀವು ಏನೇನು ಅನುಭವಿಸಬೇಕಾಗುತ್ತದೆಯೋ ಯಾರು ಬಲ್ಲರು ತಂದೆಯ ಈ ಧ್ವನಿ ಅವನ ಕೈಕಾಲು ಕೆಡಿಸುತ್ತಿತ್ತು. ಇದನ್ನು ಕೇಳಿದಾಗ ನಾಯಕನಿಗೆ ಬದುಕು ಎಷ್ಟು ಭಯಂಕರ ಎನ್ನಿಸುತ್ತಿತ್ತು. ಇಲ್ಲಿ ಲೇಖಕರು ಅಸಂಗತವಾದವನ್ನು ಪ್ರಾಯೋಗಿಸಿದ್ದಾರೆ. ಬದುಕು ಯಾವಾಗಲೂ ಕೇವಲ ಸಂಗತವಾದುದಲ್ಲ ಬದಲಿಗೆ ಅದು ಅಸಂಗತವಾದುದು. ಮಾನವನ ಬದುಕು ಹೇಗೆ ವ್ಯವಸ್ಥಿತ ರೂಪದಲ್ಲಿ ಪ್ರಕಟಿಸುವುದಿಲ್ಲವೋ ಅದೇ ರೀತಿ ಅಸಂಗತತೆ ಎಂಬುದು ಸಾಹಿತ್ಯದ ವಸ್ತು ಹಾಗೂ ತಂತ್ರಕ್ಕೆ ಕಾರಣವಾಯಿತು. ಜೀವನದ ಬಗ್ಗೆ ಲೇಖಕರಿಗಿದ್ದ ಜೀವನದ ಗಾಢ ಹಾಗೂ ನಿಗೂಢ ಅನುಭವಗಳನ್ನು ಅಭಿವ್ಯಕ್ತಿಸಲು ಈ ವಾದ ಸಹಾಯಕವಾಯಿತು.

ಜೀವನ ಇಷ್ಟೊಂದು ಸಂಕೀರ್ಣ, ಜಟಿಲತೆ ಇರುವಾಗಲೂ ಕೂಡಾ ಮಕ್ಕಳನ್ನು ಬೆಳೆಸುವ ರೀತಿಯಲ್ಲಿ ಬಾಲ್ಯ ಜೀವನದಲ್ಲಿ ತಂದೆ-ತಾಯಿಗಳು ಹೇಳುವ ಮಾತುಗಳು ನಮ್ಮ ಮುಂದಿನ ಭವಿಷ್ಯ ಆಲೋಚನೆಗೆ ದಾರಿ ಮಾಡಿಕೊಡುವಂತಹವುಗಳಾಗಿರಬೇಕು. ಜೀವನ ಕಷ್ಟತರವಾದದ್ದು ಗೆದ್ದರೆ ಮಾತ್ರ ಬದುಕು ಇಲ್ಲದಿದ್ದರೆ ಸಾವು ಈ ಮಾತು ನಾಯಕನ ಮನಸ್ಸಿನ ಮೇಲೆ ಗಾಢವಾದ ಪ್ರಭಾವ ಬೀರುತ್ತದೆ. ನಾನು ಜೀವನದಲ್ಲಿ ಒಬ್ಬನೆ ನಡೆಯಲು ಸಾಧ್ಯವಿಲ್ಲ ಕೈ ಹಿಡಿದು ನಡೆಸುವವರು ಬೇಕು ಎನ್ನುವ ಮಟ್ಟಿಗೆ ಬರುತ್ತಾನೆ. ಹೀಗಾಗಿ ಸ್ವಂತ ಅಸ್ತಿತ್ವ ಕಳೆದುಕೊಳ್ಳುವುದರೊಂದಿಗೆ ಸ್ನೇಹಿತನ ಮೇಲೆ ಅವಲಂಬನೆ ಸ್ನೇಹಿತ ಮರೆಯಾದರೆ ಅನಾಥ ಪ್ರಜ್ಞೆ ಕಾಡಲು ಪ್ರಾರಂಭಿಸುತ್ತದೆ. ಹೀಗೆ ಹಲವು ರೀತಿಯ ಆಯಾಮಗಳಲ್ಲಿ ಅವನ ಬದುಕು ವ್ಯಕ್ತವಾಗುತ್ತದೆ. ಈ ಕಾದಂಬರಿಯ ಬಹುಪಾಲು ಅರ್ಥ ಅಡಗಿರುವುದು ಅಲ್ಲಿನ ಕನಸುಗಳಲ್ಲಿ ಕನಸುಗಳು ನಮ್ಮ ಸುಪ್ತ ವ್ಯವಸ್ಥೆಯ ಕನ್ನಡ ಎಂಬುವುದು ನಮಗೆ ಗೊತ್ತೇ ಇದೆ. ಮನುಷ್ಯನ ಮನಸ್ಸನ್ನು ಪದರ ಪದರಾಗಿ ಬಿಚ್ಚಿ, ವಿಶ್ಲೇಷಿಸಿ, ವಿಮರ್ಶಿಸಿ ಸರಳ ಸೈದ್ಧಾಂತಿಕ ಹಿನ್ನಲೆಯಲ್ಲಿ ಸಾಮಾನ್ಯರಿಗೂ ಸುಪ್ತ ಮನಸ್ಸಿನ ಪರಿಚಯ ಮಾಡಿಸಿದ ಹಿರಿಮೆ ಫ್ರಾಯ್ಡ್‌ಗೆ ಸಲ್ಲುತ್ತದೆ. ಈ ಕೃತಿಯಲ್ಲಿ ನಾಯಕನಿಗೆ ಬೀಳುವ "ಕನಸುಗಳು ಎರಡು ವರ್ಷಗಳಿಂದ ಅವನು ಒಂದು ಕನಸನ್ನು ಅನೇಕ ಸಲ ಕಂಡಿದ್ದ ಅಪಾರವಾದ ಜಲರಾಸಿ ತಾನು ಮಧ್ಯದಲ್ಲಿದ್ದಾನೆ. ಯಾವ ಆಸರೆಯೂ ಇಲ್ಲ. ಕಡಲಿನಂತಹ ಆ ಜಲರಾಸಿಯಲ್ಲಿ ಇನ್ನೊಂದು ಪಿಳ್ಳೆ ಕೂಡಾ ಕಣ್ಣಿಗೆ ಕಾಣುವಂತಿಲ್ಲ ತಾನೊಬ್ಬನೆ ಈಸುತ್ತಿದ್ದಾನೆ. ಭೋರ್ಗರೆಯುವ ಪ್ರವಾಹದ ಗರ್ಜನೆ, ಬಿರುಗಾಳಿಯ ಹೊಡೆತ ಇವುಗಳನ್ನು ಮೀರಿಸಿ ಅವನು ಈಸುವ ಸುದ್ದಿ ಕೇಳಿಬರುತ್ತದೆ. ಅವನ ವೇಗವೂ ಸಾಕಷ್ಟಿದೆ. ಅವನಿಗೆ ದಣಿವು ಎನಿಸುತ್ತಿಲ್ಲ. ಆದರೆ ಒಂದು ಬಗೆಯ ಅವ್ಯಕ್ತ ಭೀತಿಯಿದೆ." (ನಾಲ್ಕನೆಯ ಆಯಾಮ, ಪುಟ ೦೧) ನೀರು ಬದುಕಿನ ಭೀಕರತೆಯನ್ನು ತೋರಿಸುತ್ತದೆ. ಈಸುವುದು ತನ್ನ ಪ್ರಯತ್ನ ಎಂದುಕೊಳ್ಳುತ್ತಾನೆ. ಜೀವನದಲ್ಲಿ ತಾನು ಮುಂದೆ ಬರಬೇಕು

[illegible]

ಉತ್ಸಾಹದಿಂದ ಬದುಕಬೇಕು ಏನಾದರೂ ಸಾಧಿಸಬೇಕು ಎನ್ನುವ ಹಠ ನಾಯಕನಿಗೆ ಇರುವುದು ಈ ಕನಸಿನ ಮೂಲಕ ತಿಳಿಯುತ್ತದೆ. ಆದರೆ ತಂದೆ ಹೇಳಿದ ಬದುಕಿನ ಭೀಕರತೆಯನ್ನು ನೆನೆಸಿಕೊಂಡಾಗ ಅವನಿಗೆ ಬದುಕು ಕಷ್ಟಗಳ ಸಂಕೋಲೆ ಎಂದೆನ್ನಿಸುತ್ತದೆ.

ನಾಯಕ ತನ್ನ ಬಾಲ್ಯ ಜೀವನವನ್ನು ವರ್ತಮಾನದಲ್ಲಿ ಕುಳಿತು ಭೂತಕಾಲದಲ್ಲಿ ನಡೆದು ಹೋದ ತನ್ನ ಬಾಲ್ಯದ ಕೆಲವು ಘಟನೆಗಳನ್ನು ನೆನಪಿಸಿಕೊಳ್ಳುತ್ತಾನೆ. ಇಲ್ಲಿ ಪ್ರಜ್ಞಾಪ್ರವಾಹ ತಂತ್ರವನ್ನು ಬಳಸಿದ್ದಾರೆ. ತಂದೆ ಜೀವನದ ಬಗ್ಗೆ ಭೀತಿ ನಿರ್ಮಾಣ ಮಾಡಿ, ತನ್ನನ್ನು ದುರ್ಬಲನನ್ನಾಗಿ ಮಾಡಿ, ತನ್ನ ವ್ಯಕ್ತಿತ್ವವನ್ನು ನಿಸ್ಸತ್ವ ಮಾಡಿ ತನ್ನ ಜೀವನವನ್ನೇ ಹಾಳು ಮಾಡಿ ಬಿಟ್ಟಿದ್ದಾನೆ. ಎಂಬ ತೀರ್ಮಾನಕ್ಕೆ ಬರುತ್ತಾನೆ. ಶಾಂತಿನಾಥ ದೇಸಾಯಿಯವರು ಈ ಕಾದಂಬರಿಯ ಬಗ್ಗೆ ಹೇಳುವಂತೆ "ಜೀವನವನ್ನು ಎದುರಿಸಲು ಬೇಕಾದ ಧೈರ್ಯ, ಆತ್ಮವಿಶ್ವಾಸ, ಸ್ಫೂರ್ತಿ, ಚೈತನ್ಯ ಇವುಗಳು ಬೆಳೆಯುವಂತೆ ಸಹಾನುಭೂತಿಯಿಂದ ಪ್ರೀತಿಯಿಂದ ತಿಳುವಳಿಕೆಯಿಂದ ಮಗನನ್ನು ಹುರಿದುಂಬಿಸುವುದನ್ನು ಬಿಟ್ಟು ಜೀವನವೆಂದರೆ ಅಪಾಯ ಅನರ್ಥಗಳಿಂದ ತುಂಬಿದ ಭಯಂಕರ ಕಾಡು ಎಂಬ ಕಲ್ಪನೆಯನ್ನು ಕೊಟ್ಟ." ತಂದೆಯ ಪ್ರಭುತ್ವದಿಂದ ಪಾರಾಗಲು ಕಥಾನಾಯಕ ಹವಣಿಸುತ್ತಾನೆ. ಪ್ರತಿಯೊಂದು ಕಾರ್ಯದಲ್ಲಿ ತಂದೆ ಅಡ್ಡ ಬಂದು ಹಾಗೆ ಮಾಡಬೇಡ, ಹೀಗೆ ಮಾಡಬೇಡ ನೀನು ಯಾವ ಕೆಲಸಕ್ಕೆ ಸೇರಿದರೆ ನಿನ್ನ ಭವಿಷ್ಯ ನಿರ್ಧಾರವಾಗುತ್ತದೆ ಎಂಬುದು ನನಗೆ ಚೆನ್ನಾಗಿ ಗೊತ್ತು. ಪ್ರತಿಯೊಂದಕ್ಕೂ ಅಪ್ಪಣೆ ಮಾಡುವ ತಂದೆಯ ಈ ಮಾತುಗಳು ಅವನಿಗೆ ಮುಂದೆ ಹೆಜ್ಜೆಯನ್ನು ಇಡಲು ದಾರಿ ಮಾಡಿಕೊಡದೆ ದ್ವಂದ್ವಕ್ಕೆ ಬೀಳಿಸುತ್ತಿದ್ದವು. ತಂದೆಯ ವಿಚಾರಗಳು ನಾಯಕನಿಗೆ ಒಪ್ಪಿಗೆಯಿಲ್ಲದಿದ್ದರೂ ಕೂಡಾ ಎದುರು ನಿಂತು ಮಾತನ್ನಾಡುವ ಧೈರ್ಯ ಕೂಡಾ ಅವನಿಗೆ ಇರಲಿಲ್ಲ. ತಂದೆಯ ಮೇಲೆ ಹಠ ಸಾಧಿಸಬೇಕು ಎನ್ನುವ ನಾಯಕನ ಮನೋಭಾವನೆ ಕನಸುಗಳ ಮೂಲಕ ವ್ಯಕ್ತವಾಗುತ್ತದೆ. ಫ್ರಾಯ್ಡ್‌ನ ಸಿದ್ಧಾಂತ ಪ್ರಕಾರ "ನಮ್ಮ ಸುಪ್ತ ಮನಸ್ಸಿನ ಆಸೆ ಆಕಾಂಕ್ಷೆಗಳು ಸಿದ್ಧಿಸದ ಬಯಕೆಗಳು ಬೇರೆಯವರ ಮೇಲಿನ ರಾಗ-ದ್ವೇಷಗಳು ಕನಸುಗಳಾಗಿ ನಿದ್ರೆಯಲ್ಲಿ ಕಾಣಿಸಿಕೊಳ್ಳುತ್ತದೆ." ತಂದೆಯ ಉಪದೇಶಗಳ ಕಂತೆಯೇ ಹರಿದುರುತ್ತಿತ್ತು. ಪರಿಣಾಮವಾಗಿ ಭಯ, ದ್ವೇಷ ಈ ಭಯವೇ ಅವನ ಸಾಧನೆಯ ಪ್ರಯತ್ನದಲ್ಲಿ ದೊಡ್ಡ ತೊಡರುಗಾಲು, ತಂದೆಯ ಬಗ್ಗೆ ದ್ವೇಷ ಬೆಳೆಯಲು ಕಾರಣವಾಗುತ್ತದೆ. ಕನಸುಗಳ ಮೂಲಕ ಅವನ ಒಳ ತುಮುಲಗಳನ್ನು ಬಿಂಬಿಸುವ ಚಿತ್ರ ಕಾದಂಬರಿಯುದ್ದಕ್ಕೂ ನಮಗೆ ಕಾಣುತ್ತದೆ.

೩.೨ ಕಾದಂಬರಿಯ ಆಶಯ-ಆಕೃತಿ

ಸಮಾಜ ನಿರಂತರ ಬದಲಾವಣೆಗೆ ಹೊಂದುತ್ತಿರುತ್ತದೆ. ಈ ಸಮಾಜದಲ್ಲಿ ಕಾಲಕಾಲಕ್ಕೆ ನಡೆಯುವ ಬದಲಾವಣೆಗಳನ್ನು ಸೃಜನಶೀಲ ಸೂಕ್ಷ್ಮ ಸಂವೇದನೆಯುಳ್ಳ ಮನಸ್ಸು ಬೇಗನೆ ಅರಿತುಕೊಳ್ಳುತ್ತದೆ. ಈ ರೀತಿಯಾಗಿ ಬದಲಾದ ಚಿಂತನೆಗೆ, ಅಭಿವ್ಯಕ್ತ ಮಾಡುವ ವ್ಯಕ್ತಿಯ ಆಶಯಕ್ಕೆ ಹಳೆಯ ಸಾಹಿತ್ಯ ರೂಪಗಳು ಪ್ರಭಾವಿತವಾದವು. ಇಂಥ ಸಂದರ್ಭದಲ್ಲಿ ಸಾಹಿತಿಯಾದವನು ಹೊಸ ಮಾರ್ಗದ ಅನ್ವೇಷಣೆಯಲ್ಲಿ

ಪರಂಪರೆಯೊಡನೆ ಹೊರನಾಡಿನ ಸಾಹಿತ್ಯವನ್ನು ಬಾಚಿಕೊಳ್ಳಲು ಹಾತೊರೆಯುತ್ತಾನೆ. ಅಲ್ಲಿನ ಚಿಂತನೆ, ಸಾಹಿತ್ಯ ಪ್ರಕಾರಗಳನ್ನು ಅಭಿವ್ಯಕ್ತಿ ವಿಧಾನಗಳನ್ನು ನಮ್ಮದರೊಡನೆ ಜೋಡಿಸುವ ಕಾರ್ಯ ಹೀಗೆ ನಿರಂತರ ಸಾಗುತ್ತಿರುತ್ತದೆ.

ನವೋದಯ ಸಾಹಿತಿಗಳಿಂದ ಆರಂಭವಾದ ಈ ಪಾಶ್ಚಾತ್ಯ ಪ್ರಭಾವದ ಸ್ವೀಕಾರ ನವ್ಯರಲ್ಲಿ ಹೆಚ್ಚು ವ್ಯಾಪಕವಾಗಿ ನಡೆಯಿತು. ಅಲ್ಲಿನ ಆಲೋಚನೆ, ಚಿಂತನೆ, ತಂತ್ರ, ವಸ್ತು ಎಲ್ಲವನ್ನು ಹೆಚ್ಚಿನ ಪ್ರಮಾಣದಲ್ಲಿ ನಮ್ಮವರು ಸ್ವೀಕಾರ ಮಾಡಿಕೊಂಡಿರುವುದು ಉಂಟು. ಅಲ್ಲಿನ ವಿಚಾರಗಳನ್ನು ತೆಗೆದುಕೊಂಡರು ಕೂಡಾ ಅವೆಲ್ಲವುಗಳು ನಮ್ಮ ನೆಲದ ಚಿಂತನೆಗಳೇನೋ ಅನ್ನುವಷ್ಟರ ಮಟ್ಟಿಗೆ ಇವುಗಳನ್ನೆಲ್ಲಾ ಬಳಸಿಕೊಂಡು ಹೊಸ ರೀತಿಯ ಕಾದಂಬರಿಗಳನ್ನು ನೀಡಿದ್ದಾರೆ ಎಂಬುದನ್ನು ಮರೆಯುವ ಹಾಗಿಲ್ಲ.

ಈ ರೀತಿಯಾಗಿ ಹೊಸ ಹೊಸ ಚಿಂತನೆ, ಅಭಿವ್ಯಕ್ತಿ, ವಿಚಾರಧಾರೆಯ ಮೂಲಕ ಕಾದಂಬರಿಯಗಳನ್ನು ನೀಡಿದವರಲ್ಲಿ ಕುಸುಮಾಕರ ದೇವರಗೆಣ್ಣೂರರು ಒಬ್ಬರು.

ನವ್ಯ ಕಾದಂಬರಿಕಾರರೆಂದು ಗುರುತಿಸಲ್ಪಟ್ಟ ಕುಸುಮಾಕರ ದೇವರಗೆಣ್ಣೂರ ಅವರ ಪ್ರತಿಯೊಂದು ಕಾದಂಬರಿಗಳು ವ್ಯಕ್ತಿಯನ್ನೇ ಕೇಂದ್ರವಾಗಿಟ್ಟು ಚಿತ್ರಿಸುವುದರ ಮೂಲಕ ಜೀವನಕ್ಕೆ ಹೆಚ್ಚು ಹೆಚ್ಚು ಹತ್ತಿರವಾದ ವಿಷಯಗಳ ಮೇಲೆಯೇ ದೃಷ್ಟಿ ಬೀರುತ್ತಾ, ಬದುಕಿನ ಸಂಕೀರ್ಣತೆಯನ್ನು ಸೂಕ್ಷ್ಮವಾಗಿ ಕಟ್ಟಿಕೊಡುವುದರ ಮೂಲಕ ಇವರ ಒಂದು ನಿಲುವು ಏನಾಗಿತ್ತು ಎಂಬುದನ್ನು ತಿಳಿದುಕೊಳ್ಳಲು ನಮಗೆ ಸಾಧ್ಯವಾಗುತ್ತದೆ. ಪ್ರತಿಯೊಬ್ಬ ಕಾದಂಬರಿಕಾರನು ಒಂದು ಆಶಯವನ್ನು ಹಿನ್ನೆಲೆಯಾಗಿ ಇಟ್ಟುಕೊಂಡು, ಅಂದರೆ ಧಾರ್ಮಿಕ, ರಾಜಕೀಯ, ಕೌಟುಂಬಿಕ, ಸಾಂಸ್ಕೃತಿಕ ಯಾವುದೇ ವಿಷಯಕ್ಕೆ ಸಂಬಂಧಿಸಿರಬಹುದು. ಇವುಗಳನ್ನೆಲ್ಲಾ ಹಿನ್ನೆಲೆಯಾಗಿ ಇಟ್ಟುಕೊಂಡು ತನ್ನ ಕೃತಿಯ ಮೂಲಕ ಸಮಾಜಕ್ಕೆ ಒಂದು ಸಂದೇಶವನ್ನು ಮುಟ್ಟಿಸುವ ಕಾರ್ಯದಲ್ಲಿ ಸದಾ ನಿರತನಾಗಿರುತ್ತಾನೆ.

ಈ ಆಶಯ ಪರಿಕಲ್ಪನೆಯನ್ನು ಮೊದಲು ರೂಪಿಸಿದ ಕೀರ್ತಿ ಅಮೇರಿಕಾದ ಸುಪ್ರಸಿದ್ಧ ವಿದ್ವಾಂಸರಾದ ಸ್ಮಿತ್ ಥಾಮ್ಸನ್ ಅವರಿಗೆ ಸಲ್ಲುತ್ತದೆ. "ಸಾಂಪ್ರದಾಯಿಕ ಕಥನವೊಂದರ ಚಿಕ್ಕ ಘಟಕವನ್ನು 'ಆಶಯ'ವೆಂದು ಗುರುತಿಸಲಾಗಿದೆ. ಆಶಯವಿಲ್ಲದಿದ್ದರೆ ಕಥನದಲ್ಲಿ ಮುಖ್ಯ ವಸ್ತುವನ್ನೇ ಕೈಬಿಟ್ಟಂತಾಗುತ್ತದೆ. ಇದರಿಂದಾಗಿ ಆಶಯ ವಸ್ತುವನ್ನು ಕುರಿತದ್ದು ಆಗಿರುತ್ತದೆ" (ಡಾ.ರಾಗೌ, ಪು.೪೨೪). ಯಾವುದೇ ಒಂದು ಕಾದಂಬರಿಯನ್ನು ಕೈಗೆ ಎತ್ತಿಕೊಂಡಾಗ ಯಾವ ಆಶಯದ ಮೇಲೆ ಕಥೆಯನ್ನು ವಿಭಾಗಿಸಬೇಕು ಎಂಬ ಗೊಂದಲ ಕೂಡಾ ಏಳುವುದುಂಟು. ಏಕೆಂದರೆ ಆಶಯಗಳಲ್ಲಿ ಪಾತ್ರ, ವಸ್ತು, ಘಟನೆ, ಸನ್ನಿವೇಶ ಇವೆಲ್ಲವು ಅದರಲ್ಲಿ ಸಮ್ಮಿಳಿತವಾಗಿರುತ್ತವೆ. ಚಿಕ್ಕ ಹಾಗೂ ಸರಳ ಕಥನಗಳು ಇದ್ದರೆ ಇವರಲ್ಲಿ ಯಾವುದಾದರೂ ಒಂದು ಇರುವುದರಿಂದ ಸಮಸ್ಯೆ ಎನ್ನಿಸುವುದಿಲ್ಲ. ಆದರೆ ದೀರ್ಘ ಮತ್ತು ಸಂಕೀರ್ಣ ಹೊಂದಿದ ಕಾದಂಬರಿಗಳಲ್ಲಿ ಈ ಎಲ್ಲ ಬಗೆಯ ಆಶಯಗಳೂ ಒಂದೇ ಕಥನದಲ್ಲಿ ಬರುವ

ಸಂಭವವಿರುವುದರಿಂದ ಯಾವ ಆಶಯದ ಮೇಲೆ ವಿಭಾಸಿದ್ದಾರೆ ಎಂಬ ಸಮಸ್ಯೆ ಎದುರಾಗುತ್ತದೆ. ಆಗ ಕಾದಂಬರಿಕಾರನು ಯಾವುದರ ಮೇಲೆ ಹೆಚ್ಚು ದೃಷ್ಟಿ ಹರಿಸಿ ಅದನ್ನೇ ತನ್ನ ಕೇಂದ್ರವಾಗಿಟ್ಟುಕೊಂಡು ತನ್ನ ನಿಲುವನ್ನು ಅಭಿವ್ಯಕ್ತಿಸಲು ಇಚ್ಛಿಸಿದ್ದಾನೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಆ ಒಂದು ವಸ್ತುವನ್ನೇ ಇಟ್ಟುಕೊಂಡು ಈ ಕಾದಂಬರಿಯ ಚಲನಗತಿ ಎತ್ತ ಕಡೆ ಸಾಗಿದೆ ಎಂಬುದನ್ನು ಗುರುತಿಸಲು ಸಾಧ್ಯವಾಗುತ್ತದೆ.

ಈ ಒಂದು ಆಶಯದ ಹಿನ್ನೆಲೆಯಲ್ಲಿ ಕುಸುಮಾಕರ ಕಾದಂಬರಿಗಳನ್ನು ಪರಿಶೀಲಿಸಿದರೆ, ಇವರ ಎಲ್ಲಾ ಕಾದಂಬರಿಗಳಲ್ಲಿ ಎದ್ದುಕಾಣುವ ಅಂಶ ಎಂದರೆ ಬದುಕನ್ನು ನಿರಂತರವಾಗಿ ಶೋಧದ ಒಂದು ಪರಿಧಿಯಾಗಿ ಭಾವಿಸುವ ಅದರಲ್ಲಿಯೇ ನಾಯಕರು ತಮ್ಮ ಬದುಕನ್ನು ಬಿಚ್ಚಿಕೊಳ್ಳುತ್ತಾ ಸಾಗುವುದು ಕಂಡುಬಂದರು ಕೂಡಾ ಯಾವುದೇ ರೀತಿಯ ಸಾಫಲ್ಯದ ಹಂತಕ್ಕೆ ತಲುಪಿದ್ದಾರೆ ಎಂಬುದು ಮಾತ್ರ ಕಂಡುಬರುವುದಿಲ್ಲ. ಕಥೆಯ ಪ್ರಾರಂಭದ ಹಂತದಲ್ಲಿ ನಾಯಕರು ಯಾವ ಸ್ಥಿತಿಯಲ್ಲಿ ಇದ್ದಾರೊ ಕೊನೆಗೂ ಅದೇ ಸ್ಥಿತಿಯಲ್ಲಿ ಬಂದು ನಿಂತಿರುವುದು ಗೋಚರಿಸುತ್ತದೆ. ಒಂದು ಜಂಜಾಟದಿಂದ ಬಿಡುಗಡೆಗೊಂಡು ಇನ್ನೊಂದು ಗೂಡಿನೊಳಗೆ ಕಾಲಿರಿಸುವುದರ ಮೂಲಕ ಅಸ್ತಿತ್ವವನ್ನು ಕಟ್ಟಿಕೊಳ್ಳಲು ಹಾತೊರೆಯುತ್ತಿದ್ದ ಮನಸ್ಸು ಮತ್ತೆ ದ್ವಂದ್ವಕ್ಕೆ ಒಳಗಾಗಿರುವುದು ಕಾಣಸಿಗುತ್ತದೆ. ಇಲ್ಲಿನ ನಾಯಕರಿಗೆ ಬದುಕಿನಲ್ಲಿ ಕಂಡುಬರುವ ಸಂತೋಷದ ಕ್ಷಣಗಳನ್ನು ಲೇಖಕರು ಆದಷ್ಟು ಮೊಟಕುಗೊಳಿಸುವುದರ ಮೂಲಕ ಬದುಕಿನ ವಾಸ್ತವ ಸ್ಥಿತಿಯನ್ನು ತೆರೆದಿಟ್ಟಿದ್ದಾರೆ. ಇವುಗಳ ಹಿನ್ನೆಲೆಯಲ್ಲಿ ಅವರು ಕಾದಂಬರಿಗಳ ಮೂಲಕ ಹೇಳ ಹೊರಟಿರುವ ಆಶಯ ಏನಾಗಿತ್ತು ಎಂಬುದು ಕೂಡಾ ತಿಳಿದುಬರುತ್ತದೆ.

ಈ ರೀತಿಯಾಗಿ ಲೇಖಕರು ಸೂಕ್ಷ್ಮ ನಿರೀಕ್ಷಣಾ ಶಕ್ತಿ ಅನುಭವದ ಒಂದು ಪ್ರಬುದ್ಧತೆ ತಮ್ಮ ಒಂದು ವಿಚಾರಗಳನ್ನು ನಿರೂಪಿಸುವ ದಾಟಿಯ ಕ್ರಮದೊಂದಿಗೆ ಕೌಶಲ್ಯಪೂರ್ಣದಿಂದ ಕೂಡಿದ ಇವರ ಕಾದಂಬರಿಗಳ ಒಳನೋಟಗಳು ಭಾರತೀಯರ ಜೀವನ ಕ್ರಮವನ್ನು ಕಟ್ಟಿಕೊಟ್ಟರೂ ಕೂಡ ಇವನ್ನೆಲ್ಲವುಗಳನ್ನು ಹಿಡಿದಿಟ್ಟಿರುವ ಅಥವಾ ನಿಯಂತ್ರಿಸಿರುವ ಚೌಕಟ್ಟು ಮಾತ್ರ ಪಾಶ್ಚಾತ್ಯರ ಓದಿನ ಒಂದು ಛಾಯೆ ಇವರ ಕಾದಂಬರಿಗಳ ಮೇಲೆ ಬೀರಿರುವುದು ಕಂಡುಬರುತ್ತದೆ. ಇಂತಹ ಒಂದು ಪಾಶ್ಚಾತ್ಯ ಪ್ರಭಾವವನ್ನು ನಾವು ಇವರ ನಾಲ್ಕನೆಯ ಆಯಾಮ ಕಾದಂಬರಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಾಣಬಹುದು. ಇದರ ಮೂಲಕ ಲೇಖಕರು ಜೀವನದ ಅರ್ಥದ ಶೋಧನೆ ಮಾಡಿಸಿರುವುದರ ಮೂಲಕ ವಿಶಿಷ್ಟವಾದ ಆಶಯ ಕೂಡಾ ಹೊರ ಹೊಮ್ಮಿರುವುದು ಕಂಡುಬರುತ್ತದೆ. ಈ ನಾಲ್ಕನೆಯ ಆಯಾಮದಲ್ಲಿ ಮೂಡಿಬಂದ ವಾಸ್ತವತಾವಾದ ಪಾಶ್ಚಾತ್ಯರ ಪರಿಕಲ್ಪನೆಯಿಂದ ತೆಗೆದುಕೊಂಡಿದ್ದರೂ ಕೂಡಾ ಕುಸುಮಾಕರರು ತಮ್ಮದೇ ಆದ ವಿಶಿಷ್ಟ ರೀತಿಯಿಂದ ಅಳವಡಿಸಿಕೊಂಡಿರುವುದು ಮಹತ್ವದ್ದಾಗಿದೆ. ಮೊದಮೊದಲು ಸಾಹಿತಿಗಳು ರಮ್ಯ ಹಾಗೂ ಆದರ್ಶಗಳನ್ನು ಇಟ್ಟುಕೊಂಡು ಬರೆಯುತ್ತಿದ್ದು, ನಂತರ ದಿನಗಳಲ್ಲಿ ವಾಸ್ತವ ಪ್ರಪಂಚದ ಕಡೆಗೆ ತಿರುಗಿರುವುದು ಕಂಡುಬರುತ್ತದೆ. "ವಾಸ್ತವ ಪ್ರಪಂಚಕ್ಕೆ ಸಮೀಪವಾದ ನಿತ್ಯ ಜೀವನಕ್ಕೆ ಉಪಯೋಗವಾಗುವ

ಸಾಹಿತ್ಯ ನಿರ್ಮಿಸುವುದೇ ಪಾಶ್ಚಾತ್ಯ ವಾಸ್ತವವಾದಿಗಳ ಮುಖ್ಯ ಉದ್ದೇಶವಾಗಿತ್ತು." (ಡಾ.ಸಿ.ಆರ್.ಯರವಿನತೆಲಿಮಠ, ಪುಟ ೬೯) ಇಂತಹ ಉದ್ದೇಶವು ಕುಸುಮಾಕರರ ನಾಲ್ಕನೆಯ ಆಯಾಮದಲ್ಲಿ ಬಹುಪ್ರಮಾಣದಲ್ಲಿ ನಮಗೆ ಕಂಡುಬರುತ್ತದೆ. ಈ ಕಾದಂಬರಿಯ ಮೂಲಕ ಹೇಳಹೊರಟಿರುವ ಕೆಲವೊಂದು ವಿಷಯಗಳು ಇಂದಿಗೂ ತುಂಬಾ ಪ್ರಸ್ತುತವೆನ್ನಿಸುವುದರ ಮೂಲಕ ಅವರ ಒಂದೆ ಇದ್ದ ಅವರ ಒಂದು ಆಶಯ ಕೂಡಾ ವ್ಯಕ್ತವಾಗುತ್ತದೆ. ಸುತ್ತಮುತ್ತಲಿನ ಸಮಾಜದ ಸಮಕಾಲೀನ ಜೀವನದ ಕೆಲವೊಂದು ಲೋಪದೋಶಗಳನ್ನು ಯಾವುದೇ ರೀತಿಯ ಪಕ್ಷಪಾತವಿಲ್ಲದೆ ವ್ಯಕ್ತಪಡಿಸಿದ ರೀತಿ ಕೇವಲ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿರದೆ ಇಂದಿನ ಬದುಕಿಗೆ ಅನ್ವಯಿಸುವಂತೆ ವ್ಯಕ್ತಪಡಿಸಿದ್ದಾರೆ. ಈ ಕೃತಿಯಲ್ಲಿ ಶಿಕ್ಷಣದ ನಿಟ್ಟಿನಲ್ಲಿ ನಡೆಯುತ್ತಿರುವ ಕೆಲವೊಂದು ಪಕ್ಷಪಾತ ಇದರ ಪರವಾಗಿಯೇ ನಡೆದುಕೊಳ್ಳುತ್ತಿರುವ ಪ್ರಾಧ್ಯಾಪಕರ ಒಂದು ಮನೋಭೂಮಿಕೆಯನ್ನು ವಿವರಿಸುತ್ತಲೆ, ಈ ಶಿಕ್ಷಣವೆಂಬುದು ಯಾವ ಹಂತಕ್ಕೆ ತಲುಪಿದೆ ಎಂಬುದರ ಕಡೆಗೆ ಒಂದು ನೋಟ ಬೀರುತ್ತಲೆ, ಉಚ್ಚವ್ಯಾಸಂಗ ಪಡೆದುಕೊಳ್ಳಬೇಕು ಎಂಬ ಇಚ್ಛೆಯಲ್ಲಿ ದುಡಿತದೊಂದಿಗೆ ಕಲಿಯುತ್ತಿರುವ ವಿದ್ಯಾರ್ಥಿಯ ಜೀವನವನ್ನು ನಮ್ಮ ಕಣ್ಣ ಮುಂದೆ ಇಡುತ್ತಾರೆ. ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿಯು ಕಲಿಯಬೇಕು ಎಂಬ ಅಭಿಲಾಷೆಯುಳ್ಳ ವಿದ್ಯಾರ್ಥಿಗಳಲ್ಲಿ ಈ ಶಿಕ್ಷಣದ ಮೇಲುಹೊದಿಕೆಯೊಳಗೆ ನಡೆಯುತ್ತಿರುವ ಇಂತಹ ಒಂದು ಪಕ್ಷಪಾತ ಎಷ್ಟರ ಮಟ್ಟಿಗೆ ವಿದ್ಯಾರ್ಥಿಗಳ ಜೀವನಕ್ಕೆ ಹಾದಿ ಆಗಿ ಈ ಶಿಕ್ಷಣ ಮಾರ್ಪಡಲೂ ಸಾಧ್ಯ? ಇದು ಇಂದಿಗೂ ನಡೆಯುತ್ತಿರುವ ವಾಸ್ತವ ಶಿಕ್ಷಣದ ಜೀವಂತ ಚಿತ್ರಣವನ್ನು ಬಿಚ್ಚಿ ತೋರಿಸುವುದರೊಂದಿಗೆ ಈ ಕೃತಿಯಲ್ಲಿ ಇನ್ನೊಂದು ಸಂದರ್ಭದಲ್ಲಿ ಭಾರತದ ಬಡತನದ ಸ್ಥಿತಿಯನ್ನು ಹೇಳುವುದರ ಮೂಲಕ ಆರ್ಥಿಕ ಸಮಸ್ಯೆಯೊಂದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಲೇಖಕರು ಹೇಳುವ ವಾಸ್ತವತೆ ತೀರ ದೂರದ್ದು ಆಗಿರದೆ ತೀರ ಹತ್ತಿರದ ನಮ್ಮ ಸುತ್ತಮುತ್ತಲಿನ ವಾಸ್ತವ ಲೋಕದ ಪ್ರತಿಬಿಂಬವಾಗಿದೆ. ವ್ಯಕ್ತಿ ಮತ್ತು ಸಮಾಜದ ಅಂತರಂಗ ಭಹಿರಂಗಗಳೆರಡು ವ್ಯಕ್ತವಾಗಿರುವುದು ಕಂಡುಬರುತ್ತದೆ. ಈ ಒಂದು ವಾಸ್ತವತೆಯ ಬೆಳಕಿನಲ್ಲಿ ಚರ್ಚಿಸುವುದರ ಉದ್ದೇಶದ ಹಿನ್ನೆಲೆಯಲ್ಲಿ ಲೇಖಕರ ಆಶಯ ಏನಾಗಿದೆ ಎಂಬುದು ತಿಳಿದುಬರುತ್ತದೆ.

ಕುಸುಮಾಕರರು ತಮ್ಮ ಸಾಹಿತ್ಯ ರಚನೆಯಲ್ಲಿ ಬಳಸಿಕೊಂಡ ಅನೇಕ ಪ್ರಭಾವಗಳಲ್ಲಿ ಅಸ್ತಿತ್ವವಾದವೂ ಒಂದು. ಇದು ಕೂಡಾ ಪಾಶ್ಚಾತ್ಯರ ಒಂದು ಕೊಡುಗೆ. ಪಾಶ್ಚಾತ್ಯರ ಅಭಿಪ್ರಾಯದ ಪ್ರಕಾರ "ಮನುಷ್ಯನಿಗೆ ಅಸ್ತಿತ್ವ ಮೊದಲು, ಸತ್ವ ಮತ್ತು ತತ್ವ ಆಮೇಲೆ ತಾನು ಜೀವಂತ ಇದ್ದೇನೆ ಎಂಬುದರ ಪ್ರಜ್ಞೆ, ತನ್ನ ಅಸ್ತಿತ್ವದ ಅರಿವು ಅವನಿಗೆ ಇರಬೇಕಾದದ್ದು ಅವಶ್ಯ" (ಡಾ.ಸಿ.ಆರ್.ಯರವಿನತೆಲಿಮಠ, ಪುಟ [illegible]) ಈ ಒಂದು ತತ್ವದ ಆಧಾರದ ಮೇಲೆ ಕೃತಿಯಲ್ಲಿ ಲೇಖಕರು ದುರ್ಬಲ ನಾಯಕನನ್ನು ಕೇಂದ್ರ ಪಾತ್ರವನ್ನಾಗಿ ಮಾಡಿಕೊಂಡು ಅವನ ಮೂಲಕ ಪ್ರತಿಪಾದಿಸಿದ ಅಸ್ತಿತ್ವದ ನೆಲೆಗಳು ಎಷ್ಟರ ಮಟ್ಟಿಗೆ ಒಬ್ಬ ವ್ಯಕ್ತಿಯ ಬದುಕನ್ನು ಬಿಚ್ಚಿ ತೋರಿಸುವುದರೊಂದಿಗೆ ಕುಟುಂಬ ಹಾಗೂ ಸಮಾಜದೊಂದಿಗಿನ ಅವನ

ಸಂಬಂಧ ಅವನ್ನು ಗ್ರಹಿಸಿಕೊಳ್ಳುವಲ್ಲಿ ಆದಂತಹ ದ್ವಂದ್ವವನ್ನು ಹೇಳುತ್ತಲೆ ಬಿಟ್ಟ, ವ್ಯಕ್ತಿಯ ಆಲೋಚನೆಗಳ ಹಿನ್ನೆಲೆಯಲ್ಲಿ ಅವನ ಜೀವನ ರೂಪಿತವಾಗುತ್ತದೆ. ಆದರೆ ಆಧುನಿಕ ಯುಗದಲ್ಲಿ ಮನುಷ್ಯನ ಅಸ್ತಿತ್ವ ಸರಿಯಾದ ಮಾರ್ಗದಲ್ಲಿ ಸಾಗದೆ ಇರುವುದಕ್ಕೆ ಕಾರಣ, ಮನುಷ್ಯನಿಗೆ ಆಯ್ಕೆಯ ಹಿನ್ನೆಲೆಯಲ್ಲಿ ಸಂಪೂರ್ಣ ಸ್ವತಂತ್ರ್ಯವಿರುತ್ತದೆ. ಆದರೆ ಆಯ್ಕೆಯ ಪರಿಜ್ಞಾನ ಇರಬೇಕಾಗುತ್ತದೆ. ಈ ಕೃತಿಯಲ್ಲಿ ಲೇಖಕರು ಸ್ವಾತಂತ್ರ್ಯವಾಗಿ ಬದುಕಬೇಕು ಎನ್ನುವ ಕಥಾನಾಯಕನ ಮನೋಗತ ಆಸೆಯ ಹಿನ್ನೆಲೆಯಲ್ಲಿ ಬಂಧನದ ವಿರುದ್ಧ ಪ್ರತಿಭಟನೆ ಒಡ್ಡಲು ವ್ಯಕ್ತಿಯನ್ನು ಪ್ರಚೋದಿಸುತ್ತದೆ. ಆದರೆ ಇಚ್ಛಾಸ್ವಾತಂತ್ರ್ಯ ಬದುಕು ಅವನ ಆತ್ಮ ಕೇಂದ್ರವಾಗಿರದೆ ಅನ್ಯ ಕೇಂದ್ರಿತ ವಿಚಾರಗಳಿಗೆ ಪ್ರಭಾವಿತನಾಗಿ ಅದಕ್ಕೆ ಅನುಗುಣವಾಗಿ ಕುಟುಂಬದ ಬಂಧನದಿಂದ ಸ್ವತಂತ್ರ್ಯನಾಗಬೇಕು ಎನ್ನುವ ತುಡಿತದಲ್ಲಿರುವುದು ಕಂಡುಬರುತ್ತದೆ. ಆದರೆ ನಾಯಕನಿಗೆ ಅಸ್ತಿತ್ವದ ಹಿನ್ನೆಲೆಯ ಸ್ವಾತಂತ್ರ್ಯದ ಒಂದು ಸರಿಯಾದ ಕಲ್ಪನೆ ಕೂಡಾ ಇಲ್ಲ.

ತಾನು ಏನಾಗಬೇಕು ಎನ್ನುವ ಆಯ್ಕೆಯ ಜವಾಬ್ದಾರಿ ಇದ್ದರೆ ಅಂಥವರಿಗೆ ನಿಜವಾದ ಸ್ವಾತಂತ್ರ್ಯ ತಂದುಕೊಡುತ್ತದೆ. ಈ ಕೃತಿಯ ನಾಯಕ ಮುಕ್ತತೆಯ ಹಿನ್ನೆಲೆಯಲ್ಲಿ ತಾನು ಕೈಗೊಂಡಂತಹ ಕೆಲಸಗಳಿಂದ ತಾನೇ ಹೇಡಿಯಾಗಿದ್ದಾನೆ. ಇನ್ನೊಬ್ಬರ ಹೇಳಿಕೆಗಳ ಸಾಧ್ಯತೆಗಳನ್ನು ತಕ್ಕ ರೀತಿಯಲ್ಲಿ ಬಳಸಿಕೊಳ್ಳುವುದರೊಂದಿಗೆ ನಮ್ಮ ಒಂದು ಸ್ವಂತ ಅನಿಸಿಕೆ ಕೂಡಾ ಸಮ್ಮಿಳಿತವಾಗಿರಬೇಕು. ಕುಸುಮಾಕರರ ಈ ಒಂದು ಕೃತಿ ಮನುಷ್ಯನ ಮೂಲಭೂತ ಅಂದರೆ ಗುರುತಿನ ಸಮಸ್ಯೆಯನ್ನು ಕೆದಕುತ್ತದೆ. ತಂದೆಯಿಂದ ಮಗ ಸ್ವತಂತ್ರವಾಗುದರ ಅರಿವನ್ನು ಮೂಡಿಸುತ್ತದೆ. ಆದರೆ ಅದು ಅಸಂಬದ್ಧ ಸ್ವತಂತ್ರ್ಯವಾಗಿದೆ. ಏಕೆಂದರೆ ಇಲ್ಲಿ ನಾಯಕ ತನ್ನನ್ನು ತಾನು ಗುರುತಿಸುವುದು ತಂದೆಯ ಒಂದು ಬಂಧನದಿಂದ ಬಿಡುಗಡೆಯಾದಂತೆ ಅನಿಸಿದರೂ ಕೂಡಾ ಅದು ಸ್ನೇಹಿತರಿಂದ ಅವನಿಗೆ ಲಭಿಸಿದ ಸ್ವತಂತ್ರ ಅಸ್ತಿತ್ವ ಎಂಬುದು ಗೋಚರವಾಗುತ್ತದೆ. ತನ್ನನ್ನು ತಾನು ತಿಳಿದುಕೊಳ್ಳಲು ಆತ್ಮ ವಿಮರ್ಶೆಗೂ ತೊಡಗುತ್ತಾನೆ. ಹಾಗೂ ತೀಕ್ಷ್ಣ ಪರೀಕ್ಷೆಗೆ ಗುರಿಪಡಿಸಿಕೊಳ್ಳುತ್ತಾನೆ. ಆದರೆ ಇವೆಲ್ಲವು ಅವನಿಗೆ ಸರಿಯಾದ ಫಲಿತಾಂಶ ನೀಡುವುದರೊಳಗೆ ಕಾಲ ಮೀರಿ ಹೋಗಿರುತ್ತದೆ. ಈ ರೀತಿಯಾಗಿ ಲೇಖಕರು ಪಾಶ್ಚಾತ್ಯದ ಪರಿಕಲ್ಪನೆಯಲ್ಲಿ ಮೂಡಿಬಂದ ಈ ವಾದದ ಹಿನ್ನೆಲೆಯಲ್ಲಿ ವ್ಯಕ್ತವಾಗಿರುವ ಲೇಖಕರ ಆಶಯ ತಿಳಿದುಬರುತ್ತದೆ. ಇಂದಿನ ಯುವಕರು ತಮ್ಮ ಜೀವನವನ್ನು ರೂಪಿಸಿಕೊಳ್ಳುವಲ್ಲಿ ತೆಗೆದುಕೊಳ್ಳುವಂತಹ ನಿರ್ಧಾರ ಅವರ ಒಂದು ವ್ಯಕ್ತಿತ್ವವನ್ನು ಕಟ್ಟಿಕೊಡುತ್ತದೆ. ಲೇಖಕರು ಈ ಆಶಯದ ಹಿನ್ನೆಲೆಯಾಗಿ ಶಾಂತಿನಾಥ ದೇಸಾಯಿಯವರು 'ಪ್ರಜ್ಞೆ ಮತ್ತು ಪರಿಸರ' ಪುಸ್ತಕದಲ್ಲಿ ಹೇಳಿದ ಒಂದು ಮಾತು ಇದಕ್ಕೆ ನಿದರ್ಶನವಾಗಿ ನೋಡಬಹುದು.

> "ನಮ್ಮನ್ನು ರೂಪಿಸುವ ಆರ್ಥಿಕ ಸಾಮಾಜಿಕ ಪರಿಸರಗಳು ಎಷ್ಟು ಪ್ರಭಾವಶಾಲಿ ಆಗಿದ್ದರೂ ಕೂಡಾ ಈ ಪ್ರಭಾವಗಳ ತಿಕ್ಕಾಟಕ್ಕೆ ಸಿಕ್ಕು ತನ್ನ ಸ್ವಂತ [illegible] [illegible] ಆಗುತ್ತಿರುವುದು ಎಲ್ಲ ಕಾಲಕ್ಕೂ ಶಾಶ್ವತವಾದ ಮನುಷ್ಯನ ಪ್ರಜ್ಞೆಯೇ ಎಂಬುದನ್ನು [illegible]."

ಈ ರೀತಿಯಾಗಿ ಅಸ್ತಿತ್ವದ ಮೇಲೆ ಪ್ರಭಾವ ಬೀರುವ ಪ್ರಜ್ಞೆಯು ಇದು ಜಾಗೃತವಾಗಿರಬೇಕು ಎಂಬುದನ್ನು ಹೇಳುತ್ತಾರೆ. ಈ ಪ್ರಜ್ಞೆಯನ್ನು ಸರಿಯಾಗಿ ಉಪಯೋಗಿಸಿಕೊಳ್ಳದಿದ್ದರೆ ಯಾವ ರೀತಿಯಾಗಿ ಅದಃಪತನಕ್ಕೆ ಕಾರಣವಾಗುತ್ತದೆ. ಎಂಬುದನ್ನು ತಿಳಿಪಡಿಸುತ್ತಲೆ ಇಂದಿನ ಯುವಕರಿಗೆ ತಮ್ಮ ಆಶಯದ ಹಿನ್ನೆಲೆಯಲ್ಲಿ ಏನು ಹೇಳಹೊರಟಿದ್ದಾರೆ ಎಂಬುದು ಮನದಟ್ಟವಾಗುತ್ತದೆ.

ಅಷ್ಟೇ ಅಲ್ಲದೆ ಕಾದಂಬರಿಯಲ್ಲಿ ಅಸಂಗತವಾದವನ್ನು ಕೂಡಾ ಗುರುತಿಸಬಹುದು ಅಂದರೆ

> "ಬದುಕು ಯಾವಾಗಲೂ ಕೇವಲ ಸಂಗತವಾದುದಲ್ಲ ಬದಲಿಗೆ ಅದು ಅಸಂಗತವಾದುದು ಮಾನವನ ಬದುಕು ಹೇಗೆ ವ್ಯವಸ್ಥಿತ ರೂಪದಲ್ಲಿ ಪ್ರಕಟಿಸುವುದಿಲ್ಲವೋ ಅದೇ ರೀತಿ ಅಸಂಗತತೆ ಎಂಬುದು ಸಾಹಿತ್ಯದ ವಸ್ತು ಹಾಗೂ ತಂತ್ರಕ್ಕೆ ಕಾರಣವಾಯಿತು. ಜೀವನದ ಬಗ್ಗೆ ಲೇಖಕರಿಗಿದ್ದ ಜೀವನದ ಗಾಢ ಹಾಗೂ ನಿಗೂಢ ಅನುಭವಗಳನ್ನು ಅಭಿವ್ಯಕ್ತಿಸಲು ಈ ವಾದ ಸಹಾಯಕವಾಯಿತು. ಬದುಕಿನ ನೈರಾಶ್ಯ ಸ್ಥಿತಿಗಳನ್ನು ಅಸಂಗತ ಪರಿಭಾವಿಸುವ ಸ್ಥಿತಿ ಯೂರೋಪಿನ ಬದುಕಿನಲ್ಲಿ ಸಹಜವಾಗಿಯೇ ಎದುರಾಯಿತು. ಭೀಕರ ನಗರಜೀವನ, ಯುದ್ಧೋತ್ತರ ಬದುಕಿನ ಬರಡುತನ ಮುಂತಾದವು ಅಸಂಗತತೆಯ ಅನುಭವಕ್ಕೆ ಕಾರಣವಾದವು. ಒಂದು ರೀತಿಯಲ್ಲಿ ಮನುಷ್ಯನಿಗೆ ಉಂಟಾಗುವ ಕೊರತೆಗಳೇ ಪರಿಣಾಮದಲ್ಲಿ ಅಸಂಗತವಾಗಿರುತ್ತದೆ"
> (ಬರಗೂರು ರಾಮಚಂದ್ರಪ್ಪ, ಪುಟ ೨೩೯).

ಅಸಂಗತವಾದದ ಈ ಅನುಭವವನ್ನು 'ನಾಲ್ಕನೆಯ ಆಯಾಮ'ದಲ್ಲಿ ಕಾಣಸಿಗುತ್ತದೆ. ಈ ಕಾದಂಬರಿಯಲ್ಲಿ ನಾಯಕನಿಗೆ ತಂದೆ ಹೇಳುವ ಕೆಲವೊಂದು ಜೀವನಕ್ಕೆ ಸಂಬಂಧಪಟ್ಟ ಮಾತುಗಳು ಬದುಕಿನ ಸಂಕೀರ್ಣತೆಯನ್ನು ಸೂಚಿಸುತ್ತದೆ. ಬದುಕಿಗೆ ಆಧಾರ ಒದಗಿಸುವ ದಾರಿ ಹುಡುಕಿಕೊಳ್ಳಬೇಕೆ ಹೊರತು, ಇಂದು - ನಾಳೆ ಕುಳಿತರೆ 'ನಾಳೆ' ಎನ್ನುವುದು ನಮ್ಮ ಎದುರು ಪ್ರತ್ಯಕ್ಷವಾಗುತ್ತದೆ. ಆಗ ಅದರ ವಿರುದ್ಧವೇ ಹೋರಾಟವನ್ನು ಮನುಷ್ಯ ನಡೆಸಬೇಕಾಗುತ್ತದೆ. ಇದಕ್ಕೆ ನಿದರ್ಶನವಾಗಿ ಈ ಕಾದಂಬರಿಯಲ್ಲಿ ತಂದೆ ಮಗನಿಗೆ ಹೇಳುವ ಮಾತು. "ಕಾಲ ತುಂಬಾ ಕಷ್ಟಕರದ್ದಾಗುತ್ತಿದೆ. ನಮ್ಮ ಕಾಲ ಹೇಗೂ ಸರಿಯಿತು. ನೀವು ಏನೇನು ಅನುಭವಿಸಬೇಕಾಗುತ್ತದೆಯೋ ಯಾರು ಬಲ್ಲರು!" (ನಾಲ್ಕನೆಯ ಆಯಾಮ, ಪುಟ ೧೬) ಈ ಒಂದು ಮಾತಿನ ಮೂಲಕ ಕಾಲ ಕಳೆದ ಹಾಗೆ ಮೊದಲು ಇದ್ದ ಸರಳ ಬದುಕು ಇಂದಿನ ಆಧುನಿಕ ಜಗತ್ತಿನಲ್ಲಿ ಬದುಕುತ್ತಿರುವ ಜನರಿಗೆ ಅದು ಅಷ್ಟು ಸುಲಭ ಸಾಧ್ಯವಿಲ್ಲ. ಎಷ್ಟೆಷ್ಟು ಪ್ರಗತಿ ಪಥದಲ್ಲಿ ನಾವು ಸಾಗುತ್ತಿದ್ದೇವೆಯೋ ಅಷ್ಟಷ್ಟು ನಮ್ಮ ಜೀವನ ಅಸಂಗತವಾಗುತ್ತಾ ಸಾಗುತ್ತಿದೆ. ಏಕೆಂದರೆ ನಮ್ಮ ಅತಿಯಾದ ಬಯಕೆಯ ಪ್ರಮಾಣ ಹೆಚ್ಚಾಗುತ್ತದೆ. ಈ ಒಂದು ವಿಚಾರವನ್ನು ಲೇಖಕರು ಕಥಾನಾಯಕನ ಮೂಲಕ ತಿಳಿಪಡಿಸುವುದರ ಮೂಲಕವೇ ಅಸಂಗತವಾದದ ಹಿನ್ನೆಲೆಯಲ್ಲಿ ಜೀವನದ ಬಗ್ಗೆ ಲೇಖಕರ ಆಶಯ ಏನಾಗಿತ್ತು ಎಂಬುವುದು ತಿಳಿದುಬರುತ್ತದೆ.

ಈ ರೀತಿಯಾಗಿ ಅಸಂಗತವಾದದ ಮೂಲಕ ಲೇಖಕರು ಜೀವನ ಎಷ್ಟೊಂದು ಸಂಕೀರ್ಣತೆಯಿಂದ ಕೂಡಿದೆ ಎಂಬುದನ್ನು ತಿಳಿಸುವುದರ ಮೂಲಕವೇ, ಈ ವಾಸ್ತವವನ್ನು ಧೈರ್ಯವಾಗಿ ಎದುರಿಸಲು ಒಬ್ಬ ವ್ಯಕ್ತಿಗೆ ಬೇಕಾದಂತಹ ಸ್ವಂತ ಅಸ್ತಿತ್ವ ಇಲ್ಲದಿದ್ದರೆ ಹೇಗೆ ವ್ಯಕ್ತಿ ಈ ಸಮಾಜದಲ್ಲಿ ಎಲ್ಲರ ನಡುವೆಯು ಅನಾಥ ಪ್ರಜ್ಞೆ ಕಾಡಲು ಪ್ರಾರಂಭಿಸುತ್ತದೆ ಎಂಬುದನ್ನು ಈ ಕಾದಂಬರಿಯಲ್ಲಿ ಎಳೆ ಎಳೆಯಾಗಿ ಬಿಡಿಸಿ ತೋರಿಸಿದ್ದಾರೆ. ತನ್ನದೇ ಆದ ಸ್ವಂತ ಪ್ರಜ್ಞೆ ಎಂಬುದು ವ್ಯಕ್ತಿಗೆ ಇರದಿದ್ದರೆ ಇನ್ನೊಬ್ಬರ ಆಧಾರ ಹಾಗೂ ಸಹಾಯದ ಹಸ್ತಗಳು ನಮ್ಮಿಂದ ದೂರವಾದಾಗ ಈ ಒಂಟಿತನ ಅಥವಾ ಅನಾಥ ಪ್ರಜ್ಞೆ ಎಂಬುದು ಒಬ್ಬ ವ್ಯಕ್ತಿಯನ್ನು ಆವರಿಸಿಕೊಂಡು ಎಷ್ಟೊಂದು ಬಲಹೀನನನ್ನಾಗಿ ಮಾಡುತ್ತದೆ ಎಂಬುದನ್ನು ಈ ಕಥಾನಾಯಕನ ಮೂಲಕ ತಿಳಿಸುವುದರೊಂದಿಗೆ ಇಂದಿನ ಒಂದು ನಗರದ ಯಾಂತ್ರಿಕ ಜಗತ್ತಿನಲ್ಲಿ ಬದುಕುತ್ತಿರುವ ಎಷ್ಟೋ ನವಯುವಕರ ಈ ಒಂದು ಸಮಸ್ಯೆ ಇರುವುದರಿಂದಲೇ ಅದನ್ನು ಸೂಕ್ಷ್ಮವಾಗಿ ಗ್ರಹಿಸಿಕೊಂಡೇ ಪ್ರತಿಯೊಬ್ಬರು ಅಸಂಗತದಿಂದ ಕೂಡಿದ ಈ ಬಾಳಿನಿಂದ ಆದಷ್ಟು ಹೊರ ಬರಬೇಕೆಂದರೆ, ತಮ್ಮದೇ ಆದ ಸ್ವಂತ ಅಸ್ತಿತ್ವ ಬೆಳೆಸಿಕೊಂಡರೆ ಮಾತ್ರ ಈ ಅನಾಥ ಪ್ರಜ್ಞೆಯಿಂದ ಹೊರ ಬರಲು ಸಾಧ್ಯ ಎನ್ನುವುದನ್ನು ಹೇಳುವುದರ ಮೂಲಕವೇ ಲೇಖಕರ ನಿಲುವು ಅಥವಾ ಆಶಯ ಏನಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಈ `ನಾಲ್ಕನೆಯ ಆಯಾಮ` ಕಾದಂಬರಿಯ ತಂತ್ರದ ದೃಷ್ಟಿಯಿಂದಲೂ ಮಹತ್ವದ ಪ್ರಯೋಗವಾಗಿದೆ. ಕೆಲವರು ಇದನ್ನು 'ತಂತ್ರ' ಎಂದು ಕರೆದರೆ ಇನ್ನೂ ಕೆಲವರು 'ವಸ್ತು' ಎಂಬ ಹೆಸರಿನಿಂದ ಸೂಚಿಸಲಾಗುತ್ತದೆ. ಪ್ರಜ್ಞಾಪ್ರವಾಹ ತಂತ್ರವನ್ನು ಒಳಗೊಂಡ ಕಾದಂಬರಿಗಳು ಕನ್ನಡ ಸಾಹಿತ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವುದಿಲ್ಲ. ಕನ್ನಡ ಸಾಹಿತ್ಯವು ಇಂಗ್ಲಿಷ್ ಸಾಹಿತ್ಯದಿಂದ ಪ್ರಭಾವಿತವಾಗಿದ್ದರೂ ಕೂಡಾ, ಅಲ್ಲಿ ಈ ತಂತ್ರವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಂಡು ಇಂಗ್ಲಿಷ್ ಕಾದಂಬರಿಗಳು ಹರಿದುಬಂದಿದ್ದರು, ಅದರ ಒಂದು ಪ್ರಭಾವ ಕನ್ನಡ ಕಾದಂಬರಿಗಳ ಮೇಲೆ ಆಗಿದ್ದರೂ ಅದರ ಒಂದು ಸಂಪೂರ್ಣ ನಕಲು ಆಗಿ ಕನ್ನಡದಲ್ಲಿ ಬಳಸಿಕೊಳ್ಳುವ ಪ್ರಯತ್ನ ಆಗಿಲ್ಲ ಎಂದೇ ಹೇಳಬಹುದು. ಆದರೂ ಈ ಪ್ರಜ್ಞಾಪ್ರವಾಹ ತಂತ್ರವನ್ನು ಬಳಸಿಕೊಂಡ ಕೆಲವೊಂದು ಉತ್ತಮ ಕಾದಂಬರಿಗಳು ನಮ್ಮ ಕಣ್ಣ ಮುಂದಿವೆ. ಅದರಲ್ಲಿಯೂ ಈ `ನಾಲ್ಕನೆಯ ಆಯಾಮ` ಕಾದಂಬರಿಯನ್ನು ಕುಸುಮಾಕರರು ಸೃಷ್ಟಿಸುವಲ್ಲಿ ಇದನ್ನು ಬಳಸಿಕೊಂಡು ತಮ್ಮ ಆಶಯ ಅಥವಾ ನಿಲುವನ್ನು ಈ ತಂತ್ರದ ಮೂಲಕ ಹೊಸ ರೀತಿಯಲ್ಲಿ ಅಭಿವ್ಯಕ್ತಿಸಿರುವುದು ಪ್ರಶಂಸನೀಯವಾಗಿದೆ. ಈ ತಂತ್ರದ ಮೂಲಕ ಲೇಖಕರು ಒಬ್ಬ ಪ್ರೌಢಾವಸ್ಥೆಯ ಯುವಕನ ಅಂತರಂಗಕ್ಕೆ ಸಂಬಂಧಿಸಿದ ತುಮುಲಗಳನ್ನು ಬಿಚ್ಚಿ ತೋರಿಸಿದ್ದಾರೆ. ವಾಸ್ತವ ಜಗತ್ತಿನಲ್ಲಿ ಕುಳಿತುಕೊಂಡು ಏಕಕಾಲಕ್ಕೆ ಭೂತ-ವರ್ತಮಾನ ಹಾಗೂ ಭವಿಷತ್‌ಗಳ ಬಗ್ಗೆ ಆಲೋಚನೆ ಮಾಡುವ ನಾಯಕನ ಮನಸ್ಸಿನಲ್ಲಿ ಆಗುವ ದ್ವಂದ್ವಯುಕ್ತವಾದ ತಳಮಳ, ಸಂಕಟವನ್ನು ವ್ಯಕ್ತಪಡಿಸಿದ. ಈ ತೋರಿಸಿಕೊಂಡ ರೀತಿ ಅಥವಾ ಕ್ರಮ ಇಂದಿನ ನವಯುವಕರಿಗೆ ತುಂಬಾ ಸನಿಹವಾದಂತಹ ಸಂಗತಿಯಾಗಿ ಕಾಣಸಿಗುತ್ತದೆ.

ಇಲ್ಲಿ ಲೇಖಕರು ಕಿಶೋರಾವಸ್ಥೆಯ ಯುವಕರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಈ ತಂತ್ರದ ಮೂಲಕ ಕೆಲವೊಂದು ವಿಷಯಗಳನ್ನು ತಿಳಿಯಪಡಿಸುತ್ತಾರೆ. ಯಾವ ರೀತಿಯಾಗಿ ಈ ಕೃತಿಯ ನಾಯಕನು ತಂದೆ, ತಾಯಿ, ಶಾಲೆ, ಗೆಳೆಯರು, ಸಮಾಜ ಇವರುಗಳೆಲ್ಲರ ಒತ್ತಡದಲ್ಲಿ ಸಿಕ್ಕು ತನ್ನತನವನ್ನು ಸ್ಥಾಪಿಸಿಕೊಳ್ಳಲಾರದ ಹಂತಕ್ಕೆ ಬಂದು ತಲುಪುತ್ತಾನೆ ಎಂಬುದನ್ನು ತೋರಿಸುವುದರ ಮುಖಾಂತರ ಸಂಬಂಧಗಳು ಹೇಗೆ ಭಿನ್ನ ಭಿನ್ನ ತಳಹದಿಯ ಮೇಲೆ ಕಟ್ಟಿಕೊಂಡಿರುತ್ತವೆ. ಅದನ್ನು ಸೂಕ್ಷ್ಮ ರೀತಿಯಲ್ಲಿ ಗ್ರಹಿಸಿಕೊಳ್ಳುವಲ್ಲಿಯೂ ಹೇಗೆ ದೃಷ್ಟಿಕೋನಗಳು ಬದಲಾಗುತ್ತವೆ ಎಂಬುದನ್ನು ಒಬ್ಬ ವ್ಯಕ್ತಿಯನ್ನು ಕೇಂದ್ರವಾಗಿಟ್ಟುಕೊಂಡು ಹೇಳುವುದರ ಮೂಲಕ ಅವನ ಮನಸ್ಸಿನ ಮೇಲೆ ಉಂಟುಮಾಡಿದ ಕೆಲವೊಂದು ಘಟನೆಗಳು ಅವನ ಜೀವನವನ್ನು ರೂಪಿಸುವಲ್ಲಿ ತೊಡಕಾಗಿ ಪರಿಣಮಿಸುತ್ತದೆ. ಈ ರೀತಿಯಾಗಿ ಲೇಖಕರು ಒಬ್ಬ ವ್ಯಕ್ತಿಯ ಅಂತರಂಗದ ಬೆಳವಣಿಗೆಗೆ ಮತ್ತು ಮನಸ್ಸಿನ ವ್ಯಾಪಾರವನ್ನು ಕಟ್ಟುಕೊಡುವಲ್ಲಿ ಪ್ರಜ್ಞಾಪ್ರವಾಹ ತಂತ್ರವನ್ನು ಬಳಸಿಕೊಂಡು ಹೇಳುವುದರ ಮೂಲಕ ನವ ತರುಣರ ಮನಸ್ಸನ್ನು ವಿಶ್ಲೇಷಣೆ ಮಾಡಿದ್ದಾರೆ ಎನ್ನಬಹುದು.

ಕುಸುಮಾಕರರು ಈ ತಂತ್ರವನ್ನು ಹೇಳುವಲ್ಲಿ ಬಳಸಿಕೊಂಡ ನೆನಪುಗಳು ಮತ್ತು ಕನಸುಗಳು ಮನೋವಿಶ್ಲೇಷಣೆಗೆ ಸಹಾಯಕವಾಗಿ ಮೂಡಿಬಂದಿವೆ. ಈ 'ನಾಲ್ಕನೆಯ ಆಯಾಮ' ಕೃತಿಯು ಸಂಪೂರ್ಣವಾಗಿ ಪಾಶ್ಚಾತ್ಯ ಮನೋವಿಜ್ಞಾನಿ ಫ್ರಾಯ್ಡ್‌ನ ತತ್ವಗಳ ಮೇಲೆಯೇ ಈ ಒಂದು ಕಾದಂಬರಿಯನ್ನು ಲೇಖಕರು ಹೆಣೆದಿದ್ದಾರೆ. ಈ ಮನೋವಿಶ್ಲೇಷಣೆಯ ಐದು ತತ್ವಗಳನ್ನು ಬಳಸಿಕೊಂಡು ಒಬ್ಬ ವ್ಯಕ್ತಿಯ ಬಾಲ್ಯಾವಸ್ಥೆಯಿಂದ ಹಿಡಿದು ಪ್ರೌಢವಸ್ಥೆಗೆ ತಲುಪುವಲ್ಲಿ ಬೆಳವಣಿಗೆ ಹಂತದಲ್ಲಿ ಪ್ರಭಾವಕ್ಕೆ ಒಳಗಾಗುವ ಮತ್ತು ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡುವ ಅಂಶಗಳನ್ನು ಹೇಳುತ್ತಲೆ ಒಬ್ಬ ಯುವಕನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಕೌಟುಂಬಿಕ ಪರಿಸರ ಯಾವ ರೀತಿಯಾಗಿ ಕಾರ್ಯ ನಿರ್ವಹಿಸಬೇಕು ಎಂಬುದನ್ನು ತಿಳಿಯಪಡಿಸಿದ್ದಾರೆ. ಲೇಖಕರು ಸಂದರ್ಭಕ್ಕೆ ತಕ್ಕಂತೆ ಬಳಸಿಕೊಂಡ ಕನಸುಗಳು ನಾಯಕನ ಮನಸ್ಸಿನ ಭಾವನೆಗಳು ಎಲ್ಲರ ಮಾತುಗಳ ಕ್ರಿಯೆಗೆ ಯಾವ ದೃಷ್ಟಿಕೋನದ ಮೂಲಕ ವಯಸ್ಸಿಗನುಗುಣವಾಗಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿದ್ದಾನೆ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಈ ಕನಸುಗಳು ಸಹಾಯಕವಾಗಿವೆ. ಅಷ್ಟೇ ಅಲ್ಲದೇ ಬಾಲ್ಯಾವಸ್ಥೆಯ ಎಲ್ಲ ಸಂಕೀರ್ಣ ಅನುಭವಗಳನ್ನು ಕೃತಿಯಲ್ಲಿ ಚಿತ್ರಿಸಿದ್ದಾರೆ. ನವಯುವಕನ ಸುಪ್ತಮನಸ್ಸಿನಲ್ಲಿ ಅಡಕವಾಗಿರುವ ತಂದೆಯ ಬಗ್ಗೆ ಇರುವ ಭಯ ಆತಂಕ ಹಾಗೂ ವಯಸ್ಸಿಗನುಗುಣವಾಗಿ ಇರುವಂತಹ ಕೆಲವೊಂದು ಆಸೆ ಆಕಾಂಕ್ಷೆಗಳು ಹೊರಗೆ ಹೇಳಿಕೊಳ್ಳಲಾರದ ಅಥವಾ ಈಡೇರಿಸಿಕೊಳ್ಳಲಾಗದ ಸನ್ನಿವೇಶ ನಿರ್ಮಾಣವಾದರೆ ಅದು ಸಹಜವಾಗಿ ಕನಸುಗಳ ಮೂಲಕ ವ್ಯಕ್ತವಾಗುತ್ತದೆ.

ಈ ಕೃತಿಯಲ್ಲಿ ಬರುವ ಕಥಾನಾಯಕನಿಗೆ ಇಲ್ಲಿಯ ಪಾತ್ರಗಳು ಅಂದರೆ ತಂದೆ, ತಾಯಿ, ಗೆಳೆಯರು ಹೇಳುವ ಮಾತುಗಳು ಮಾದರಿಗಳಾಗದೆ ನಾಯಕನ ದೃಷ್ಟಿಯಲ್ಲಿ ಬೇರೆಯ ಅರ್ಥವನ್ನು ಪಡೆದುಕೊಂಡು

ಅವನ ಅಯಶಸ್ಸಿಗೆ ಕಾರಣವಾಗುತ್ತದೆ. ಇದೇ ಒಂದು ಇಂದಿನ ಯುವಕರ ದೊಡ್ಡ ಸಮಸ್ಯೆ ಬುದ್ಧಿಯ ಮಾತುಗಳನ್ನು ಗ್ರಹಿಸಿಕೊಳ್ಳುವಲ್ಲಿ ಮಾಡುವ ತಪ್ಪು. ಅದೇ ರೀತಿಯಾಗಿ ಹಿರಿಯರು ಮಕ್ಕಳಿಗೆ ತಿಳಿ ಹೇಳುವಲ್ಲಿ ಅನುಸರಿಸುವಂತಹ ಕ್ರಮದ ಮೇಲೆ ಅವರಿಗೆ ಎಚ್ಚರಿಕೆ ಇರಬೇಕಾದದ್ದು ತುಂಬಾ ಅವಶ್ಯಕ.

ಈ ರೀತಿಯಾಗಿ ಲೇಖಕರು ಎಲ್ಲಾ ವಾದಗಳನ್ನು ತಮ್ಮ ಕಾದಂಬರಿಯಲ್ಲಿ ಬಳಸಿರುವುದು ಒಂದು ವಿಶಿಷ್ಟವಾಗಿದೆ. ಇವರ ಈ ರೀತಿಯ ಹೊಸ ಪ್ರಯೋಗದ ಕಾದಂಬರಿಯು ಸಮಾಜಕ್ಕೆ, ಓದುಗರಿಗೆ, ಇಂದಿನ ಯುವಕರಿಗೆ ಯಾವ ರೀತಿಯ ಸಂದೇಶವನ್ನು ಕೊಡುತ್ತದೆ ಎನ್ನುವುದನ್ನು ನೋಡಬಹುದು. ಈ ಕಾದಂಬರಿಯಲ್ಲಿ ಬರುವ ಕಥಾನಾಯಕನನ್ನು ಇಂದಿನ ಯುವಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಲೇಖಕರು ಚಿತ್ರಿಸಿದಂತೆ ಇದೆ. ಈ ಕೃತಿಯ ನಾಯಕನು ಕಾಲೇಜಿನಲ್ಲಿ ನಡೆಸುವ ಕೆಲವೊಂದು ಅನಿಷ್ಟ ಚಟುವಟಿಕೆಗಳಾದ, ಪ್ರಾಧ್ಯಾಪಕರಿಗೆ ಮರ್ಯಾದೆ ಕೊಡದೆ ಇರುವುದು, ಎಲ್ಲಿ ಬೇಕೆಂದರಲ್ಲಿ ಅಶ್ಲೀಲ ಚಿತ್ರಗಳನ್ನು ಬಿಡಿಸುವುದು, ಈ ಅಶ್ಲೀಲಕ್ಕೆ ಸಂಬಂಧಪಟ್ಟಂತೆ ಪುಸ್ತಕಗಳನ್ನು ಓದುವುದು, ಹುಡುಗಿಯರನ್ನು ಛೇಡಿಸುವುದು ಇವೆಲ್ಲವುಗಳನ್ನು ಇಂದಿನ ಯುವಕರು ಯಾವುದೇ ರೀತಿಯ ಭಯಕ್ಕೆ ಒಳಗಾಗದೆ ನಿರ್ಭಯವಾಗಿ ಮಾಡುತ್ತಿರುವುದು ಕಂಡುಬರುತ್ತದೆ. ಅಷ್ಟೇ ಅಲ್ಲದೆ ಮನೋರಂಜನೆಗೆ ಮಾತ್ರ ಸೀಮಿತವಾಗಬೇಕಾದ ಫಿಲ್ಮ್‌ಗಳು ಅವುಗಳನ್ನೇ ಬದುಕಿನ ಒಂದು ಭಾಗವಾಗಿ ಪರಿಗಣಿಸಿ, ಅಲ್ಲಿ ಬರುವ ನಾಯಕನ ಹಾವ - ಭಾವ ಮಾತುಗಳು ತಮ್ಮ ಜೀವನದಲ್ಲಿ ಆ ರೀತಿಯಾಗಿ ಅಳವಡಿಸಿಕೊಳ್ಳಲು ಹಾತೊರೆಯುತ್ತಿರುವ ಇಂದಿನ ಯುವಕರು ಕಾಣಸಿಗುತ್ತಾರೆ. ಈ ವಿಷಯಕ್ಕೆ ಹಿನ್ನೆಲೆಯಾಗಿ ಕಾದಂಬರಿಯಲ್ಲಿ ಬರುವ ನಾಯಕನ ಸನ್ನಿವೇಶಕ್ಕೆ ಅನುಗುಣವಾಗಿ ಸಿ.ಎನ್.ರಾಮಚಂದ್ರನ್ ಅವರ ಮಾತನ್ನು ನಾವು ಇಲ್ಲಿ ನೋಡಬಹುದು.

> "ಇನ್ನೂ ಮುಖ್ಯವಾಗಿ ಕಿಶೋರಾವಸ್ಥೆಯಲ್ಲಿ (ಕನಿಷ್ಠ ಪಕ್ಷ ಭಾರತದಲ್ಲಿ ಟಿ.ವಿ. ಯುಗಕ್ಕೆ ಪೂರ್ವದಲ್ಲಿ) ವ್ಯಕ್ತಿತ್ವವನ್ನು ಗಾಢವಾಗಿ ಪ್ರಭಾವಿಸುವ ಮತ್ತು ಕಿಶೋರ ಕಿಶೋರಿಯರಿಗೆ ವಾಸ್ತವದಿಂದ ಪಲಾಯನ ಮಾಡಲು ಒಂದು ವರ್ಣರಂಜಿತ ಭ್ರಮಾಲೋಕವನ್ನು ಸೃಷ್ಟಿಸಿ ಕೊಡುವ ಚಲನಚಿತ್ರಗಳು ಮತ್ತು (ಹಿಂದಿ) ಚಲನಚಿತ್ರದ ಹಾಡುಗಳು ಕೃತಿಯಲ್ಲಿ ವ್ಯಾಪಕವಾಗಿ ಆದರೆ ಎಚ್ಚರಿಕೆಯಿಂದ ಉಪಯೋಗಿಸಲ್ಪಡುತ್ತವೆ. ಚಲನಚಿತ್ರ ನಾಯಕ - ನಾಯಕರಿಯರೇ 'ಮಾದರಿ'ಗಳಾಗುವ ಹಾಗೂ ಆ ಚಲನಚಿತ್ರಗಳ ಗೀತೆಗಳೆ ತಮ್ಮ ತಮ್ಮ ಸುಖ ದುಃಖಗಳಿಗೆ ಅಭಿವ್ಯಕ್ತಿ ಸಾಧನಗಳಾಗುವ ಭ್ರಾಮಕ 'ಕಿಶೋರ ಜಗತ್ತಿನ' ಸೃಷ್ಟಿ ಈ ಕೃತಿಯಲ್ಲಿ ಆಸ್ವಾದ್ಯಕರವಾಗಿದೆ."

ಈ ರೀತಿಯಾಗಿ ಲೇಖಕರು ಕಥಾನಾಯಕನ ಮೂಲಕ ಇಂದಿನ ಯುವಕರ ದಾರಿ ಯಾವ ರೀತಿಯಾಗಿ ಸಾಗಿದೆ ಹಾಗೂ ತಮ್ಮ ಜೀವನವನ್ನು ತಾವೇ ಕೈಯಾರೆ ಹಾಳುಮಾಡಿಕೊಳ್ಳುತ್ತಿರುವ ಇಂದಿನ ಯುವಕರ ಮಾನಸಿಕತೆಯನ್ನು ಬಿಚ್ಚಿ ಹೇಳಿದರೆ ಈ ಕೃತಿಯಲ್ಲಿ ಬರುವ ಅದೇ ವಯಸ್ಸಿನ ಯುವಕರು ರೂಪಿಸಿಕೊಂಡ ಜೀವನ ರೀತಿ ಅವರ ತರ್ಕಬದ್ಧವಾದ ವಿಚಾರಗಳು, ನಡುವಳಿಕೆ ಮುಂದಿನ ಜೀವನದ

ಬಗ್ಗೆ ಇರುವ ಚಿಂತನೆಗಳು ಇಂದಿನ ಯುವಕರಿಗೆ ಮಾದರಿಗಳಾಗುವಂತೆ ಇವೆ. ಈ ರೀತಿಯಾಗಿ ಲೇಖಕರು ಒಂದೇ ಕಾದಂಬರಿಯಲ್ಲಿ ಕಿಶೋರಾವಸ್ಥೆಯ ಭಿನ್ನಮುಖಗಳನ್ನು ತೋರಿಸುವುದರ ಮೂಲಕ ತಮ್ಮ ಒಂದು ಆಶಯವನ್ನು ಇದರ ಮೂಲಕ ವ್ಯಕ್ತಪಡಿಸಿದ್ದಾರೆ.

ಒಟ್ಟಾರೆಯಾಗಿ ಈ ಕಾದಂಬರಿಯಲ್ಲಿ ಲೇಖಕರು ಪಾಶ್ಚಾತ್ಯವಾದಗಳು ಪರಿಕಲ್ಪನೆಯ ಹಿನ್ನೆಲೆಯಾಗಿ ಇದನ್ನು ರಚನೆ ಮಾಡಿದ್ದರೂ ಕೂಡಾ ನಮ್ಮ ಇಂದಿನ ಭಾರತೀಯ ಸಮಾಜಕ್ಕೆ ಮಾದರಿಯಾಗಿ ನಿಲ್ಲುವ ಕೃತಿಯಾಗಿದೆ. ಈ ಕಾದಂಬರಿಯು ಗಾತ್ರದಲ್ಲಿ ಚಿಕ್ಕದಾದರೂ ಕೂಡಾ ತನ್ನ ಒಡಲಲ್ಲಿ ಹಲವಾರು ಆಶಯಗಳನ್ನು ತುಂಬಿಕೊಂಡು ವಾಸ್ತವ ಜೀವನಕ್ಕೆ ತುಂಬಾ ಹತ್ತಿರವಾಗುವ ಸಂಗತಿಗಳನ್ನು ತಿಳಿಯಪಡಿಸಿದೆ. ಈ ರೀತಿಯಾಗಿ ಲೇಖಕರ ಸಂದೇಶಗಳನ್ನು ಓದುಗರಿಗೆ ಮುಟ್ಟಿಸುವ ಆಶಯದೊಂದಿಗೆ ಒಳ್ಳೆಯ ರೂಪವನ್ನು ಧರಿಸಿ ನಿಂತಿದೆ.

ಆಕರ ಸಾಹಿತ್ಯ

೧. ಡಾ.ರಾಗೌ, ೨೦೦೫, **ಷಷ್ಟಿ ಸಂಪದ,** ಸಂವಹನ ಪ್ರಕಾಶನ, ಮೈಸೂರು

೨. ಸಿ.ಆರ್.ಯರವಿನತೆಲಿಮಠ, ೨೦೦೦, **ಪಾಶ್ಚಾತ್ಯ ಸಾಹಿತ್ಯ ವಾದಗಳು ಮತ್ತು ಕನ್ನಡ ಸಾಹಿತ್ಯ ಸಂದರ್ಭ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಬರಗೂರು ರಾಮಚಂದ್ರಪ್ಪ, ೨೦೦೨, **ಕರ್ನಾಟಕ ಸಂಗಾತಿ,** ಪ್ರಕಟಣೆ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು

೩.೩ ಕಾದಂಬರಿಯ ಪಾತ್ರಪ್ರಪಂಚ

ನವ್ಯ ಕಾದಂಬರಿಕಾರರ ಸಾಲಿನಲ್ಲಿ ಕುಸುಮಾಕರರ ದೇವರಗೆಣ್ಣೂರು ಕಂಡುಬಂದರು ಕೂಡಾ ಇವರು ತಮ್ಮದೇ ಆದ ವಿಶಿಷ್ಟ ರೀತಿಯಿಂದ ಬರೆಯುವ ಲೇಖಕರು. ಇವರು ತಮ್ಮ ಕಾದಂಬರಿಗಳಲ್ಲಿ ಆಧುನಿಕ ವೈಚಾರಿಕತೆಯನ್ನು ಕಟ್ಟುತ್ತಾರೆ. ಇದನ್ನು ಕೃತಿಯ ಚೌಕಟ್ಟಿನಲ್ಲಿ ಒಂದು ದಟ್ಟ ಅನುಭವವಾಗಿಸುವ ಕುಸುಮಾಕರರ ಕಲಾತ್ಮಕ ಯಶಸ್ಸು ಕೂಡಾ ಅಪೂರ್ವವಾದುದು. ಇವರ ಕಾದಂಬರಿಗಳನ್ನು ಓದಿದಾಗ ನವ್ಯ ಸಂಪ್ರದಾಯವನ್ನು ಸಂಪೂರ್ಣವಾಗಿ ತೊರೆದಂತೆ ಕಂಡುಬರದಿದ್ದರು ಕೂಡಾ ಅದರಿಂದ ಹೊರ ನಿಂತು ಹೊಸ ದಿಕ್ಕಿನ ಅನ್ವೇಷಣೆಗೆ ಆರಂಭಿಸಬೇಕೆಂದು ಹೊರಟವರು ಎಂದರೇ ತಪ್ಪಾಗಲಿಕ್ಕಿಲ್ಲ. ಕನ್ನಡದ ಮಹತ್ವದ ಕೃತಿಗಳ ಸಾಲಿನಲ್ಲಿಯೂ ಒಂದಾಗಿ ನಿಲ್ಲುವ ಈ 'ನಾಲ್ಕನೆಯ ಆಯಾಮ'ದಂತಹ ಕಾದಂಬರಿ ಕಥನ ಸಾಹಿತ್ಯದಲ್ಲಿಯೇ ಒಂದು ಹೊಸ ಆವರಣವನ್ನೇ ಸೃಷ್ಟಿ ಮಾಡಿತು. ಈ ಕಾದಂಬರಿಯಲ್ಲಿ ಬರುವ ಪ್ರತಿಯೊಂದು ಪಾತ್ರಗಳಿಗೆ ಹೆಸರಿಲ್ಲದಿರುವುದು ಈ ಕೃತಿಯ ವಿಶಿಷ್ಟತೆಯನ್ನು ಸೂಚಿಸುತ್ತದೆ. ಕಥಾನಾಯಕನೊಬ್ಬನೆ ಪಾತ್ರ. ಈ ಪಾತ್ರಕ್ಕೆ ಅಲ್ಲಲ್ಲಿ ಒದಗುವ ಸನ್ನಿವೇಶಗಳ ಮೂಲಕ ಇನ್ನುಳಿದ ಪಾತ್ರಗಳು ಲೇಖಕರು ಕೆಲವೊಮ್ಮೆ ಸ್ವತಃ ನಿರೂಪಕರಾಗಿ ಕೆಲವೊಮ್ಮೆ ಸಂಭಾಷಣೆಗಳ ಮೂಲಕ

ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಎಲ್ಲಾ ಪಾತ್ರಗಳು ವಾಸ್ತವ ಬದುಕಿನ ಚಿತ್ರಣವನ್ನು ಕಟ್ಟಿಕೊಡುವುದರಲ್ಲಿ ಯಶಸ್ಸನ್ನು ಕಂಡಿದೆ.

ಪ್ರಸ್ತುತ ಲೇಖಕರು ವ್ಯಕ್ತಿಯನ್ನು ಕೇಂದ್ರವಾಗಿಟ್ಟುಕೊಂಡು ಚಿತ್ರಿಸಿದ ಈ ಕಾದಂಬರಿಯಲ್ಲಿ ಉಳಿದೆಲ್ಲ ಪಾತ್ರಗಳು ನಾಯಕನ ಸ್ಮೃತಿ-ಪ್ರವಾಹದಲ್ಲಿ ಆಗಾಗ ಕಂಡು ಮರೆಯಾಗುತ್ತಾರೆ. ಈ ಪಾತ್ರಗಳು ಒಟ್ಟಾರೆ ಕಥನ ಕ್ರಿಯೆಯ ಬೆಳವಣಿಗೆಗೆ ಇಂಬು ಕೊಡುವುದಿಲ್ಲ. ಆದರೂ ಅದರಲ್ಲಿನ ಬೆಳವಣಿಗೆಯು ಕೆಲ ಪಾತ್ರಗಳನ್ನು ಪಾತ್ರ ವೈವಿಧ್ಯದ ಔಚಿತ್ಯದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಈ ನಾಲ್ಕನೆಯ ಆಯಾಮದಲ್ಲಿ ಬರುವ ಪಾತ್ರಗಳು ಅವನು (ನಾಯಕ)ನ ತಂದೆ, ತಾಯಿ, ಇಬ್ಬರು ಗೆಳೆಯರು, ತಾಯಿಯ ಗೆಳತಿ ಈ ಎಲ್ಲಾ ಪಾತ್ರಗಳು ಈ ಕಾದಂಬರಿಯಲ್ಲಿ ಯಾವ ರೀತಿಯಾಗಿ ಕಾರ್ಯ ನಿರ್ವಹಿಸಿವೆ ಎಂಬುದನ್ನು ವಿವೇಚಿಸಲಾಗಿದೆ. ಪ್ರಸ್ತುತ ಕಾದಂಬರಿಯಲ್ಲಿ ಕಥಾನಾಯಕನ ಮೂಲಕ ಪ್ರಾರಂಭವಾಗುವುದರೊಂದಿಗೆ ನಾಯಕ ವರ್ತಮಾನದಲ್ಲಿಕುಳಿತು ಭೂತಕಾಲದಲ್ಲಿ ಆದ ಅವನ ಅನುಭವಗಳೊಂದಿಗೆ ಕಥೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ.

ತಂದೆ-ತಾಯಿ ಇಲ್ಲಿ ತಂದೆ ತಾಯಿಗಳ ತಿಳುವಳಿಕೆಯ ನುಡಿಗಳು ಮಗನ (ನಾಯಕ)ನ ಜೀವನವನ್ನು ರೂಪಿಸುವಲ್ಲಿಕಾಣಬೇಕಾದ ಯಶಸ್ಸು ಯಾವ ರೀತಿಯಾಗಿ ಬೇರ ತಿರುವನ್ನು ಪಡೆದುಕೊಂಡಿರುವುದನ್ನು ನಾವು ಕಾಣಬಹುದು. ಇಲ್ಲಿ ನಾಯಕ ತಂದೆಯ ವಿಚಾರವನ್ನು ಗ್ರಹಿಸಿಕೊಂಡ ರೀತಿ ಇಂದಿನ ನವ ಯುವಕರಿಗೆ ತುಂಬಾ ಹತ್ತಿರವಾಗಿವೆ. ತಂದೆ-ತಾಯಿಗಳ ಮಾತು ಒಂದು ರೀತಿಯ ಪರಂಪರಾಗತ ಮನೋಧರ್ಮವನ್ನು ಬಿಟ್ಟು ಹೊರಬರದೆ ಇರುವುದನ್ನು ನಮಗೆ ಈ ಪಾತ್ರಗಳು ಎತ್ತಿತೋರಿಸುತ್ತವೇ. ಮಗನ ಕೆಲವೊಂದು ಕಾರ್ಯಗಳಲ್ಲಿ ತಂದೆ ಹೇಳುವ ಮಾತುಗಳು ಇದಕ್ಕೆ ನಿದರ್ಶನವಾಗಿವೆ.

> "ಅವನು ವೃತ್ತಪತ್ರಿಕೆಗಳನ್ನು ಓದಿದರೆ ಅವನ ತಂದೆಗೆ ಬೇಸರ. ಅವನತಂದೆಗೆ ವೃತ್ತಪತ್ರಿಕೆಗಳನ್ನು ಕಂಡರಾಗದು. ವೃತ್ತಪತ್ರಿಕೆಗಳನ್ನು ಓದಿ ವೇಳೆ ಹಾಳುಮಾಡಿಕೊಳ್ಳಬೇಡ. ಕತೆ ಕಾದಂಬರಿಗಳೆಂದರೆ ಅವನ ತಂದೆಗೆ ವಿಪರೀತ ತಲೆನೋವು. ಮಗ ಶಾಲೆಯಿಂದ ತಪ್ಪಿ ಯಾವುದಾದರೂ ಕಾದಂಬರಿಯನ್ನು ತಂದರೆ "ನಿನಗೆ ನನ್ನ ಮಾತೆಂದರೆ ಕಾಲುಕಸ. ವೃತ್ತಪತ್ರ ಕತೆ ಕಾದಂಬರಿ ನಾಳೆ ನಿನ್ನ ಹೊಟ್ಟೆಗೆ ಹಾಕುವುದಿಲ್ಲ" (ನಾಲ್ಕನೆಯ ಆಯಾಮ, ಪುಟ ೧೫)

ತಂದೆಯು ನುಡಿಯುವ ಈ ಮಾತಾಗಲಿ ನಾಯಕ ಹತ್ತನೆಯ ಕ್ಲಾಸ್ ಪಾಸು ಮಾಡಿ ಮುಂದೆ ನಾನು ಕಾಲೇಜಿಗೆ ಸೇರುತ್ತೇನೆ ಅಂದಾಗಿನ ಮಾತು.

> "ಕಾಲೇಜಿಗೆ ಹೋಗಿ ಏನು ಮಾಡುವವ? ನೀನು ಸೈನ್ಸ್, ಸೇರಿ ನಾಲ್ಕು ವರ್ಷ ಮುಗಿದು ಬಿ.ಎಸ್.ಸಿ ಮುಗಿಸಿ ೬೦.೪.೧೨೦ರ ಗ್ರೇಡಿನಲ್ಲಿ ನೌಕರಿಗೆ ಸೇರಿದರೆ ಬಂದ ಲಾಭವೇನು? ನಾಲ್ಕು ವರ್ಷ ಹಾಳು ದುಡ್ಡು ಹಾಳು. ವರ್ಷಕ್ಕೆ ೧೮೦ ರೂಪಾಯಿಗಳಾದ

> ನಾಲ್ಕು ವರ್ಷಗಳ ಸಂಬಳ ನಷ್ಟ ನಾನು ಹೇಳಿದಂತೆ ಮಾಡು. ರೈಲ್ವೆ ಪಬ್ಲಿಕ್ ಕಮಿಶನ್ ಪರೀಕ್ಷೆಗೆ ಕುಳಿತುಕೋ ಆರೆಂಟು ತಿಂಗಳಲ್ಲಿ ನೌಕರಿ ಸಿಕ್ಕುತ್ತದೆ. ರೈಲ್ವೆ ನೌಕರಿ ಎಂದರೆ ಏನೆಂದು ತಿಳಿದುಕೊಂಡಿರುವೆ" (ನಾಲ್ಕನೆಯ ಆಯಾಮ, ಪುಟ ೨೩)

ತಂದೆಯು ಮಗನಿಗೆ ಹೇಳುವ ಇಂತಹ ಕೆಲವೊಂದು ಮಾತುಗಳು ಮಗನ ಜೀವನವನ್ನು ರೂಪಿಸಲ್ಲಿಕ್ಕೆ ಹೇಳಿದಂತೆ ಎಂದು ಮೇಲ್ನೋಟಕ್ಕೆ ಕಂಡುಬಂದರು ಕೂಡಾ, ಅದರಿಂದ ನಮಗೆ ವ್ಯಕ್ತವಾಗುತ್ತಿರುವ ಅಂದಿನ ಒಂದು ಸ್ಥಿತಿ ಇಂದಿನಗಿಂತ ಯಾವ ರೀತಿಯಲ್ಲಿ ಭಿನ್ನವಾಗಿ ಕಂಡುಬಂದಿರುವುದನ್ನು ನಾವು ಈ ಪಾತ್ರದ ಮೂಲಕ ಗ್ರಹಿಸಬಹುದು. ಕಥೆ ಕಾದಂಬರಿಗಳಿಗಿದ್ದ ಅಂದಿನ ಒಂದು ಮೌಲ್ಯ ನಮಗೆ ಸ್ಪಷ್ಟವಾಗುತ್ತದೆ. ಕಥೆ ಕಾದಂಬರಿಗಳು ಕೇವಲ ಮನೋರಂಜನೆಗಾಗಿ, Time pass ಮಾಡಲಿಕ್ಕೆ ಓದಬೇಕೆ ಹೊರತು ಅದನ್ನು ಒಂದು ರೂಢಿಗತವಾಗಿ ದಿನಾಲು ಪಠ್ಯಪುಸ್ತಕಗಳನ್ನು ಓದಿದಂತೆ ಓದುವ ಹಾಗಿಲ್ಲ. ನಮ್ಮ ಬುದ್ಧಿ ಬೆಳವಣಿಗೆಗೆ ಒಳ್ಳೆಯ ವಿಷಯಗಳನ್ನು ಬೋಧಿಸುತ್ತಿದ್ದರು ಕೂಡಾ. ಅವು ನಮ್ಮನ್ನು ತಪ್ಪುದಾರಿಗೆ ಎಳೆಯುತ್ತವೆ ಎಂಬ ವಿಚಾರ ಅಂದಿನ ಒಂದು ವ್ಯವಸ್ಥೆಯಲ್ಲಿ ಇತ್ತು. "ಕತೆ ಕಾದಂಬರಿ ನಾಳೆ ನಿನ್ನ ಹೊಟ್ಟೆಗೆ ಹಾಕುವುದಿಲ್ಲ ಶಿಕ್ಷಣ ಕೊಡಿಸುವುದು ಹೆಚ್ಚಿನ ಮಟ್ಟದಲ್ಲಿ ಇರಲಿಲ್ಲ. ಜೀವನಕ್ಕೆ ಆಧಾರ ಒದಗಿಸುವ ನೌಕರಿಯನ್ನು ಹಿಡಿದು ಮಗ ಎನ್ನಿಸಿಕೊಂಡವನು ತಂದೆ-ತಾಯಿಯ ಯೋಗಕ್ಷೇಮವನ್ನು ನೋಡಿಕೊಳ್ಳುವ ಜವಾಬ್ದಾರಿ ಹೊತ್ತುಕೊಳ್ಳಬೇಕೆಂಬ ಮನೋಭಾವ ಇರುವುದನ್ನು ಕಾಣಬಹುದು. ಅಷ್ಟೇ ಅಲ್ಲದೇ ತಾಯಿಯು ಕೂಡಾ ಮಗನಿಗೆ ಹೇಳುವ ಕೆಲವೊಂದು ಮಾತುಗಳು ಕೂಡಾ ಅಂದಿನ ಪರಿಸರವನ್ನು ಇನ್ನೂ ಹೆಚ್ಚು ನಿಖರವಾಗಿ ಕಟ್ಟಿಕೊಡುತ್ತದೆ.

> "ಅವನು ಸಂಘದ ಕೌಮುದಿ ಸಂಚಲನವನ್ನು ಮುಗಿಸಿಕೊಂಡು ಉತ್ಸಾಹದಿಂದ ಮನೆಗೆ ಬಂದಿದ್ದ ತನ್ನ ತಂದೆಗೆ ತಾಯಿಗೆ ತನ್ನ ಹೊಸ ಅನುಭವಗಳನ್ನು ಹೇಳಲು. ತಂದೆಯ ನುಡಿಯಿಂದ ಅವನು ಭೀತಿಯ ನಂಜಿನಿಂದ ತ್ರಸ್ತನಾದ. "ಅಲ್ಲಿ ಹೋಗಬೇಡಪ್ಪ" ತಾಯಿಯ ಬೇಡಿಕೆ. "ಅಲ್ಲಮ್ಮ ನಾನೊಮ್ಮೆಯೂ ಹೋಗಿರಲಿಲ್ಲ. ತಂದೆಯೇ ಹೇಳಿದ ಸಂಘಕ್ಕೆ ಹೋಗು ಎಂದು ನಾನು ಹೋದೆ" "ಅವರು ನಿಜವಾಗಿ ಹೋಗು ಅನ್ನಲಿಲ್ಲ. ಬಂದವರ ಮುಖದೆದುರು ಸುಮ್ಮನೆ ಹೇಳಿದರು" ಅಲ್ಲಿ ಹೋದರೆ..."
>
> "ಹೆಚ್ಚು ಕೇಳಬಾರದು ತಂದೆ ಹೇಳಿದ ಮಾತಿಗೆ ಹೂಂ ಎನ್ನಬೇಕು ಏನೆಂದರೂ ಅವರಿಗೆ ನಿನಗಿಂತ ಹೆಚ್ಚು ತಿಳಿಯುತ್ತದೆ. ಅವರೇನು ನಿನ್ನ ಶತ್ರುಗಳಲ್ಲ. ನಿನ್ನ ಹಿತವನ್ನೇ ಬಯಸುತ್ತಾರೆ" (ನಾಲ್ಕನೆಯ ಆಯಾಮ, ಪುಟ ೧೮)

ತಾಯಿಯ ಈ ಮಾತಾಗಲಿ ಇವನಿಗೆ ಬೀಳುವ ಕನಸಿನ ವಿಷಯದಲ್ಲಿ ತಾಯಿಗೆ ಕೇಳಿದಾಗ "ದೇವರ ಸ್ಮರಣೆ ಮಾಡಿ ಮಲಗು ಕನಸು ಬೀಳುವುದಿಲ್ಲ" ತಾಯಿಯು ಸಂಪ್ರದಾಯಸ್ಥಳಾಗಿ ಗೋಚರವಾಗುವುದರೊಂದಿಗೆ ಮಗನ ವಿಷಯದಲ್ಲಿ ಯಾವುದೇ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯ

ಅವಳಿಗಿಲ್ಲ. ಪ್ರತಿಯೊಂದಕ್ಕೂ ಗಂಡನ ನಿರ್ಧಾರವೇ ಅಂತಿಮ. ಪುರುಷ ಪ್ರಧಾನ ವ್ಯವಸ್ಥೆಯ ಮೇಲೆ ಇದು ಬೆಳಕು ಚೆಲ್ಲಿದೆ ಎನ್ನಿಸಿದರು ಕೂಡಾ ಕುಸುಮಾಕರರು ಮುಂದೆ ಈ ಕಾದಂಬರಿಯಲ್ಲಿ ಅವರು ಪುರುಷ ಪ್ರಧಾನದಿಂದ ಸ್ತ್ರೀಪ್ರಾಧಾನ್ಯತೆಯ ಕಡೆಗೆ ದೃಷ್ಟಿಕೋನ ಬೀರುವುದರೊಂದಿಗೆ ಕುಟುಂಬದಲ್ಲಿ ಸ್ತ್ರೀಗೂ ಒಂದು ಸ್ಥಾನವಿತ್ತು ಎಂಬುದನ್ನು ಸೂಕ್ಷ್ಮವಾಗಿ ತಿಳಿಪಡಿಸುತ್ತಾರೆ.

> "ಅವನನ್ನು ಕಾಲೇಜಿಗೆ ಹಾಕದಿದ್ದರೆ ನಾನು ಯಾವುದಕ್ಕೂ ಒಂದೆ ಸರಿಯುವುದಿಲ್ಲ. ಇಲ್ಲಿಯವರೆಗೆ ನಾನು ಯಾವುದಕ್ಕೂ ಪ್ರತಿಯಾಡಲಿಲ್ಲ ಎಲ್ಲವನ್ನು ಸಹಿಸಿದ್ದೇನೆ. ಮನೆಯೊಡೆದರೂ ಚಿಂತೆಯಿಲ್ಲ. ನಾನು ಮಗನ ಬದಿಗೆ ನಿಲ್ಲುತ್ತೇನೆ. ರಟ್ಟೆಗಳಲ್ಲಿ ಬಲವಿರುವವರೆಗೆ ದುಡಿದು ಅವನನ್ನು ಕಲಿಸುತ್ತೇನೆ. ತಂದೆ ಈ ನಿರ್ಧಾರವನ್ನು ಒಂದೆ ಎದುರಿಸಿರಲಿಲ್ಲ ತನ್ನ ಹೆಂಡತಿಯಲ್ಲಿಯ ಸ್ಥಿರತೆಯಿಂದ ಮೂಕವಿಸ್ಮಿತನಾದ"
> (ನಾಲ್ಕನೆಯ ಆಯಾಮ, ಪುಟ ೪೨)

ಕುಸುಮಾಕರ ದೇವರಗೆಣ್ಣೂರರು ಈ ಎರಡು ಪಾತ್ರಗಳ ಮೂಲಕ ಅಂದಿನ ಒಂದು ಕುಟುಂಬದ ಚಿತ್ರಿಕರಣ ಕೊಡುವುದರ ಮೂಲಕ ತಂದೆ-ತಾಯಂದಿರ ಮನಸ್ಥಿತಿ ಯಾವ ರೀತಿಯಾಗಿರುತ್ತದೆ. ತಂದೆಯ ಕೆಲವೊಂದು ಮಾತುಗಳು ಮಗನು ತನ್ನ ಬದುಕಿನಲ್ಲಿ ಯಾವ ರೀತಿಯಾಗಿ ನಿರ್ಧಾರ ತೆಗೆದುಕೊಂಡ, ಶಿಕ್ಷಣ ಕೊಡಿಸುವ ವಿಚಾರದಲ್ಲಿ ನಾಯಕನ ಮನಸ್ಥಿತಿ ಮೇಲೆ ಮಾಡಿದ ಪರಿಣಾಮ ತಾಯಿಯ ಮೂಲಕ ಕಾಲೇಜು ಸೇರಿದರು ಕೂಡಾ ಅಲ್ಲಿ ಅವನು ರೂಪಿಸಿಕೊಂಡ ಜೀವನ ರೀತಿ.

ಈ ಕಾದಂಬರಿಯಲ್ಲಿ ಚಿತ್ರಿಸಿರುವ ತಾಯಿಯ ಪಾತ್ರ ಮೃದು ಸ್ವಭಾವದ, ಕಕ್ಕುಲಾತಿಯ ತಾಳ್ಮೆ ಕಾಳಜಿ ಕಾದಂಬರಿಯ ಉದ್ವಿಗ್ನ ವಾತಾವರಣದಲ್ಲಿನ ತಣ್ಣನೆ ಗಾಳಿಬೀಸಿದ ಅನುಭವ ನೀಡುತ್ತದೆ.

ಇಬ್ಬರು ಗೆಳೆಯರು :

ಈ ಕಾದಂಬರಿಯಲ್ಲಿ ಬರುವ ಇಬ್ಬರು ಗೆಳೆಯರ ಪೈಕಿ ಮೊದಲನೆಯ ಸ್ನೇಹಿತ ನಾಯಕನಿಗೆ ಕಾಲೇಜು ಪ್ರಾರಂಭವಾದಾಗ ಅವನಿಗೆ ಪರಿಚಯನಾಗುತ್ತಾನೆ. ಇಲ್ಲಿ ಈ ಸ್ನೇಹಿತ ನಾಯಕನ ಮನಸ್ಸಿನ ಮೇಲೆ ತುಂಬಾ ಪ್ರಭಾವ ಬೀರಿದ ವ್ಯಕ್ತಿಯಾಗಿ ಕಂಡುಬರುತ್ತಾನೆ. ಇವನ ಮೂಲಕ ತನ್ನ ಜೀವನಕ್ಕೆ ಹೊಸ ತಿರುವನ್ನು ತಂದುಕೊಳ್ಳಲು ಪ್ರಯತ್ನಿಸಿರುವುದು ನಮಗೆ ಸ್ಪಷ್ಟವಾಗಿ ಗೋಚರವಾಗುತ್ತದೆ. ಆದರೆ ಸ್ನೇಹಿತ ಯಾವುದೇ ಸಂಗತಿಯಾಗಲಿ, ವಿಚಾರವಾಗಲಿ ನೀನು ಈ ರೀತಿ ಮಾಡು ನಿನ್ನ ಜೀವನಕ್ಕೆ ಒಂದು ಬೆಲೆ ಸಿಗುವದು ಎಂದು ನೇರ ತೀರ್ಮಾನ ಕೊಡುವುದಿಲ್ಲ. ಸ್ನೇಹಿತನ ಇರುವಿಕೆ, ವರ್ತನೆ ಚಟುವಟಿಕೆಗಳು ಜೀವನದಲ್ಲಿ ರೂಪಿಸಿಕೊಂಡ ಶಿಸ್ತು ನಡೆನುಡಿಗಳೇ ನಾಯಕನಿಗೆ ಅವನ ಕಡೆಗೆ ಆಕರ್ಷಿತನನ್ನಾಗಿ ಮಾಡಿದವು.

> "ನನಗೆ ಕಾಲೇಜಿಗೆ ಹೋಗಲು ತಂದೆಯ ಅನುಮತಿಯಿಲ್ಲ. ಮುಂದಿನ ವರ್ಷ ನಾನು ನೋಡಿ ಓದುವುದೇ ಬೇಕು. ಅವನು ತನ್ನ ವಿಚಾರವನ್ನು ಹೇಳಿಕೊಂಡ. "ಈ ಒಂದು

> ವರ್ಷ ಕಲಿತರೆ ಮಾತ್ರ ಏನು ಬಂತು?" ನೀನು ಏನು ಕಲಿಯಲಿರುವೆ? ಬಿ.ಇ ಮಾಡಕೊಳ್ಳಬೇಕೆಂಬ ಹವ್ಯಾಸವಿದೆ. ವೆಚ್ಚಕ್ಕೇನು ಮಾಡುತ್ತೀಯಾ? ಸ್ನೇಹಿತನ ಕಣ್ಣಲ್ಲಿ ಮಿಂಚಿನ ಹೊಳೆ ತುಳುಕಾಡಿತು. ತನ್ನ ಕೈಯಲ್ಲಿದ್ದ ಒಂದು ಸಣ್ಣ ಪುಸ್ತಕವೊಂದನ್ನು ಕೊಟ್ಟು ಹೇಳಿದ. ನನ್ನ ಜೀವನದ ಸಂಜೀವಿನಿ ಇವರಲ್ಲಿದೆ. ಅವನಿಗೆ ಆಶ್ಚರ್ಯವಾಯಿತು. ಈ ಉತ್ತರವನ್ನು ಅಪೇಕ್ಷಿಸಿರಲಿಲ್ಲ.ಅವನ ಮುಖವನ್ನು ನೋಡಿ ನಕ್ಕು ಸ್ನೇಹಿತ ಹೇಳಿದ. ಇದರಲ್ಲಿ ಮಾನವ ಸಾಹಸಕ್ಕೆ ದೊರೆಯದ ಫಲವಿಲ್ಲ ಎಂಬುದನ್ನು ಸ್ಪಷ್ಟಪಡಿಸುವ ಮಹಾಪುರುಷರ ಜೀವನಗಳಿವೆ. ಇದರಲ್ಲಿಯ ಒಬ್ಬೊಬ್ಬರ ಬದುಕು ನನ್ನಲ್ಲಿ ಸತ್ವವನ್ನು ತುಂಬಿದೆ. ಹಣಕ್ಕೇನು? ಮುಂದೇನು ನಾನು ಯೋಚಿಸುವುದೇ ಇಲ್ಲ. ನೀನು ಶಹರದಲ್ಲಿಯಾದರೂ ಇರುವೆ. ನಾನು ಹಳ್ಳಿಯಿಂದ ಬಂದವ ನನ್ನ ಮುಂದೆ ಎರಡೇ ಗುರಿಗಳಿವೆ. ಸಿದ್ಧಿ ಇಲ್ಲವೆ ಮೃತ್ಯು" (ನಾಲ್ಕನೆಯ ಆಯಾಮ, ಪುಟ ೩೦-೩೧)

ಇಲ್ಲಿ ನಾಯಕ ಪರೋಕ್ಷವಾಗಿ ನಿಮ್ಮ ತಂದೆ ಮನಸ್ಪೂರಕವಾಗಿ ಕಾಲೇಜಿಗೆ ಕಳಿಸಿದರಾ ಎಂಬುದನ್ನು ಕೇಳಲು ತನ್ನ ವಿಷಾದವನ್ನು ವ್ಯಕ್ತ ಮಾಡುವುದರೊಂದಿಗೆ ಸ್ನೇಹಿತನ ಜೀವನ ಯಾವ ರೀತಿಯಾಗಿದೆ ಎಂಬುದನ್ನು ತಿಳಿದುಕೊಳ್ಳಲು ಬಯಸಿರುವುದು ಕಾಣಬಹುದು. ಇಲ್ಲಿ ಸ್ನೇಹಿತನ ಮಾತುಗಳಿಂದ ಒಂದು ವಿಷಯ ಗೋಚರವಾಗುತ್ತದೆ. ನನ್ನ ಜೀವನ ಈ ರೀತಿಯಾಗಿ ರೂಪಿಸಿಕೊಳ್ಳಲು ತಂದೆ-ತಾಯಿಗಿಂತ ಮಾಹಾಪುರುಷರ ಜೀವನ ಕ್ರಮಗಳು ನನ್ನನ್ನು ವ್ಯಕ್ತಿಯನ್ನಾಗಿ ರೂಪಿಸಿವೆ ಎಂಬುದು ಪರೋಕ್ಷವಾಗಿ ತಿದುಬರುತ್ತದೆ. ಅಲ್ಲದೆ ಸ್ನೇಹಿತ ಹಳ್ಳಿಯಿಂದ ಬಂದವನ್ನಾಗಿದ್ದು ಅವನ ತಿಳುವಳಿಕೆ ಮಟ್ಟ ಓದುವ ರೀತಿ ಹಳ್ಳಿಯಲ್ಲಿ ಬೆಳೆದ ಸ್ನೇಹಿತ ಅಂತಹ ವಾತಾವರಣ ಕೂಡಾ ಇರದೆ ಇರುವಂತಹ ಸ್ಥಿತಿ ಹಳ್ಳಿಯ ತಂದೆ-ತಾಯಿಂದರಿಗೆ ಕಲಿಯುವ ಮಕ್ಕಳ ಮಟ್ಟಿಗೆ ನಿಂತು ಬುದ್ಧಿವಾದವಾಗಲಿ ಮಕ್ಕಳಿಗೆ ಕಲಿಯಲು ಅನುಕೂಲ ಮಾಡಿಕೊಡುವುದಾಗಲಿ ಅಷ್ಟೊಂದು ತಿಳುವಳಿಕೆ ಇರುವುದಿಲ್ಲ.

ಆದ್ದರಿಂದಲೇ ಇಲ್ಲಿ ಲೇಖಕರು ಸ್ನೇಹಿತನ ಬಾಯಿಯಿಂದಲೇ ನಾನು ಹಳ್ಳಿಯಿಂದ ಬಂದವನು. ನೀನು ಶಹದಲ್ಲಿಯಾದರೂ ಇರವೆ, ಅಂದರೆ ಶಹರದಲ್ಲಿರುವಷ್ಟು ಅನುಕೂಲಗಳು ಹಳ್ಳಿಯಲ್ಲಿ ಇರುವುದಿಲ್ಲ. ಸ್ನೇಹಿತ ಹೇಳುವ "ಸಿದ್ಧಿ ಇಲ್ಲವೇ ಮೃತ್ಯು" ಈ ಮಾತು ಮಹಾಪುರಷರ ಚರಿತ್ರೆಗಳು ಸ್ನೇಹಿತನ ಮೇಲೆ ಎಷ್ಟೊಂದು ಪ್ರಭಾವ ಬೀರಿರುವುದು ಕಂಡುಬರುತ್ತದೆ. ಇಲ್ಲಿ ಇನ್ನೊಂದು ಮಾತು ಸ್ಪಷ್ಟವಾಗುತ್ತದೆ. ಜೀವನವನ್ನು ರೂಪಿಸಿಕೊಳ್ಳಲು ತಂದೆ-ತಾಯಂದಿರು ಒಂದು ಹಂತದವರೆಗೆ ಬೇಕು. ಆದರೆ ಮುಂದೆ ಅದನ್ನು ಅವರಿಂದಲೇ ಬಯಸಬೇಕು ಎಂಬುವುದಿಲ್ಲ. ಅದನ್ನು ನಾವು ಒಳ್ಳೊಳ್ಳೆ ನೀತಿ-ಬೋಧಕ ಪುಸ್ತಕಗಳಿಂದಲೂ ಪಡೆದುಕೊಳ್ಳಬಹುದು. ಇಲ್ಲಿ ಲೇಖಕರು ಅದನ್ನು ಗೆಳೆಯನ ಪಾತ್ರದ ಮೂಲಕ ಸ್ಪಷ್ಟಪಡಿಸಿದ್ದಾರೆ. ಸ್ನೇಹಿತನು ನಾಯಕನಿಗೆ ಹೇಳುವ ಇನ್ನು ಕೆಲವೊಂದು ವಿಚಾರಗಳು.

> "ಜೀವನಕ್ಕೊಂದು ಉದ್ದೇಶವಿರಬೇಕು ಹೊಟ್ಟೆ ತುಂಬಿಕೊಳ್ಳುವುದೊಂದೇ [illegible] ಉದ್ದೇಶವಲ್ಲ. ಒಂದೊಂದು ಸಲ [illegible]

ಚರ್ಚಿಸುತ್ತಿದ್ದ ಆದರೆ ಸ್ನೇಹಿತನಿಗೆ ಅವನು ತುಂಬ ಹೆದರುತ್ತಿದ್ದ. "ಒಂದೇ ಒಂದು ಹೆಜ್ಜೆನ್ನಿಡಬೇಕು ಮುಂದಿನ ಹೆಜ್ಜೆಗೆ ದಾರಿ ತಾನೇ ತೆರೆಯುತ್ತದೆ. ನಾಲ್ಕು ಗೋಡೆಗಳ ಮಧ್ಯದಲ್ಲಿ ಕುಳಿತು ಭವಿಷ್ಯದ ಯೋಜನೆಯನ್ನು ಹಾಕುವವರು ಹೇಡಿಗಳು ನಿಷ್ಕ್ರಿಯರು" (ನಾಲ್ಕನೆಯ ಆಯಾಮ, ಪುಟ ೩೮)

ಇಲ್ಲಿ ಲೇಖಕರು ಸ್ನೇಹಿತನ ಪಾತ್ರದ ಮೂಲಕ ಉಪದೇಶ ಕೊಡಿಸುವುದರ ಮೂಲಕ ಜೀವನದಲ್ಲಿ ವ್ಯಕ್ತಿ ಯಾವ ರೀತಿಯಾಗಿ ಬಾಳಬೇಕು ಎಂಬ ಸಂದೇಶವನ್ನು ಕಲಿಯುತ್ತಿರುವ ನವಯುವಕರಿಗೆ ಪ್ರೇರಣೆ ನೀಡುವ ಹಾಗೆ ಇಲ್ಲಿ ಈ ಪಾತ್ರದ ಮೂಲಕ ಹೇಳಿದ್ದಾರೆ. ಈ ಭೂಮಿಯ ಮೇಲೆ ಜನ್ಮ ತಾಳಿದ ಮನುಷ್ಯ ಕೇವಲ ಹೊಟ್ಟೆಹೊರೆದುಕೊಳ್ಳುವುದರಲ್ಲಿಯೇ ಜೀವನವನ್ನು ತೇಯುವುದು ನಿಷ್ಪ್ರಯೋಜನ. ಜೀವನ ತುಂಬ ಕಷ್ಟಕರವಾದುದ್ದು ಎಂದು ತಿಳಿದು ನಾಲ್ಕು ಗೋಡೆಗಳ ಮಧ್ಯೆ ಕುಳಿತು ಚಿಂತನೆ ಮಾಡಿದರೆ ಅದರಿಂದ ಪರಿಹಾರ ದೊರೆಯುತ್ತದೆಯೇ? ಅದರಿಂದ ಧೈರ್ಯವಾಗಿ ಹೊರಬಂದು ಸಮಾಜದಲ್ಲಿ ಆಗುಹೋಗುಗಳನ್ನು ಕಣ್ಣಾರೆ ಕಾಣಬೇಕು. ಜಟಿಲತೆಯಿಂದ ಕೂಡಿರುವ ಪರಿಸದಲ್ಲಿಯೇ ಇದ್ದುಕೊಂಡು ನಾವು ಮುಂದೆ ಬಂದು ಜೀವನವನ್ನು ರೂಪಿಸಿಕೊಂಡಾಗ ಅದರಲ್ಲಿ ಸಿಗುವ ಆನಂದ ಅನನ್ಯವಾದದ್ದು.

ನಾಯಕನ ಬದುಕಿನಿಂದ ಮೊದಲನೆಯ ಸ್ನೇಹಿತ ಮರೆಯಾದ ಬಳಿಕ ನಾಯಕ ಸೂತ್ರವಿಲ್ಲದ ಗಾಳಿಪಟದಂತೆ ಆಗುತ್ತಾನೆ. ನಾಯಕ ಸುದೈವ ಎನ್ನುವಂತೆ ಇನ್ನೊಬ್ಬನ ಸ್ನೇಹಿತ ಪರಿಚಯವಾಗುತ್ತದೆ. ಕತ್ತಲು ಕವಿದ ತನ್ನ ಬಾಳಿಗೆ ಬೆಳಕು ಬಂದಂತೆ ಎರಡನೆಯ ಗೆಳೆಯನ ಕಡೆಗೆ ಮನಸ್ಸು ವಾಲುತ್ತದೆ.

"ಅವನಿಗೆ ಈ ಹೊಸ ಸ್ನೇಹಿತನ ಬದುಕು ಅದ್ಭುತ ಪವಾಡವೆನ್ನಿಸಿತು. ತನ್ನ ಸತತ ಪ್ರಯತ್ನದಿಂದ. ನಿತ್ಯ ಕಾಲೇಜಿನಲ್ಲಿ ನರ್ಸರಿಯಲ್ಲಿ ಎರಡು ತಾಸು ದುಡಿಯುತ್ತಾನೆ. ಅದು ತಿಂಗಳಿಗೆ ಮೂವತ್ತು ರೂಪಾಯಿ ತನ್ನ ತಂದೆಯಿಂದ ಒಂದು ಕಾಸೂ ಬರುವುದಿಲ್ಲ. ಈ ಹದಿನೈದು ದಿನಗಳಲ್ಲಿ ಇಬ್ಬರಲ್ಲೂ ಸಾಕಷ್ಟು ಸಲುಗೆಯಾಗುತ್ತದೆ. ಸ್ನೇಹಿತನನ್ನು ಒಂದು ದಿವಸ ಅವನು ಸಿನಿಮಾಕ್ಕೆ ಕರೆದ. ಸ್ನೇಹಿತ ಹೇಳಿದ: ಅದಕ್ಕೇನಂತೆ! ಮುಂದಿನ ವಾರ ಒಳ್ಳೆಯ ಚಿತ್ರ ಬರಲಿದೆಯಂತೆ ಅದಕ್ಕೆ ಹೋದರೆ ಒಳ್ಳೆಯದು. "ಯಾವುದು? ನಿಮಗೆ ಹೇಗೆ ಗೊತ್ತು?" ಇಂದು ಪತ್ರಿಕೆಯಲ್ಲಿ ಪ್ರಕಟಣೆ ನೋಡಿದೆ. ಹೋದ ತಿಂಗಳು ಟೈಮ್ಸ್‌ನಲ್ಲಿ ಅದರ ವಿಮರ್ಶೆ ಓದಿದ್ದೆ. ಅವನಗೆ ಆಶ್ಚರ್ಯವಾಯಿತು. ತಾನು ಚಿತ್ರ ಪ್ರಪಂಚದಲ್ಲಿಯ ಹುಳು ಎಂದು ತಿಳಿದುಕೊಂಡಿದ್ದ. ಆದರೆ ಒಮೆಯೂ ವಿಮರ್ಶೆ ಓದಿರಲಿಲ್ಲ. ಎಲ್ಲ ಸಿನಿಮಾ ಒಂದೇ ಎಂಬ ಭಾವನೆ ಅವನದು "ವಿಮರ್ಶೆ ಏನಿದೆ?" "ಚಿತ್ರ ತುಂಬಾ ಹೊಸ ದಾರಿಯನ್ನು ತುಳಿದಿದೆ. ಮೇಲಾಗಿ ಹೊಸ ಮುಖಗಳಿವೆಯಂತೆ ಸಂಗೀತ ಇಲ್ಲ. ಜೀವನದ ಬೃಹತ್ಸಮಸ್ಯೆಯ ಸಮಾಲೋಚನೆಯಿದೆಯಂತೆ." (ನಾಲ್ಕನೆಯ ಆಯಾಮ, ಪುಟ ೭೪)

ಸ್ನೇಹಿತನು ಆಯ್ಕೆ ಮಾಡಿಕೊಳ್ಳುತ್ತಿದ್ದ ವಿಷಯವಾಗಲಿ ಆಳವಾದ ಚಿಂತನೆ ಜೀವನದ ಬಗ್ಗೆ ಇರುವ ಉತ್ಸಾಹ ಲವಲವಿಕೆ ನೇರ ನುಡಿ ಅವನಲ್ಲಿ ಹೊಸ ರೀತಿಯ ಚೈತನ್ಯವನ್ನುಂಟು ಮಾಡುತ್ತಿತ್ತು. ಸ್ನೇಹಿತನ ಜೊತೆಗಿನ ಕೆಲವೊಂದು ವಿಷಯಗಳ ಚರ್ಚೆ ಬೇರೆ ಬೇರೆ ಚಿಂತನೆ ಮಾಡಲು ಅವನನ್ನು ಪ್ರೇರೇಪಿಸುತ್ತಿದ್ದವು.

ಇಲ್ಲಿ ಲೇಖಕರು ಎರಡನೆಯ ಗೆಳೆಯನ ಪಾತ್ರದ ಮೂಲಕ ವಾಸ್ತವ ಜೀವನದ ಚಿತ್ರಣವನ್ನು ಕಟ್ಟಿಕೊಡುತ್ತಾರೆ, ಕಲಿಯಬೇಕು ಎಂಬ ಉತ್ಸಾಹವಿರುವ ಹುಡುಗರು ಮನೆಯಲ್ಲಿ ಕಲಿಸಲಿಕ್ಕೆ ಆಗದೆ ಇರುವಂತಹ ಪರಿಸ್ಥಿತಿ ಇದ್ದಾಗಲೂ ಆ ಎಲ್ಲಾ ವೇದನೆಯನ್ನು ನುಂಗಿಕೊಂಡು ದುಡಿಯುತ್ತಲೆ ಶಿಕ್ಷಣವನ್ನು ಪೂರೈಸಿಕೊಂಡು ಉನ್ನತ ಸ್ಥಾನಕ್ಕೆ ಹೋಗಿರುವುದನ್ನು ಕಾಣಬಹುದು. ಈ ಗೆಳೆಯನ ಜೀವನವನ್ನೇ ನಾಯಕನಿಗೆ ತುಲನೆ ಮಾಡಿದರೆ ಸ್ನೇಹಿತನಿಗೆ ಇರುವಷ್ಟು ಅನಾನುಕೂಲ ಪರಿಸ್ಥಿತಿ ಇವನಿಗೆ ಇಲ್ಲದಿರುವುದು ಕಂಡುಬರುತ್ತದೆ ಇಲ್ಲಿ ಲೇಖಕರು ಇನ್ನು ಒಂದು ಮಾತನ್ನು ಈ ಪಾತ್ರದ ಮೂಲಕ ತಿಳಿಪಡಿಸುತ್ತಾರೆ. ಸಿನಿಮಾ ಎನ್ನುವುದು ಕೇವಲ ಮನೋರಂಜನೆಗೆ ಮಾತ್ರವಲ್ಲದ ಅದರಿಂದಲೂ ಚರ್ಚೆ ಮಾಡುವ ವಿಷಯಗಳೂ ಎಷ್ಟೊಂದು ಇರುತ್ತದೆ. ಆಯ್ಕೆ ಮಾಡಿಕೊಂಡು ಆ ಮೂರು ಗಂಟೆಗಳ ಕಾಲ ಕುಳಿತು ನೋಡಿದ ಸಿನಿಮಾ ಈ ಸಮಾಜಕ್ಕೆ ಏನು ಸಂದೇಶವನ್ನು ನೀಡುತ್ತಿದೆ. ಮನೋರಂಜನೆ ಮಾಡುವುದರೊಂದಿಗೆ ಇಂತಹ ವಿಮರ್ಶಾತ್ಮಕ ದೃಷ್ಟಿಕೋನವನ್ನು ಇಟ್ಟುಕೊಂಡು ನೋಡಬೇಕು.

ಈ ಎರಡೂ ಪಾತ್ರಗಳ ಮೂಲಕ ಇನ್ನೊಂದು ವಿಷಯ ಸ್ಪಷ್ಟವಾಗುತ್ತದೆ. ಆ ಇಬ್ಬರು ಸ್ನೇಹಿತರು ಮತ್ತು ನಾಯಕ ಮೂವರು ಸಮ ವಯಸ್ಕರಾದರು ಕೂಡಾ ಗೆಳೆಯರು ರೂಪಿಸಿಕೊಂಡ ಜೀವನ ವಿಧಾನ ನಾಯಕನಿಗೆ ಮಾದರಿಯಾಗುವ ರೀತಿಯಲ್ಲಿ ಪ್ರಭಾವ ಬೀರುತ್ತದೆ. ಸ್ನೇಹಿತರು ಬೆಳೆದ ಪರಿಸರ ಜೀವನದಲ್ಲಿ ಆದ ಅನುಭವಗದಳು ಕೆಲವೊಂದು ಸಾಮಾಜಿಕ, ಆರ್ಥಿಕ ಒತ್ತಡಗಳು ಆ ರೀತಿಯಾಗಿ ಜೀವನದ ಬಗ್ಗೆ ಆಳವಾಗಿ ಚಿಂತನೆ ಮಾಡುವಂತೆ ವಾತಾವರಣ ಸೃಷ್ಟಿಯಾಗಿರಬಹುದು. ಒಂದು ಸಂದರ್ಭದಲ್ಲಿ ಎರಡನೆಯ ಗೆಳೆಯನು ನಾಯಕನಿಗೆ ಹೇಳುವ ಮಾತು ಇದನ್ನು ಹೆಚ್ಚು ಸ್ಪಷ್ಟಪಡಿಸುತ್ತದೆ.

> "ನಾಯಕ ಕೇಳುತ್ತಾನೆ ಸ್ನೇಹಿತನಿಗೆ-ವ್ಯಕ್ತಿ ಹಾಳಾಗುವುದಕ್ಕೆ ಸಮಾಜ ಕಾರಣವೋ ಹೇಗೆ? ನನ್ನ ಅಭಿಪ್ರಾಯ ಒಂದಿರಬಹುದು. ನಿಮ್ಮ ಅಭಿಪ್ರಾಯ ಒಂದಿರಬಹುದು. ಅಭಿಪ್ರಾಯಗಳಿಂದ ಆಗಬಹುದಾದುದೇನು? ನೀವು ಹೇಳುತ್ತೀರಿ-ನಿಮ್ಮ ಚಾರಿತ್ರ್ಯ ಬದಲಾಯಿತೆ? ನಿಮ್ಮ ಸಮಸ್ಯೆಗೆ ಪರಿಹಾರ ದೊರೆಯಿತೆ ಬಳವಾದರೆ ಹೊಣೆ ನನ್ನದಲ್ಲ ಎಂಬುದರಿಂದ ಒಂದಿಷ್ಟು ಮನಸ್ಸಿಗೆ ಸಮಧಾನವಾಗಬುಹುದು. ಆದರೆ ಸಮಾಧಾನದಿಂದ ಏನು ಲಾಭ" (ನಾಲ್ಕನೆಯ ಆಯಾಮ, ಪುಟ ೬೭)

ಒಬ್ಬ ವ್ಯಕ್ತಿತ್ವ ನಿರ್ಮಾಣವಾಗುವುದಕ್ಕೆ ಮನೆಯ ವಾತಾವರಣ ನೇರ ಹಾಗೂ ಸಮಾಜ ಪರೋಕ್ಷ ಕಾರಣವಾದರೂ ಕೂಡಾ. ಸಮಾಜದಲ್ಲಿ ಎಲ್ಲ ರೀತಿಯ ಜನರೂ ಬದುಕುತ್ತಾರೆ ಎಲ್ಲಾ ರೀತಿಯ ವ್ಯವಹಾರಗಳು ನಡೆಯುತ್ತದೆ. ಇಂತಹ ಸಮಾಜದ ಮಧ್ಯೆ ಇದ್ದುಕೊಂಡು ನಮ್ಮ ಆಯ್ಕೆಯಾಗಲಿ, ನಾವು ರೂಪಿಸಿಕೊಳ್ಳುವ ಜೀವನ ನಮ್ಮದಾಗಿರುತ್ತದೆ. ನಮ್ಮ ಬೆಳವಣಿಗೆಯಲ್ಲಿ ಸಮಾಜ ಕಾರಣವಾಗುತ್ತದೆ ಎನ್ನುವುದನ್ನು ಒಂದು ಹಂತದವರೆಗೆ ಒಪ್ಪಿಕೊಳ್ಳೋಣ ಅದರ ಆಚೆಗೆ ರೂಪಿಸಿಕೊಳ್ಳುವ ಜೀವನ ನಮ್ಮದಾಗಿರುತ್ತದೆ. ಎಲ್ಲದಕ್ಕೂ ಸಮಾಜವನ್ನು ಹೊಣೆಯಾಗಿಸುವುದು ಎಷ್ಟರಮಟ್ಟಿಗೆ ಸರಿ"

ಈ ರೀತಿಯಾಗಿ ಲೇಖಕರು ಇಬ್ಬರು ಗೆಳೆಯರ ಮೂಲಕ ವಯಸ್ಸಿನಲ್ಲಿ ಚಿಕ್ಕವರು ಅವರೂ ಕೂಡಾ ಜೀವನನ್ನು ನೋಡುವ ದೃಷ್ಟಿಕೋನ ಆಳವಾದ ಚಿಂತನೆ ಅದೇ ವಯಸ್ಸಿನವನಾದ ಕಾದಂಬರಿಯ ನಾಯಕನ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಕಟ್ಟಿಕೊಡುವುದರೊಂದಿಗೆ ಲೇಖಕರು ಇಬ್ಬರು ಗೆಳೆಯರ ಆಂತರ್ಯದ ಚಹರೆಯನ್ನು ತೆರೆದಿಡುತ್ತಾರೆ.

ತಾಯಿಯ ಗೆಳತಿ :

ನಾಯಕನ ತಂದೆಗೆ ಬೇರೆ ಕಡೆಗೆ ವರ್ಗವಾಗಿ ಹೋಗುವ ಸಮಯ ಬಂದಾಗ ಮಗ ಹಾಸ್ಟೆಲ್‌ನಲ್ಲಿ ಇರುವ ಯೋಜನೆಯನ್ನು ಹೇಳಿದ ವರ್ಷಕ್ಕೆ ಐದುನೂರು ರೂಪಾಯಿ ಆದರೆ ತಾಯಿ ತನ್ನ ಗೆಳತಿ ದೊಡ್ಡ ಅಂತಸ್ತಿಗೆ ಏರಿರುವ ಸಂಗತಿ ಹೊಳೆಯಿತು. ಅವಳದು ದೊಡ್ಡ ಬಂಗಲೆ ಅವಳ ಕಾಂಪೌಂಡಿನಲ್ಲಿ ಇರುವ ರೂಮುಗಳಲ್ಲಿ ತನ್ನ ಮಗನಿಗಾಗಿ ಒಂದನ್ನು ಪುಕ್ಕಟೆಯಾಗಿ ಕೇಳಿ ಅಲ್ಲಿ ಮಗನನ್ನು ಇರುವ ವ್ಯವಸ್ಥೆ ಆಯಿತು. ಇಷ್ಟೊತ್ತಿಗಾಗಲೇ ನಾಯಕ ಬಂಡೇಳುವ ಹುಮ್ಮಸಿನಲ್ಲಿ ಎಲ್ಲಾ ದುಶ್ಚಟಗಳನ್ನು ರೂಢಿಸಿಕೊಂಡಿದ್ದನು. ಅಲ್ಲದೆ ಸಿನಿಮಾ ಮಾಲಿಕನ ಮಗನ ಗ್ಯಾಂಗಿಗೆ ಸೇರಿ. ನಾನು ಸ್ವತಂತ್ರ ಜೀವನ ನಡೆಸುತ್ತಿದ್ದೇನೆ ಎಂಬ ಭ್ರಮೆಯಲ್ಲಿ ಅವನ ಅಭ್ಯಾಸ ನಿಂತುಹೋಗಿತ್ತು.

> "ರೂಮಿಗೆ ಬರಲು ಒಂದೊಂದು ದಿನ ತಡವಾಗುತ್ತಿತ್ತು. ರಾತ್ರಿ ಹನ್ನೊಂದು ಗಂಟೆಯವರೆವಿಗೂ ತಡವಾದದ್ದುಂಟು. ತಾಯಿಯ ಗೆಳತಿ ಕೇಳಿದಳು. "ಏನಪ್ಪ ನಿನ್ನೆ ರಾತ್ರಿ ತುಂಬಾ ತಡವಾಗಿ ಬಂದೆ? ಎಲ್ಲಿಗೆ ಹೋಗಿದ್ದೆ? ಇವನ ಗಂಟಲು ಒಣಗಿತು. "ಗಣಿತದ ಅಭ್ಯಾಸಕ್ಕೆ ಹೋಗಿದ್ದೆ ನಾಲಿಗೆ ಒಣಗಿ ಬಂದಿದ್ದರೂ ಹೇಗೋ ಹೇಳಿದ ನೋಡು ಗೆಳತಿಯ ಮಗ ಎಂದು ನಿನಗೆ ನಾನು ಸ್ಥಳಕೊಟ್ಟಿದ್ದೇನೆ. ನೀನು ಸರಿಯಾಗಿ ನಡೆದುಕೊಂಡರೆ ನನಗೂ ಮನೆಯಲ್ಲಿ ಏನೂ ಎನ್ನುವುದಿಲ್ಲ. ಹೀಗೆಲ್ಲ ಮಾಡಿದರೆ ನನಗೆ..." (ನಾಲ್ಕನೆಯ ಆಯಾಮ, ಪುಟ ೯೯)

ನಾಯಕ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ತಾಯಿಯ ಗೆಳತಿಯ ಎದುರು ಸುಳ್ಳು ಹೇಳತೊಡಗಿದ ಅದು ಅವಳ ಗಮನಕ್ಕೆ ಬಂದಿದ್ದರೂ ಕೂಡಾ ತಾಳ್ಮೆಯಿಂದ ಅವನಿಗೆ ಬುದ್ಧಿವಾದ ಹೇಳುತ್ತಾಳೆ. ನಿನಗೆ ಇಲ್ಲಿ ಇರಲು ಜಾಗ ನೀಡಿರುವುದು ನಿನ್ನ ತಾಯಿಯ ಮುಖ ನೋಡಿಕೊಂಡು ನಿನ್ನ ಮೇಲೆ ನಿನ್ನ ತಾಯಿ ಕನಸಿನ ಗೋಪುರಗಳನ್ನು ಕಟ್ಟಿದ್ದಾಳೆ. ನೀನು ತಪ್ಪು ದಾರಿ ಹಿಡಿದು ಅವಳ ಮನಸ್ಸನ್ನು ನೋಯಿಸಬೇಡ. ವಿಚಾರಮಾಡಿ ಸರಿಯಾದ ಹೆಜ್ಜೆಯನ್ನಿಟ್ಟು ಜೀವನವನ್ನು ರೂಪಿಸಿಕೊಳ್ಳುವುದನ್ನು ಕಲಿ. ಅವಳ ಮಾತು ಅವನ ಮನಸ್ಸಿನ ಮೇಲೆ ಯಾವುದೇ ಪರಿಣಾಮವನ್ನುಂಟು ಮಾಡುವುದಿಲ್ಲ. ಈ ಘಟನೆ ನಡೆದ ನಂತರ ಕೆಲವು ದಿನಗಳು ಕಳೆದ ಮೇಲೆ ಮತ್ತೆ ನಾಯಕ ತಾಯಿಯ ಗೆಳತಿಯ ಮಗಳ ವಿಷಯವಾಗಿ ತಪ್ಪು ಮಾಡಿ ಸಿಕ್ಕಿಹಾಕಿಕೊಳ್ಳುತ್ತಾನೆ.

> ಈಗಲೇ ನಿನಗೆ ಮನೆಬಿಟ್ಟು ಹೋಗು ಎನ್ನುವುದು ನನ್ನ ಮನಸ್ಸಿಗೆ ಹಿಡಿಸುವುದಿಲ್ಲ
> ಆದರೆ ಹೀಗೆ ಹೇಳದಿರುವುದಕ್ಕೂ ನಾನು ಹೆದರುತ್ತೇನೆ. ನಿನ್ನಲ್ಲಿ ನನಗೆ ವಿಶ್ವಾಸವಿಲ್ಲ.

ಆದರೂ ನಿನ್ನ ತಾಯಿಯ ಮುಖನೋಡಿ ಇರು ಎಂದು ಹೇಳುತ್ತೇನೆ" (ನಾಲ್ಕನೆಯ ಆಯಾಮ)

ಲೇಖಕರು ಈ ಪಾತ್ರದ ಮೂಲಕ ಗೆಳೆತನಕ್ಕೆ ಇರುವ ಪ್ರಾಮುಖ್ಯತೆಯನ್ನು ತಿಳಿಪಡಿಸುವುದರೊಂದಿಗೆ, ಗೆಳೆತನದಲ್ಲಿ ಇರುವಂತಹ ವಿಶ್ವಾಸ, ನಂಬಿಕೆ, ಪ್ರೀತಿ ಇವುಗಳನ್ನು ಇಲ್ಲಿ ಸೂಕ್ಷ್ಮವಾಗಿ ಬಿಚ್ಚಿತೋರಿಸಿರುವುದು ಗಮನಕ್ಕೆ ಬರುತ್ತದೆ. ಗೆಳೆತಿಯ ಮಗ ಎನ್ನುವ ಒಂದೇ ಕಾರಣದಿಂದ ಅವನ ಎಲ್ಲ ಕೆಟ್ಟ ಚಟುವಟಿಕೆಗಳನ್ನು ಸಹಿಸಿಕೊಂಡು ಬುದ್ಧಿವಾದ ಹೇಳುತ್ತಾಳೆ, ಹೊರತು ಮನೆಯಿಂದ ಹೊರಗೆ ಕಳಿಸುವ ಮಟ್ಟಕ್ಕೆ ಹೋಗುವುದಿಲ್ಲ ಆದರೆ ನಾಯಕ ಮನೆಯೊಡತಿ ಇವನ ಮೇಲೆ ಇಟ್ಟ ವಿಶ್ವಾಸವನ್ನು ಉಳಿಸಿಕೊಳ್ಳದೆ. ಬಂದ ಈ ಸದವಕಾಶವನ್ನು ತಪ್ಪು ಹೆಜ್ಜೆ ಇಡುವುದರಲ್ಲಿ ಕಳೆದುಕೊಳ್ಳುತ್ತಾನೆ.

ಕಾದಂಬರಿಯ ನಾಯಕ :

ನಾಯಕನು ಈ ಕಾದಂಬರಿಯಲ್ಲಿ ಪ್ರಮುಖ ಪಾತ್ರವಾಗಿ ಕಾಣಿಸಿಕೊಳ್ಳುತ್ತಾನೆ. ವ್ಯಕ್ತಿಯನ್ನು ಕೇಂದ್ರಪ್ರಜ್ಞೆಯಾಗಿಟ್ಟು ಕಾದಂಬರಿಯನ್ನು ಕುಸುಮಾಕರರು ಹೆಣೆದಿರುವುದು ಕಂಡುಬರುತ್ತದೆ. ನಾಯಕನ ಮನಸ್ಸನ್ನು ಪದರು ಪದರಾಗಿ ಬಿಡಿಸಿತೋರಿಸುವ ಮೂಲಕ ಅವನ ಪ್ರತಿಯೊಂದು ಭಾವನೆಯನ್ನು ಓದುಗರಿಗೆ ಅರ್ಥಮಾಡಿಸಿದ ರೀತಿ ಸೊಗಸಾಗಿದೆ. ಸಂಪೂರ್ಣವಾಗಿ ನಾಲ್ಕನೆಯ ಆಯಾಮ ಮನೋವಿಶ್ಲೇಷಣೆಯ ಹಿನ್ನೆಲೆಯಲ್ಲಿ ಮೂಡಿಬಂದಿದೆ. ಕಥಾನಾಯಕ ಮನಸ್ಸಿನ ಪಾತಳಿಯ ಮೇಲೆ ಕತೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ನಾಲ್ಕು ಆಯಾಮಗಳಲ್ಲಿ ಅವನ ಬದುಕು ವ್ಯಕ್ತವಾಗುತ್ತದೆ.

ಮೊದಲನೆಯ ಆಯಾಮದಲ್ಲಿ	-	ಭಯದಲ್ಲಿ ಬದುಕುವಿಕೆ
ಎರಡನೆಯ ಆಯಾಮ	-	ಇನ್ನೊಬ್ಬರ ಅನುಕರಣೆ ಮಾಡುವುದು
ಮೂರನೆಯ ಆಯಾಮ	-	ಬಂಡಾಯದ ಮನೋಭಾವನೆ
ನಾಲ್ಕನೆಯ ಆಯಾಮ	-	ಮುಖವಾಡದ ಸಹಾಯ ಪಡಿಯುವಿಕೆ

ನಾಯಕ ವರ್ತಮಾನದಲ್ಲಿ ಕುಳಿತು ಭೂತಕಾಲದಲ್ಲಿ ನಡೆದ ಘಟನೆಗಳ ಮೂಲಕ ತಾನು ಅನುಭವಿಸಿದ ಯಾತನೆ, ತಂದೆಯ ಕೆಲವೊಂದು ಮಾತುಗಳು ಶಾಲೆಯಲ್ಲಿ ನಡೆದ ಆ ಚಿಕ್ಕ ಘಟನೆಯಿಂದ ಆಗ ತನಗಾದ ಅವಮಾನ ವರ್ತಮಾನದಲ್ಲಿ ಅವನ್ನು ನೆನಪಿಸಿಕೊಂಡ ನನ್ನ ಮನಸ್ಸು ಕೆರಳುತ್ತಿದೆ. ಕಾಲದ ಸಂಯೋಜನೆ, ನೆನಪುಗಳು ಮತ್ತು ಕನಸುಗಳ ಬಳಕೆ, ಕೃತಿಯ ನಾಯಕನ ಪಾತ್ರಕ್ಕೆ ಬದ್ಧವಾದ ದೃಷ್ಟಿಕೋನ ಇವುಗಳಲ್ಲಿ 'ನಾಲ್ಕನೆಯ ಆಯಾಮ' ಪ್ರಜ್ಞಾಪ್ರವಾಹ ತಂತ್ರವನ್ನು ಅಳವಡಿಸಿಕೊಂಡಿದೆ.

> "ಶಾಲೆಯಲ್ಲಿ ಆಡುವ ಒಂದು ಆಟ ನಿತ್ಯ ಹೊಸ ಶಬ್ದಗಳನ್ನು ಹುಡುಕಿ ಹೇಳುವ ಉತ್ಸಾಹದಲ್ಲಿ ಅಂದು ತಾನೊಂದು ಹೊಸ ಶಬ್ದವನ್ನು ಸೃಷ್ಟಿಸಿದ 'organ' ಎಂಬ ಶಬ್ದವನ್ನು ಉಚ್ಚಾರ ಮಾಡಿದಕ್ಕೆ ಹೊರಗೆ ಹೋಗು ನಾಚಿಕೆ ಬರುವುದಿಲ್ಲವೇ"

ಎಲ್ಲಿತ್ತು ಈ ಶಬ್ದ? ಇನ್ನೂ ಚಿಕ್ಕ ವಯಸ್ಸು ಈಗಲೇ ಈ ದಾರಿ... ಮುಖ್ಯಾಧ್ಯಾಪಕರಿಗೆ ರಿಪೋರ್ಟ್ ಮೈಡಲೇನು? ಒಂದು ಸ್ಟ್ರೋಕ್ ಆಫ್ ಪೆನ್ನಿನಿಂದ ನಿನ್ನ ಆಯುಷ್ಯವನ್ನೆಲ್ಲ ನಾನು ಹಾಳುಮಾಡಬಲ್ಲೆ. ಇನ್ನೊಮ್ಮೆ ಹೀಗೆ ಮಾಡುವುದಿಲ್ಲ ಹೇಳು ಬೊಗಳು" (ನಾಲ್ಕನೆಯ ಆಯಾಮ, ಪುಟ ೮)

ತಾನು ಆಟದಲ್ಲಿ ಭಾಗವಹಿಸಬೇಕು ಎಂಬ ಉದ್ದೇಶದಿಂದ ಆ ಶಬ್ದವನ್ನು ಬರೆದುಕೊಂಡು ಬಂದು ಉಚ್ಚರಿಸಿದ್ದನೆ ವಿನಃ ಅದರ ಅರ್ಥ ಕೂಡಾ ಅವನಿಗೆ ತಿಳಿದಿರಲಿಲ್ಲ. ತನ್ನ ಕಡೆ ತಪ್ಪು ಇರದಿದ್ದರು ಕೂಡಾ ಧೈರ್ಯವಾಗಿ ಶಿಕ್ಷಕರಿಗೆ ಹೇಳುವುದು ಆಗುವುದಲ್ಲ.

"ಇನ್ನೊಮ್ಮೆ ಅದೇ ಶಿಕ್ಷಕರು ತನ್ನ ಸಹಾಧ್ಯಾಯಿಯನ್ನು ಹೊಡೆದಾಗ ಅವನು ನೇರವಾಗಿ ಮನೆಗೆ ಹೋಗಿ ತನ್ನ ತಂದೆಯನ್ನು ಕರೆದುಕೊಂಡು ಬಂದಿದ್ದ ಮುಯ್ಯಕ್ಕೆ ಮುಯ್ಯಿ ತೀರಿಸಿಕೊಂಡಿದ್ದ" (ನಾಲ್ಕನೆಯ ಆಯಾಮ, ಪುಟ ೯)

ನಾಯಕನಿಗೆ ಯಾವುದೇ ವಿಷಯದಲ್ಲಿ ಧ್ವನಿ ಎತ್ತಿ ಮಾತಾಡುವ ಧೈರ್ಯ ಇಲ್ಲದಿರುವಿಕೆಗೆ ಮನೆಯಲ್ಲಿ ಬೆಳೆದ ವಾತಾವರಣ ನಾಯಕ ಅಪ್ಪನ ಅಪೇಕ್ಷೆಯಂತೆ ಬಾಳಿದ, ನರಳಿದ, ಚಡಪಡಿಸಿದ ಆದರೆ ಯಾವುದಕ್ಕೂ ಪ್ರತಿ ಆಡಲಿಲ್ಲ. ಕಾರಣ ಭಯ ಅವನ ಮೂಲ ತಳಹದಿ. ಪ್ರತಿಯೊಂದು ಕೆಲಸದಲ್ಲಿ ಅಡ್ಡ ಬರುವ ತಂದೆ ಎಲ್ಲಾ ಕಾರ್ಯದಲ್ಲಿ ಹಸ್ತಕ್ಷೇಪ ಮಾಡಿ ಕೆಲವೊಂದು ಮಾಹಿತಿಯನ್ನು ನೀಡಿ ಜೀವನ ಎಂದರೆ ಕಷ್ಟಗಳ ಸಂಕೋಲೆ ಎಂಬ ವಿಚಾರವನ್ನು ಹೇಳುತ್ತಿದ್ದ ಪರಿಣಾಮವಾಗಿ ಭಯ, ಭಯಂಕರವಾದ ಶೂನ್ಯ ಬಂದು ಭಯಗ್ರಸ್ತನಾಗುತ್ತಿದ್ದ. ನನಗೆ ಆದ ಹಾಗೆ ಬೇರೆಯವರಿಗೂ ಹೀಗಾಗುತ್ತದೆಯೇ ಎಂದು ಯೋಚಿಸಲೂ ಭಯ! ತಂದೆ ಪದೇ ಪದೇ ಹೇಳುವ ಒಂದು ಮಾತು "ನಾನು ನಿನ್ನ ಹಿತವನ್ನೇ ಬಯಸುತ್ತೇನೆ" ಎನ್ನುವ ಈ ಮಾತು ಎಲ್ಲಿ ತಪ್ಪಿ ನಡೆದರೆ ನನ್ನ ಜೀವನ ಅಂತ್ಯ ಆಗುತ್ತದೆಯೋ ಎನ್ನುವ ಭಯ. ಇದರಿಂದಾಗಿ ನಾಯಕ ತಾನು ಸ್ವಂತ ವಿಚಾರ ಮಾಡುವುದನ್ನೇ ಕಳೆದುಕೊಳ್ಳುವ ಮಟ್ಟಿಗೆ ಬರುತ್ತಾನೆ. ಈ ಭಯವೆ ಅವನಿಗೆ ಶಾಲೆಯಲ್ಲಿ ಶಿಕ್ಷಕರ ಎದುರು ನಿಂತು ಮಾತನಾಡದ ಸ್ಥಿತಿ ನಿರ್ಮಾಣ ಮಾಡುತ್ತದೆ. ಬಾಲ್ಯದಲ್ಲಿ ಮಕ್ಕಳಿಗೆ ಈ ರೀತಿಯಾಗಿ ಭಯದ ವಾತಾವರಣದಲ್ಲಿ ಬೆಳೆಸುವುದರಿಂದಲೇ ಮುಂದೆ ಅವರ ಜೀವನದಲ್ಲಿ ಯಾವ ಸಣ್ಣ ಪುಟ್ಟ ಕಷ್ಟ ಬಂದರು ಎದುರಿಸುವ ಧೈರ್ಯದ ಮನಸ್ಥಿತಿಯ ಕಳೆದುಕೊಂಡು ಬಿಡುತ್ತಾರೆ. ತಂದೆಯ ಎದುರು ನಿಂತು ಮಾತನಾಡಲು ಆಗದ ನಾಯಕನಿಗೆ ಅವೆಲ್ಲವು ಕನಸುಗಳ ರೂಪದಲ್ಲಿ ಪ್ರಕಟವಾಗುತ್ತವೆ.

"ಸುಪ್ತ ಮನಸ್ಸು ಸ್ವಾಭಾವಿಕ ಪ್ರವೃತ್ತಿಗಳು ದಮನ ಮಾಡಲ್ಪಟ್ಟಾಗ ಕನಸು. ಹಗಲುಗನಸುಗಳ ಮುಖಾಂತರ ಅಭಿವ್ಯಕ್ತಗೊಳ್ಳಲು ಯತ್ನಿಸುತ್ತದೆ" (ನಾಲ್ಕನೆಯ ಆಯಾಮ)

ನಾಯಕ ಕಾಲೇಜಿಗೆ ಸೇರಿದಾಗಲೂ ಕೂಡಾ ಭಯ ಅವನ ಸಂಗಾತಿ ಆಗೆ ಇರುತ್ತದೆ. ಈ ನಡುವೆ ಸ್ನೇಹಿತನ ಪರಿಚಯವಾಗುತ್ತದೆ. ಸ್ನೇಹಿತನ ಜೀವನ ಕ್ರಮ, ಧೈರ್ಯ ಮಾತನಾಡುವಾಗ ಇರುವ ಗಾಂಭೀರ್ಯ

[illegible]

[illegible]

[illegible]

[illegible]

[illegible]

ಇವನನ್ನು ಅತ್ತ ಕಡೆಗೆ ಸೆಳೆಯುತ್ತದೆ. ನಾನು ಈ ಗೆಳೆಯನಂತೆ ಆಗಬೇಕಾದರೆ ಇವನು ಇಟ್ಟ ಹೆಜ್ಜೆಯಲ್ಲಿ ನಾನು ಹೆಜ್ಜೆ ಹಾಕುವುದು. ತನ್ನ ಸ್ನೇಹಿತನಿಗೆ ಬಂದ ತಿಳಿವು ತನಗೂ ಬರಲು ಸಾಧ್ಯವಿದೆ ಎಂಬ ಅರಿವು ಅವನಿಗೆ ಬಂದಿಂದಿನಿಂದ ಅವನಲ್ಲಿ ಭಯ ಕಡಿಮೆಯಾಯಿತು ಎನ್ನಿಸಿದರು ಕೂಡಾ ಅವನಿಗೆ ತಿಳಿಯದ ಹಾಗೆ ಇನ್ನೊಂದು ವ್ಯಕ್ತಿತ್ವ ನಿರ್ಮಾಣವಾಗಿತ್ತು. ಪ್ರತಿಯೊಂದಕ್ಕೂ ಗೆಳೆಯನನ್ನು ಅನುಕರಣೆ ಮಾಡಲು ತೊಡಗಿದ್ದ.

> "ಸ್ನೇಹಿತನ ನಿಲುವು ತುಂಬ ಭವ್ಯವೆನಿಸಿತು ಸ್ನೇಹಿತನೊಡನೆ ಅವನು ಹಾಸ್ಟೆಲಿಗೆ ಹೋದ ಅವನ ಜೀವನದಲ್ಲಿಯ ನಿತ್ಯಕ್ರಮವನ್ನು ನೋಡಿ ತನ್ನ ಬದುಕಿನಲ್ಲಿ ಅದನ್ನು ಅಳವಡಿಸಿಕೊಳ್ಳಲು ನಿರ್ಧರಿಸದ. ಸ್ನೇಹಿತನ ಟಿಪ್ಪಣಿಗಳನ್ನು ನೋಡಿದ ಅವೆಷ್ಟು ಸ್ಪಷ್ಟವಾಗಿದ್ದವು? ವರ್ಗವು ಟಿಪ್ಪಣಿಗಳು ಅಬ್ಬಾ! ನನಗೆ ನಿನ್ನಿಂದ ತುಂಬಾ ಸಹಾಯವಾಗಬೇಕು" (ನಾಲ್ಕನೆಯ ಆಯಾಮ, ಪುಟ ೩೧)

ತಂದೆಯ ಕೈಬಿಟ್ಟು ಈಗ ಗೆಳೆಯನ ಬೆರಳನ್ನು ಹಿಡಿದು ನಡೆಯಲು ಪ್ರಾರಂಭಿಸಿದ್ದನು. ಗೆಳೆಯನ ಕೆಲವೊಂದು ಬೋಧನೆಗಳು ತನ್ನ ವ್ಯಕ್ತಿತ್ವದಲ್ಲಿ ಬದಲಾವಣೆ ಮಾಡಿಕೊಂಡಿದ್ದನು. ಸ್ನೇಹಿತನ ಪ್ರೇರಣೆಯಿಂದ ನಾಯಕ ತನ್ನ ಹೃದಯದಲ್ಲಿ ಅಗ್ನಿಕುಂಡವನ್ನು ಹೊತ್ತಿಸಿಕೊಂಡಿದ್ದ ಆದರೆ

> "ಇದಕ್ಕೆಲ್ಲ ಪ್ರೇರಕಶಕ್ತಿಯಿಂದ ಸ್ನೇಹಿತನೇ ಹೋದಾಗ ಅವನು ದಾರಿ ತಪ್ಪಿದವರಂತೆ ಚಡಪಡಿಸಿದ ಈಗ ಎರಡು ದಾರಿಗಳಿದ್ದವು ಅವನೆದುರು ಸ್ನೇಹಿತನಿಗೆ ತಾನೇಕೊಟ್ಟಿದ್ದ ಅಧಿಕಾರವನ್ನು ತಾನು ಇನ್ನೊಬ್ಬರ ಮೇಲೆ ನಡೆಸುವುದು ಇಲ್ಲವೇ ಬರಿದಾದ ತನ್ನ ಹೃದಯ ಸಿಂಹಾಸನದಲ್ಲಿ ಇನ್ನೊಬ್ಬರನ್ನು ತಂದು ಕೂಡಿಸುವುದು" (ನಾಲ್ಕನೆಯ ಆಯಾಮ, ಪುಟ ೪೫)

ಗೆಳೆಯನಿಂದ ಪ್ರೇರಣೆ ಪಡೆದುಕೊಂಡು ನಾನು ಬದಲಾಗಬೇಕು ಸ್ನೇಹಿತ ಹೇಳಿದ ಹಾಗೆ ಅನ್ಯಾಯದ ವಿರುದ್ಧ ಬಂಡೇಳಬೇಕು. ಬದಲಾಗಬೇಕು ಎನ್ನುವ ಮನೋಭಾವನೆಯ ಹಿನ್ನೆಲೆಯಲ್ಲಿಯೇ ಸಿಗರೇಟನ್ನು ಸೇದುತ್ತಾನೆ. ಇದನ್ನು ತಾನು ಯಾವುದೇ ರೀತಿಯ ಭಯಕ್ಕೆ ಒಳಗಾಗದೆ ನಿರ್ಭೀತಿಯಿಂದ ಮಾಡುತ್ತಿದ್ದೇನೆ ಅಂದುಕೊಳ್ಳುತ್ತಾನೆ. ಯಾರ ಹಂಗು ನನಗೆ ಬೇಡ ಎನ್ನುವ ತುಡಿತದಲ್ಲಿ ಮೊದಲು ಸ್ನೇಹಿತನ ಭಾರವನ್ನು ತೆಗೆದೊಗೆಯುತ್ತೇನೆ. ತಂದೆಯ ಅಧಿಕಾರವನ್ನು ಕಿತ್ತೊಗೆಯುತ್ತೇನೆ. ಸಿಗರೇಟನ್ನು ಸೇದುವುದರ ಮೂಲಕ ಬಂಧನವಾಗಿದ್ದ ಆ ಚೌಕಟ್ಟಿನಿಂದ ಹೊರಬರುತ್ತಾನೆ. ಸಿನಿಮಾ ಥೇಟರಿನ ಮಗನ ಗ್ಯಾಂಗ್ ಸೇರುವುದರೊಂದಿಗೆ ಮಾಂಸಹಾರ, ಇಸ್ಪೀಟ್ ಆಟ, ಕಾಲೇಜಿನಲ್ಲಿ ಹುಡುಗಿಯರ ಹೆಸರು ಬರೆಯುತ್ತಾನೆ. ಶಿಕ್ಷಕರಿಗೆ ಗೌರವ ಕೊಡದೆ ಎದೆ ಉಬ್ಬಿಸಿ ವರ್ತಿಸುತ್ತಾನೆ. ಕೊನೆಗೆ ಕಾಲೇಜ್ ಡೇ ದಿನ ಫಿಶ್‌ಪಾಂಡ ಆಟದಲ್ಲಿ ಗ್ಯಾಂಗಿನ ನಾಯಕನ ಪ್ರೇಯಸಿಯ ಹೆಸರು (N°) ಬರೆಯುವುದರ ಮೂಲಕ ಗ್ಯಾಂಗಿನ ನಾಯಕನಿಂದ ಚೆನ್ನಾಗಿ ಬೈಯಿಸಿಕೊಂಡು ಬಡಸಿಕೊಂಡು ಅವಮಾನಿತನಾಗಿ ಹೊರಬರುತ್ತಾನೆ. ಇಲ್ಲಿ ನಾಯಕನಿಗೆ ಬದಲಾಗಬೇಕು ಎನ್ನುವ ತುಮುಲ ಹುಟ್ಟಿರುವುದು ಕೂಡಾ ಸ್ನೇಹಿತರ ಅನುಕರಣೆ

ಮಾಡುವುದರ ಮೂಲಕ ಸ್ನೇಹಿತರು ನೀಡಿದ ವಿಚಾರಗಳು ಸಕಾರಾತ್ಮಕವಾಗಿದ್ದರೂ ಕೂಡಾ ಇವನು ಅವುಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡ ಅದರ ಮೂಲಕ ಇಟ್ಟ ಹೆಜ್ಜೆ ಮಾತ್ರ ನಕಾರಾತ್ಮಕವಾಗಿದೆ. ತಾನು ಯಾವುದರ ವಿರುದ್ಧ ಬಂಡೇಳಬೇಕು. ಹೇಗೆ ತಾನು ಬಾಳಬೇಕು, ಯಾವ ರೀತಿಯಾಗಿ ಪರಿವರ್ತನೆ ಹೊಂದಬೇಕು ಎಂಬ ವ್ಯವದಾನ ಕೂಡಾ ಅವನಿಗೆ ಇಲ್ಲ. ಇಷ್ಟಕ್ಕೂ ಸುಮ್ಮನಾಗದೆ ಸಮಾಜದಲ್ಲಿ ತನ್ನನ್ನು ಗುರುತಿಸಬೇಕೆಂಬ ಹಂಬಲದಲ್ಲಿ ಮುಖವಾಡ ಹಾಕಿ ಬದುಕಲು ಪ್ರಾರಂಭಿಸುತ್ತಾನೆ. ಮುಖವಾಡದ ಸಹಾಯ ಪಡೆದುಕೊಂಡು ಎಲ್ಲರೆದರೂ ಬಡಾಯಿ ಕೊಚ್ಚಿಕೊಳ್ಳುತ್ತಾನೆ. ಪ್ರತಿಷ್ಠೆಯನ್ನು ದೊರಕಿಸಿಕೊಳ್ಳುವ ಪ್ರಯತ್ನಿಸುತ್ತಾನೆ.

ಶ್ರೀಮಂತರ ಮಗಳ ಮೇಲೆ ಪ್ರಭಾವಬೀರಿ ನೃತ್ಯ ಕಲಿಸುವ ನೆಪದಲ್ಲಿ ಅವಳನ್ನು ತನ್ನ ಕಡೆಗೆ ಒಲಿಸಿಕೊಳ್ಳುತ್ತಾನೆ.

> "ನೃತ್ಯದಂತಹ ಕಲೆ ಕರಗತವಾಗುವುದು ತಪಸ್ಸಿನಿಂದ ಮಾತ್ರ ನಿರಾಶೆಗೆ ಕಾರಣವಿಲ್ಲ ನಾನು ದಾರಿಯನ್ನು ಹೇಳುತ್ತೇನೆ. ದುಡಿಯುವುದು ನಿನ್ನ ಕೆಲಸ ಇಂದಿನವರೆಗೆ ಯಾವ ನರ್ತಕಿಯೂ ಏರದ ಶಿಖರವನ್ನು ನೀನೇರುವಂತೆ ಮಾಡುತ್ತೇನೆ" (ನಾಲ್ಕನೆಯ ಆಯಾಮ, ಪುಟ ೧೫೪-೧೫೫)

ನೃತ್ಯ ಕಲಿಸುವ ನೆಪದಲ್ಲಿ ಅವಳನ್ನು ಸ್ಪರ್ಶಮಾಡುವ ಹಂತಕ್ಕೆ ಹೋಗುತ್ತಾನೆ. ಕೊನೆಗೆ ಅದು ಸಾಧ್ಯವಾಗದೆ ಅಲ್ಲಿಂದ ಪಲಾಯನ ಮಾಡುತ್ತಾನೆ. (ಭಯ-ಅವನ ನಿಜವಾದ ವ್ಯಕ್ತಿತ್ವ) ನಾಯಕ ಗ್ಯಾಂಗಿಗೆ ಸೇರಿದ ಅವನಿಗೆ ಅಶ್ಲೀಲ ಪುಸ್ತಕಗಳನ್ನು ಓದಿ ಬೆಳೆಸಿಕೊಂಡ ಲೈಂಗಿಕ ಹಸಿವೇ ವೇಶ್ಯಮನೆಗೆ ಹೋಗುವಂತೆ ಪ್ರೇರೆಪಿಸುತ್ತದೆ. ಅದರ ಅನುಭವ ಆದ ಮೇಲೆ ತನ್ನ ಜೀವನದ ಬಗ್ಗೆ ಅವನಿಗೆ ಜಿಗುಪ್ಸೆ ಬರುವುದರೊಂದಿಗೆ ತಾನು ಪಾಪಿ ಎಂಬ ಮನೋಭಾವನೆ ಬರುತ್ತದೆ. ಮುಖವಾಡ ಹಾಕಿಕೊಂಡ ಮಾಡಿದ ಪ್ರಯತ್ನ ವ್ಯರ್ಥವಾಗುತ್ತದೆ. ಏಕೆಂದರೆ ಮುಖವಾಡವು ಅವನದಲ್ಲವಲ್ಲ? ಅದು ಅವನ ಪಾಪಪ್ರಜ್ಞೆಗೆ ಕಾರಣವಾಯಿತು. ಸರಿಯಾದ ಪರಿಹಾರದ ದಾರಿ ಹುಡುಕದೆ, ಕಷ್ಟದ ಮೂಲವನ್ನು ಇನ್ನೆಲ್ಲೋ ಅರಸುತ್ತಾ ಕುಳಿತದ್ದೇ ನಾಯಕನ ಸೋಲಿಗೆ ಕಾರಣವಾಯಿತು.

ವ್ಯಕ್ತಿಯನ್ನು ಕೇಂದ್ರವಾಗಿಟ್ಟುಕೊಂಡು ಮಾನಸಿಕ ತುಮುಲಗಳನ್ನು ಅನ್ವೇಷಿಸುವುದರ ಮೂಲಕ ಬದುಕಿನ ಹಲವು ಮಗ್ಗುಲುಗಳನ್ನು ಸಹಜವಾಗಿ ಯಾವುದೇ ಭಾವೋದ್ವೇಗವಿಲ್ಲದೆ ನಿರೂಪಿಸಿರುವ ಲೇಖಕರ ತಂತ್ರ ಮೆಚ್ಚುವಂತಹದ್ದು. ನವ್ಯದ ಕೆಲವು ಕಾದಂಬರಿಗಳಲ್ಲಿ ಕಂಡುಬರುವ ಅಸ್ತಿತ್ವದ ಹುಡುಕಾಟ, ಅನಾಥಪ್ರಜ್ಞೆ ಈ ಕೃತಿಯಲ್ಲಿ ಇನ್ನೂ ಚೆನ್ನಾಗಿ ಕುಸುಮಾಕರರು ಅಭಿವ್ಯಕ್ತಿಸಿದ್ದಾರೆ. ಲೇಖಕರು ವ್ಯಕ್ತಿ ವಿಶಿಷ್ಟತೆಯನ್ನು ಪ್ರತಿಪಾದಿಸಲು, ಆಧುನಿಕ ಮನಃಶಾಸ್ತ್ರದ ಹಿನ್ನೆಲೆಯನ್ನು ಬಳಸಿಕೊಂಡಿದ್ದಾರೆ. ಸಿಗ್ಮಂಡ್ ಫ್ರಾಯ್ಡ್, ಯಾಂಗ್ ಮುಂತಾದ ಆಧುನಿಕ ಮನಃಶಾಸ್ತ್ರಜ್ಞರ ಮನಃಶಾಸ್ತ್ರೀಯ ಸಿದ್ಧಾಂತಗಳು ಇವರ ಕಾದಂಬರಿಗಳ ಮೇಲೆ ಪ್ರಭಾವ ಬೀರಿದೆ. ಇಲ್ಲಿಯ ನಾಯಕ ಸಂವೇದನಾಶೀಲತೆವುಳ್ಳವನು. ಆದರೆ

ಸೂಕ್ಷ್ಮಮತಿ ಹಾಗೂ ಮಾನಸಿಕ ದ್ವಂದ್ವವುಳ್ಳವನಾಗಿ ಕಂಡುಬರುತ್ತಾನೆ. ಆದರೆ ಉಳಿದೆಲ್ಲಾ ಪಾತ್ರಗಳು ಬದುಕಿನಲ್ಲಿ ಯಾವುದೇ ಬಗೆಯ ದ್ವಂದ್ವಗಳಿಲ್ಲದೆ ಮಾನಸಿಕ ದೃಢತೆಯನ್ನು ಹೊಂದಿದ್ದಾರೆ. ಕಥಾನಾಯಕನ ವ್ಯಕ್ತಿ ವಿಶಿಷ್ಟತೆಯನ್ನು ಸ್ಪಷ್ಟವಾಗಿ ಚಿತ್ರಿಸಲು ಲೇಖಕರು ಈ ತಂತ್ರವನ್ನು ಬಳಸಿಕೊಂಡಿದ್ದಾರೆಂದು ಹೇಳಬಹುದು.

೩.೪ ಕಾದಂಬರಿಯ ಭಾಷೆ ಮತ್ತು ಶೈಲಿ

ಕನ್ನಡ ಕಾದಂಬರಿಯ ಬೆಳೆದು ಬಂದಿರುವ ರೀತಿಯನ್ನು ಗಮನಿಸಿದಾಗ ಕಾಲಕಾಲಕ್ಕೆ ಬೇರೆ ಬೇರೆ ಸಂಪ್ರದಾಯಗಳು ನಿರ್ಮಾಣವಾಗಿರುವುದನ್ನು ನೋಡಬಹುದು. ಕನ್ನಡ ಕಾದಂಬರಿಗಳಲ್ಲಿ ಕಾಲಕಾಲಕ್ಕೆ ಕಾಣಿಸಿಕೊಂಡ ಪ್ರಭಾವಗಳನ್ನು ಕಾದಂಬರಿಕಾರರ ದೃಷ್ಟಿ ಮತ್ತು ಅವರ ಧೋರಣೆಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ ಆಯಾ ಕಾಲದ ಪ್ರಭಾವಗಳು ಮತ್ತು ಕಾದಂಬರಿಕಾರರ ಧೋರಣೆಗಳು ಆಯಾ ಕಾದಂಬರಿಕಾರರ ಭಾಷೆಯನ್ನು ರೂಪಿಸುತ್ತದೆ. ಇದರ ಜೊತೆಗೆ ಕೆಲವು ಪ್ರಮುಖ ಕಾದಂಬರಿಕಾರರು ಭಾಷೆಗೆ ಹೊಸ ಹೊಸ ಅನುಭವಗಳನ್ನು ಹೇಳುವಂಥ ಸಾಮರ್ಥ್ಯವನ್ನು ತಂದುಕೊಟ್ಟರು. ಕಾದಂಬರಿಕಾರರ ಅನುಭವ ಪ್ರಪಂಚಕ್ಕೂ ಅವರ ವಿಚಾರಗಳಿಗೂ ಸಂವೇದನೆಗೂ ಅವಿನಾಭಾವ ಸಂಬಂಧವಿದೆ. ಈ ಸಂವೇದನೆ ಭಾಷೆಯನ್ನು ವಿಶಿಷ್ಟವಾದ ರೀತಿಯಲ್ಲಿ ಬಳಸಿಕೊಳ್ಳುವುದಕ್ಕೆ ಪ್ರಚೋದಿಸುತ್ತದೆ ಎನ್ನಬಹುದು.

ಪ್ರತಿಯೊಬ್ಬ ಲೇಖಕನಿಗೂ ಅವನು ಯಾವುದೇ ಸಂಪ್ರದಾಯಕ್ಕೆ ಸೇರಿದ್ದರೂ ಅವನದೇ ಆದ ಭಾಷೆ ಇರುತ್ತದೆಂಬುದು ನಿಜ. ಭಾಷೆ ಎಷ್ಟು ಮುಖ್ಯವಾಹಕ ಎಂಬುದಕ್ಕೆ ನವೋದಯ, ಪ್ರಗತಿಶೀಲ ಕೃತಿಗಳಿಗೂ ನವ್ಯ ಕೃತಿಗಳಿಗೂ ತುಲನೆ ಮಾಡಿದರೆ ಗೊತ್ತಾಗುತ್ತದೆ. ಭಾಷೆ ಮನುಷ್ಯನ ಮನಸ್ಸಿನ ಆಲೋಚನೆಗಳನ್ನೂ ಎದುರಿನವರಿಗೆ ಪರಿಣಾಮಕಾರಿಯಾಗಿ ಮುಟ್ಟಿಸುವ ಸಾಧನ. ನವ್ಯ ಕಾದಂಬರಿಕಾರರಲ್ಲಿ ಒಬ್ಬರಾದ ಕುಸುಮಾಕರ ದೇವರಗೆಣ್ಣೂರರು ಈ ಕಾದಂಬರಿಯಲ್ಲಿ ಬಳಸಿದ ಭಾಷೆ ಅಷ್ಟು ಕ್ಲಿಷ್ಟವಲ್ಲದ ಎಲ್ಲರಿಗೂ ತಿಳಿಯುವ ಹಾಗೆ ಭಾಷೆಯನ್ನು ಬಳಸಿದ್ದಾರೆ. ಸಾಮಾನ್ಯ ಓದುಗನಿಗೂ ಅದು ಅರ್ಥವಾಗುತ್ತದೆ. ಭಾಷೆಯ ಮೂಲಕವೇ ರೂಪುಗೊಳ್ಳುವಂಥದ್ದು ಶೈಲಿ. ``ಒಂದು ಕೃತಿಯಲ್ಲಿ ಬರುವ ಪಾತ್ರಗಳು ಬೇರೆ ಬೇರೆ ಶೈಲಿಯಲ್ಲಿ ಸಂಭಾಷಿಸುವುದಕ್ಕೆ ಆಯಾ ಪಾತ್ರಗಳ ಸಾಮಾಜಿಕ ಹಿನ್ನಲೆಯೆ ಕಾರಣ. ಉತ್ತಮ ಮಧ್ಯಮ ಮತ್ತು ಅಧಮ ಶೈಲಿಗಳೆಂಬ ಪ್ರಬೇಧಗಳಿಗೆ ಹೀಗೆ ಪಾತ್ರಗಳು ಸಮಾಜದಲ್ಲಿ ಪಡೆದಿರುವ ಸ್ಥಾನಮಾನಗಳೆ ಕಾರಣ`` (ಶೈಲಿಶಾಸ್ತ್ರ ಕೆ.ವಿ.ನಾರಾಯಣ). ಶಬ್ದ ಭಂಡಾರ ಅವನ ಚಿಂತನೆ ಶಬ್ದಗಳಿಂದ ಒಡಮೂಡುವ ವಿನೂತನ ಮಾರ್ಗ ಇವೆಲ್ಲ ಶೈಲಿಯಲ್ಲಿ ಕಾಣುತ್ತದೆ. ಭಾಷೆಯಿಂದ ಶೈಲಿಯನ್ನು ಪ್ರತ್ಯೇಕ ಎಂದು ಭಾವಿಸುವುದು ಅಸಂಗತವೆನಿಸುತ್ತದೆ. ಶೈಲಿ ಎಂದರೇನು ಎಂಬ ಪ್ರಶ್ನೆಗೆ ಕೆ.ವಿ.ತಿರುಮಲೇಶ ಅವರು ನಾಲ್ಕು ಬಗೆಯ ಅರ್ಥ ಗ್ರಹಿಕೆಗಳಿವೆ ಎನ್ನುತ್ತಾರೆ. ``ಒಂದು ಶೈಲಿಯೆಂದರೆ ಉತ್ತಮವಾದ ಬರವಣಿಗೆ. ಎರಡು ಶೈಲಿ ಎಂದರೆ ಸಾಹಿತ್ಯ ಭಾಷೆಗೆ ಹೊಂದಿಸಿದ ಅಲಂಕಾರ. ಮೂರು ಶೈಲಿಯೆಂದರೆ ಒಂದು ಸಾಹಿತ್ಯ ಸಂಪ್ರದಾಯದಲ್ಲಿ ಅಥವಾ ಲೇಖಕನಲ್ಲಿ ಗುರುತಿಸಬಹುದಾದ ಪ್ರತ್ಯೇಕತೆ. ನಾಲ್ಕು ಶೈಲಿಯೆಂದರೆ

ವಸ್ತು ವಿಷಯ ಸಂದರ್ಭಗಳಿಗೆ ಸಮಂಜಸವಾಗುವಂತೆ ಭಾಷೆಯನ್ನು ಬಳಸುವ ರೀತಿ'' ಈ ಮಾತುಗಳನ್ನು ಗಮನಿಸಿದರೆ ಶೈಲಿ ಎನ್ನುವುದು ಅಮೂರ್ತವಾದುದು. ಈ ಕಾದಂಬರಿಯಲ್ಲಿ ಕುಸುಮಾಕರರು ಬಳಸಿದ ಭಾಷೆ ಗಂಭೀರತೆಯನ್ನು ತಂದುಕೊಡುತ್ತದೆ. ಭಾಷೆಯ ಮೂಲಕ ಇವರು ಸಂಭಾಷಣೆಯನ್ನು ಹೆಣೆಯುವ ರೀತಿ ಮತ್ತು ಅದಕ್ಕೆ ಒಪ್ಪುವಂತೆ ಬಳಸಿಕೊಂಡ ಸನ್ನಿವೇಶಗಳನ್ನು ಸೃಷ್ಟಿಸುವ ಕುಶಲತೆ ಓದುಗರನ್ನು ಮೆಚ್ಚಿಸುತ್ತದೆ. ಇಲ್ಲಿ ಚಿಕ್ಕ ಸಂಭಾಷಣೆಗಿಂತ ದೀರ್ಘ ಸಂಭಾಷಣೆಯ ಹೆಚ್ಚು ಪ್ರಭಾವವನ್ನು ಬೀರುತ್ತದೆ. ಕಥಾನಾಯಕ ಹಾಗೂ ಸ್ನೇಹಿತನ ಮಧ್ಯೆ ನಡೆಯುವ ಸಂಭಾಷಣೆಯನ್ನು ನೋಡಬಹುದು.

> "ಸ್ನೇಹಿತನ ಜತೆ ಒಂದು ದಿವಸ ಮಾತನಾಡುವಾಗ ಅವನು ನಿಮ್ಮ ಇರುವಿಕೆಯನ್ನು ಕುರಿತು ನಿಮಗೆ ಎಂದೂ ವ್ಯಥೆಯಾಗುವುದಿಲ್ಲವೆ?" ಎಂದು ಕೇಳಿದ. "ನನಗೆ ನಿಮ್ಮ ಮಾತಿನ ಅರ್ಥವಾಗಲಿಲ್ಲ." "ಮೈಮೇಲೆ ನಮಗಿಬ್ಬರಿಗೂ ಒಳ್ಳೆಯ ಬಟ್ಟೆಗಳಿಲ್ಲ. ಅದಕ್ಕಾಗಿ ನಿಮಗೆಂದು ಕೆಡಕು ಎನ್ನಿಸುವುದಿಲ್ಲವೇ?" "ನನಗೆ ಎಂದೂ ಎನ್ನಿಸಿಲ್ಲ. ಇಷ್ಟೂ ಬಟ್ಟೆಯಿಲ್ಲದೆ ನಡುಗುವ ಜನ ನಮ್ಮ ದೇಶದಲ್ಲಿ ಕೋಟಿಗಟ್ಟಲೆ ಉಂಟು?" "ನಮ್ಮ ಅವಶ್ಯಕತೆಗಳನ್ನೆಲ್ಲ ಪೂರೈಸುವುದು ತಂದೆ ತಾಯಿಗಳ ಕರ್ತವ್ಯವಲ್ಲವೆ?" "ಯೋಗ್ಯತೆಗೆ ತಕ್ಕಂತೆ ಪೂರೈಸುವುದು?" "ನೀವು ತಪ್ಪು ತಿಳಿದುಕೊಳ್ಳದಿದ್ದರೆ ಹೇಳುತ್ತೇನೆ. ಆದರೆ ಅದೊಂದು ಚಟವಾಗಿ ಅಲ್ಲ." "ನೀವು ಸಿನಿಮಾಕ್ಕೆ ಹೋಗುವುದಿಲ್ಲವೆ?" "ಹೋಗುತ್ತೇನೆ. ಆದರೆ, ಅದೊಂದು ಚಟವಾಗಿ ಅಲ್ಲ. "ನೀವು ತಪ್ಪು ತಿಳಿದುಕೊಳ್ಳದಿದ್ದರೆ ಹೇಳುತ್ತೇನೆ. ನನಗೆ ನನ್ನಲ್ಲಿ ಏನೂ ಇಲ್ಲದುದನ್ನು ಕಂಡು ವ್ಯಥೆಯಾಗುತ್ತದೆ. ಅಷ್ಟೇ ಅಲ್ಲ ಇದ್ದವರನ್ನು ಕಂಡು ತುಂಬಾ ವ್ಯಥೆಯಾಗುತ್ತದೆ. ಆ ಮತ್ಸರ ನನ್ನನ್ನು ಸುಟ್ಟು ಸುಟ್ಟು ಹಾಕುತ್ತದೆ. ನಿಮಗೆ ಹೀಗೆಂದೂ ಎನಿಸಿಲ್ಲವೆ?" "ಇಲ್ಲವೆಂದರೆ ನಾನು ಅಪ್ರಾಮಾಣಿಕನಾದೇನು. ಆದರೆ ನನ್ನ ಮನಸ್ಸು ಒಂದಿಲ್ಲ ಒಂದು ರೀತಿಯಿಂದ ತೊಡಗಿರುತ್ತದೆ. ಅಭ್ಯಾಸ, ವಾಚನ, ಅಂಗಸಾಧನ ಹೀಗೆ ಒಂದಿಲ್ಲೊಂದು ಯೋಚನೆ ಇರುತ್ತದೆ. "ನಿಮಗೆ ನಿಮ್ಮ ಬದುಕು ವ್ಯರ್ಥ ಎನ್ನಿಸಿಲ್ಲವೆ?" "ಹಾಗೇಕೆ ಎನ್ನಿಸಬೇಕು?" "ಕ್ರೀಡಾಂಗಣದಲ್ಲಿ ನೀವು ಮಿಂಚಿಲ್ಲ. ನಾಟಕಗಳಲ್ಲಿ ಮೆರೆದಿಲ್ಲ" "ಲೋಕ ಬಹಳ ವಿಶಾಲವಾಗಿದೆ. ವ್ಯಕ್ತಿಗೆ ಶಕ್ತಿಗೆ ಪರಿಮಿತಿಯಿದೆ. ಹಲವನ್ನೂ ಹಂಬಲಿಸುವುದು ಅನಾರೋಗ್ಯದ ಲಕ್ಷಣವಲ್ಲವೇ?" "ನನಗೆ ಮಾತ್ರ ತುಂಬಾ ದುಃಖವಾಗುತ್ತದೆ" "ಆಗಬಾರದು ಮುಂದಿನ ಕರ್ತವ್ಯವನ್ನು ನಿಷ್ಠೆಯಿಂದ ಮಾಡುವುದಷ್ಟೇ ನನಗೆ ತಿಳಿದಿದೆ" (ನಾಲ್ಕನೆಯ ಆಯಾಮ, ಪುಟ ೬೧-೬೨)

ಮೇಲಿನ ಸಂಭಾಷಣೆಯ ರೀತಿ ಓದುಗರ ಹೃದಯವನ್ನು ತಟ್ಟುತ್ತದೆ. ವಿಷಯದಲ್ಲಿ ಬಳಸಿರುವ ರೀತಿ ಮಾತುಗಳು ಪ್ರಬುದ್ಧತನದಿಂದ ಕೂಡಿದ ಜೀವನದ ದೃಷ್ಟಿಕೋನ ಆ ಸಂಭಾಷಣೆಯಲ್ಲಿ ಸಮ್ಮಿಳಿತವಾದ ಹಲವು ಉಪಯುಕ್ತ ವಿಷಯ. ಸಂಭಾಷಣೆಯು ಬಂದಾಗ ಅವರ ಹರಿವಿಗೆ ಹೊಸ ಆಯಾಮ ಪ್ರಾಪ್ತವಾಗಿ ಅದು ಇನ್ನಷ್ಟು ಸ್ವಾರಸ್ಯಕರ ಎನಿಸುತ್ತದೆ. ಅದೇ ರೀತಿ ಇಲ್ಲಿ ನಾಯಕನು ಕೇಳುವ ಜೀವನ ಬಗೆಗಿನ ಪ್ರಶ್ನೆಗಳು ಸಾಮಾನ್ಯವಾಗಿದ್ದರು ಅದಕ್ಕೆ ಪ್ರತಿಕ್ರಿಯಿಸುತ್ತಿರುವ ಗೆಳೆಯನ ಬುದ್ಧಿ ಮಟ್ಟವನ್ನು ಉನ್ನತಕ್ಕೆ ಪರಿಸಿರುವುದು ಕಂಡುಬರುತ್ತದೆ.

ಕುಸುಮಾಕರರು ಸಂಭಾಷಣೆಯ ಸಂದರ್ಭದಲ್ಲಿ ಯಾವುದೇ ರೀತಿಯ ಪಾಂಡಿತ್ಯದ ಭಾಷೆಯನ್ನು ಬಳಸುವುದಿಲ್ಲ. ಬದಲಾಗಿ ನಿತ್ಯ ಜೀವನದಲ್ಲಿ ಬಳಸುವ ಸರಳ ಪ್ರಿಯವಾದ ಭಾಷೆಯಲ್ಲಿಯೇ ತಮ್ಮ ಭಾವನೆಗಳನ್ನು ವಿಚಾರಗಳನ್ನು ಅಭಿವ್ಯಕ್ತಗೊಳಿಸುತ್ತಾ ಪಾತ್ರಗಳಿಗೆ ಜೀವ ತುಂಬುವ ರೀತಿ ಅನನ್ಯವಾದುದು. ಎರಡು ಪಾತ್ರಗಳ ಮೂಲಕ ನಡೆಸುವ ನೇರ ಸಂಭಾಷಣೆಗಿಂತ ನಾಯಕನ ಮನಸ್ಸಿನಲ್ಲಿ ನಡೆಯುವ ವಿಚಾರಗಳ ತಾಕಲಾಟಗಳ ರೀತಿ ಹೆಚ್ಚು ಚೆನ್ನಾಗಿ ಮೂಡಿಬಂದಿದೆ. ನಾಯಕನು ತನ್ನ ಚಿಕ್ಕ ವಯಸ್ಸಿನಲ್ಲಿ ನಡೆದ ಒಂದು ಘಟನೆ ತನ್ನ ಕಡೆಗೆ ತಪ್ಪು ಇರದೆ ಇದ್ದರೂ ಕೂಡಾ ತಂದೆ ತಾಯಿಗಳ ಮುಖಾಂತರ ಮಾಡದೆ ಇರುವುದನ್ನು ಒಪ್ಪಿಕೊಳ್ಳುವ ಒಂದು ಮನೋಭೂಮಿಕೆ ನಿರ್ಮಾಣವಾದಾಗ ಆಗ ಅವನ ಮನಸ್ಸಿನಲ್ಲಿ ಆದ ಕೆಲವೊಂದು ವಿಚಾರಗಳ ಸಂಘರ್ಷ.

> "ಸಿಂಹದಾ ಉದರದಲ್ಲಿ ಜಂಬುಕವು ಜನಿಸುವುದೆ? ಒಂಬತ್ತನೆಯ ವರ್ಗದ ಕನ್ನಡ ಪಠ್ಯದಲ್ಲಿ ತಾನೇ ಓದಿದ ಮಾತು. ಭೂಮಿತಿಯಲ್ಲಿನ ಪ್ರಮೇಯದ ಸಾಮಾನ್ಯ ಪ್ರತಿಜ್ಞೆಯಂತೆ ಮೆದುಳಿನಲ್ಲಿ ಮೂಡಿತು. ಜಂಬುಕದ ಉದರದಲ್ಲಿ ಜನಿಸುವದೇನು?" "ತಾನು ನರಿ, ನರಿ ಆಗಲಾರೆ. ಆಗುವದಿಲ್ಲ ಎಂದರೇನು? ನಿನ್ನ ತಂದೆ ತಾಯಿ ನರಿಗಳು. ನೀನೆ ಹೇಳಿದೆಯಲ್ಲ-ಸಿಂಹದ ಉದರದಲ್ಲಿ ಸಿಂಹ ನರಿಯ ಉದರದಲ್ಲಿ ನರಿ." "ಇರಬಹುದು. ನಾನು ನರಿ ಅಲ್ಲ" "ಅಲ್ಲವಾಗಿದ್ದರೆ ನೀನು ನರಿಯಂತೆ ಶರಣು ಏಕಾದೆ ಆ ಸಿಂಹಕ್ಕೆ? ನೀನು ಕಂಡ ಪಡೆದ ಬೆನಕವನ್ನು ಕಸಿದುಕೊಂಡನಲ್ಲ. ನೀನೇಕೆ ಅವನನ್ನು ನೆಲಕ್ಕೆ ಮೆಟ್ಟಲಿಲ್ಲ?" "ನಾನು ಹಾಗೆ ಮಾಡಲಿಲ್ಲ ನಿಜ. ಆದರೆ ನರಿಯಲ್ಲ. ನರಿಗಳ ಗುಂಪಿನಲ್ಲಿ ಬೆಳೆದ ಸಿಂಹ. ಒಂದು ಸಿಂಹದ ಮರಿಯಿತ್ತಂತೆ. ಅದು ಕುರಿಗಳ ಹಿಂಡಿನಲ್ಲಿ ಬೆಳೆದು ಕುರಿಯೇ ಆಗಿತ್ತಂತೆ." "ಗೊತ್ತು ಈ ಕತೆ ಆದರೆ ನೀನು ಸಿಂಹ ಎಂಬುದು ಎಂದು ತಿಳಿಯಿತು? ತಿಳಿದೊಡನೆ ಸಿಂಹವಾದೆಯೋ?" "ಇದಕ್ಕೆ ಏನುತ್ತರ ಕೊಡಬೇಕು?" "ಈ ಸಣ್ಣ ಸಂಗತಿಯಾಗಿ ಹತ್ತು ವರ್ಷಗಳುರುಳಿವೆಯಲ್ಲ. ಒಮ್ಮೆಯಾದರೂ ನೀನು ಸಿಂಹದ ಹಾಗೆ ವರ್ತಿಸಿರುವೆಯಾ?" "ಸುಮ್ಮನೆ ಸಿಂಹ ಸಿಂಹ ಎಂದುಕೊಂಡರಾಯ್ತೆ? ಒಂದಾದರೂ ಸನ್ನಿವೇಶದಲ್ಲಿ ನೀನು ಸಿಂಹದಂತೆ ವರ್ತಿಸಿದ್ದು?" "ನಾನು ದುರ್ಬಲನಲ್ಲ ಎಂದು ಈ ಮೊದಲೇ ಹೇಳಿದನಲ್ಲ. ನನ್ನ ಕಡೆ ತಪ್ಪಿಲ್ಲ ತಂದೆ ತಾಯಿಗಳ ಕಡೆ..." "ತಂದೆ ತಾಯಿಗಳ ಕಡೆಗೇನು? ಅವರು ನರಿ. ಆದ್ದರಿಂದ ನೀನು ನರಿ" (ನಾಲ್ಕನೆಯ ಆಯಾಮ, ಪುಟ ೧೧)

ಈ ಸಂಭಾಷಣೆಯಲ್ಲಿ ಅವನ ಮಸ್ಸಿನ ವ್ಯಾಪಾರವನ್ನು ಸಮರ್ಥವಾಗಿ ಕಟ್ಟಿಕೊಡುವುದರೊಂದಿಗೆ ಅದಕ್ಕೆ ಅನುಗುಣವಾಗಿ ಬಳಸಿರುವ ಹೋಲಿಕೆ ಪದಗಳು ಇನ್ನೂ ಹೆಚ್ಚು ನಿಖರವಾಗಿ ಅವನ ಮನಸ್ಸಿನಲ್ಲಿ ನಡೆದ ತುಮುಲಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ತಾನು ಸದೃಢನಾಗಬೇಕು ಎಂಬ ಹಂಬಲ ಇದ್ದರು ಕೂಡಾ ಅದಕ್ಕೆ ತಕ್ಕ ಹಾಗೆ ಪರಿಸ್ಥಿತಿ ಒದಗದೆ ಇರುವುದು ಹಾಗೂ ತಂದೆ ತಾಯಿಗಳ ಹಿಂಜರಿಕೆಯ ಮನೋಭಾವನೆ. ಎರಡನ್ನು ಸಮರ್ಥವಾಗಿ 'ಸಿಂಹ ನರಿ' ಈ ಹೋಲಿಕೆ ಪ್ರತಿಬಿಂಬಿಸುತ್ತದೆ. ಇಲ್ಲಿ ಲೇಖಕರು ನೇರ ಪಾತ್ರಗಳ ಮೂಲಕ ಆಗಿರಬಹುದು ಅಥವಾ ಮನಸ್ಸಿನಲ್ಲಿಯ ತುಮುಲಗಳ

ಆಗಿರಬಹುದು ತೀರ ಗ್ರಾಂಥಿಕವಾದ ಭಾಷೆಯನ್ನು ಬಳಸಿರುವುದು ಸೋಜಿಗವಾಗಿದೆ. ಅದರಲ್ಲೂ ಸಂಭಾಷಣೆಗಳಿಗೆ ಆಡುಮಾತನ್ನು ಬಳಸುವುದು ಸಾಮಾನ್ಯವಾಗಿರುವ ಈ ದಿನಗಳಲ್ಲಿಯೂ ಇಲ್ಲಿ ಗ್ರಾಂಥಿಕ ಭಾಷೆಯನ್ನೇ ಬಳಸಲಾಗಿದೆ. ಆದರೆ ಈ ಶೈಲಿ ಯಾವುದೇ ರೀತಿಯ ಔಚಿತ್ಯಕ್ಕೆ ಧಾರಿಮಾಡಿಕೊಡದೇ ಸರಳಾಗಿಯೇ ಓದಿಸಿಕೊಂಡು ಹೋಗುತ್ತದೆ. ಬರವಣಿಗೆಯ ಮೂಲಕ ಅವರು ಪಾತ್ರಗಳಿಗೆ ಜೀವ ತುಂಬುವ ರೀತಿ ಅನನ್ಯವಾದದ್ದು. ಕಥೆಗೆ ಪೂರಕ ಅಂಶಗಳನ್ನು ಸೇರಿಸುತ್ತಾ ಸಾಗುವ ರೀತಿ ವಿಶಿಷ್ಟವಾಗಿದೆ. ಸಿದ್ಧವಾಗಿರುವ ಭಾಷೆಯನ್ನು ಸತ್ವಪೂರ್ಣವಾಗಿ ತಮ್ಮ ಅಗತ್ಯಕ್ಕೆ ತಕ್ಕಂತೆ ಬಳಸಿಕೊಂಡಿದ್ದಾರೆ.

ಕುಸುಮಾಕರರ ಈ ಕಾದಂಬರಿಯ ಬಹುಪಾಲು ಅರ್ಥ ಅಡಗಿರುವುದು ಕನಸುಗಳಲ್ಲಿಯೇ ಈ ಕನಸುಗಳು ಕಥಾನಾಯಕ ಮನಸ್ಸಿನ ಬಯಕೆಗಳು ಈಡೇರದ ಅತೃಪ್ತಿಯ ವೃತ್ತವಾಗಿಯೂ ಸುರಕ್ಷಿತವಾಗಿ ಅಡಗುವ ಸ್ಥಳವಾಗಿ ಗೋಚರವಾಗುತ್ತದೆ. ಇಲ್ಲಿಯ ನಾಯಕನಿಗೆ ಬದುಕು ಸುಂದರವು ಹೌದು. ಸಂಕೀರ್ಣವು ಹೌದು ಎಂಬ ತಿಳುವಳಿಕೆ ಇದೆ. ಇಂಥ ಬದುಕಿನೊಳಗೆ ಸಾಫಲ್ಯದ ಹುಡುಕಾಟಕ್ಕಾಗಿ ಹೆಣಗಾಡುತ್ತಾನೆ. ಬದುಕಿನಲ್ಲಿ ಸಂಭವಿಸುವ ಎಲ್ಲಾ ತಿರುವುಗಳಲ್ಲಿ ಕಾಲಿಡುತ್ತಾ ಬೀಳುತ್ತಾ ಏಳುತ್ತಾ ಗೊಂದಲಗೊಳ್ಳುತ್ತ ಸಾಗುತ್ತಾನೆ. ಕಥಾನಾಯಕನಿಗೆ ಜೀವನದ ಬಗೆಯ ತೊಳಲಾಟ ಸಕಾರಣವಾಗಿ ಇನ್ನೊಮ್ಮೆ ಅಗತ್ಯವಾಗಿ ಸಂಭವಿಸಿರುವುದು ಗೋಚರವಾಗುತ್ತದೆ. ಕೆಲವೊಮ್ಮೆ ಮಾಡಬೇಕೆಂಬ ಹುಮ್ಮಸ್ಸು ಇದ್ದರೂ ಕೂಡಾ ಮಾಡಲಾರದೆ ಕತಾಶೆಗೆ ಒಳಗಾಗುವುದು. ನಾಯಕನಿಗೆ ಆಗುವ ತೊಳಲಾಟಗಳನ್ನೆಲ್ಲಾ ಕನಸಿನ ಮೂಲಕ ವ್ಯಕ್ತಪಡಿಸಿದ ಆ ಲೇಖಕರ ರೀತಿ, ಕನಸನ್ನು ಹೆಣೆಯುವ ಶೈಲಿ ಕಾದಂಬರಿಯ ಸೊಬಗನ್ನು ಹೆಚ್ಚಿಸುವುದರೊಂದಿಗೆ ಈ ಕಥೆಗೆ ಸಂವೇದನಾಶೀಲತೆಯು ಪ್ರಾಪ್ತಾಗಿದೆ.

> ತಂದೆಯು ಮಗನಿಗೆ ಜೀವನದಲ್ಲಿ ಯಾವಾಗಲೂ ಮುಂದೆ ಹೋಗಬೇಕು ಎನ್ನುವ ಮಾತು ಪದೇ ಪದೇ ಹೇಳುವಾಗ ಆಗ ಅವನಿಗೆ ಬೀಳುವ ಕನಸು "ಅಪಾರವಾದ ಜಲರಾಸಿ. ತಾನು ಮಧ್ಯದಲ್ಲಿದ್ದಾನೆ. ಯಾವ ಆಸರೆಯೂ ಇಲ್ಲ. ಕಡಲಿನಂತಹ ಆ ಜಲರಾಸಿಯಲ್ಲಿ ಇನ್ನೊಂದು ಪಿಳ್ಳೆ ಕೂಡ ಕಣ್ಣಿಗೆ ಕಾಣುವಂತಿಲ್ಲ. ತಾನೊಬ್ಬನೆ ಈಸುತ್ತಿದ್ದಾನೆ. ರಭಸದಿಂದ ಈಸುತ್ತಿದ್ದಾನೆ. ಭೋರ್ಗರೆಯುವ ಪ್ರವಾಹದ ಗರ್ಜನೆ, ಬಿರುಗಾಳಿಯ ಹೊಡೆತ ಇವುಗಳನ್ನು ಮೀರಿಸಿ ಅವನು ಈಸುವ ಸುದ್ದಿ ಕೇಳಿಬರುತ್ತಿದೆ. ಒಂದೆರಡು ಸಲ ಗಾಬರಿಯಾಗಿ ಎಚ್ಚೆತ್ತು ಇದು ನಿತ್ಯದ ಅನುಭವವಾಯಿತು. ಆದರೆ ಅವನಿಗೆ ಸ್ವಲ್ಪ ದಿನಗಳಲ್ಲಿಯೇ ಕನಸು ಒಳ್ಳೆಯದು ಎಂಬ ಅರಿವು ಬಂತು. ಈಸುವುದು ತನ್ನ ಪ್ರಯತ್ನವನ್ನು ನೀರು ಬದುಕಿನ ಭೀಕರತೆಯನ್ನು ತೋರಿಸುತ್ತದೆ ಎಂಬ ಕಲ್ಪನೆ ಅವನಿಗೆ ಬಂತು" (ಪುಟ ೧೫)

ಇದರಲ್ಲಿ ಲೇಖಕರು ಹೋಲಿಕೆ ನೀಡಿರುವ ರೀತಿ,

ನೀರು - ಬದುಕಿನ ಭೀಕರತೆಯ ಸೂಚನೆ.

ಈಸು - ಪ್ರಯತ್ನಕ್ಕೆ ಹೋಲಿಕೆ ನೀಡಿದ್ದಾರೆ.

ಈ ಇಡಿ ಕಾದಂಬರಿಯಲ್ಲಿ ಲೇಖಕರು ಈ ಒಂದು ಕನಸನ್ನು ಮಾತ್ರ ನಾಯಕನು ತೊಂದರೆಗಳನ್ನು

ಎದುರಿಸಿ ಮುಂದೆ ಸಾಗುವ ಹುಮ್ಮಸದ ಕನಸಾಗಿ ಚಿತ್ರಣ ನೀಡಿದ್ದರೆ, ಮುಂದೆ ಬೀಳುವ ನಾಯಕನ ಕನಸುಗಳು ವೇದನೆಯನ್ನುಂಟುಮಾಡುವಂತೆ ಮೂಡಿ ಬಂದಿವೆ. ಇಲ್ಲಿ ಕುಸುಮಾಕರರು ಕಥಾನಾಯಕನನ್ನು ಸಂಪೂರ್ಣವಾಗಿ ದುರ್ಬಲ ವ್ಯಕ್ತಿಯಾಗಿ ಚಿತ್ರಿಸದಿರುವುದು ಕಾಣಸಿಗುತ್ತದೆ. ನವ್ಯ ಕಾದಂಬರಿಕಾರರ ಒಂದು ನಿಲುವಾದ ಕಥಾನಾಯಕ ದುರ್ಬಲ ಮನಸ್ಸಿನವನ್ನಾಗಿರುವುದು ಇಲ್ಲಿಯ ಅದೇ ರೀತಿ ವ್ಯಕ್ತವಾಗಿದ್ದರೂ ಕೂಡಾ ಇಲ್ಲಿಯ ನಾಯಕನಿಗೆ ಏನಾದರೂ ಮಾಡುವ ಉತ್ಸಾಹ ಬಯಕೆ ಇದ್ದರು ಅಂಜುಬುರುಕ, ಚಂಚಲ ಸ್ವಭಾವ, ಕೆಲವೊಂದು ತಾವೇ ಸೃಷ್ಟಿಸಿಕೊಂಡ ಕೀಳರಿಮೆ ನಿಲುವಿನ ಬಗ್ಗೆ ದೃಢ ಮನಸ್ಸು ತಾಳುವಷ್ಟು ಸ್ಥಿರ ಮನಸ್ಕರಲ್ಲ. ಇಲ್ಲಿಯ ನಾಯಕನಿಗೆ ಯೋಚನೆ ಮಾಡುವ ಶಕ್ತಿ ಇದೆ. ಆದರೆ ಇಡುವ ಹೆಜ್ಜೆಯಲ್ಲಿ ಇನ್ನೊಬ್ಬರ ಸಲಹೆ ಅವರ ಅನುಕರಣೆ ಮಾಡುವುದು ಅನುಕಂಪಕ್ಕೆ ಒಳಗಾಗುವುದು. ಒಂದು ನೋವಿನಿಂದ ತಪ್ಪಿಸಿಕೊಂಡು ಇನ್ನೊಂದು ನೋವಿಗೆ ಜೋತು ಬೀಳುವುದು. ತೀರಾ ಆತ್ಮೀಯನಾದ ಗೆಳೆಯನ ಬಗೆಗೆ ಕನಸನ್ನು ಕಾಣುವುದು.

> "ಗೋಡೆಗಳು ಆಕಾರ ತಳೆದವು ಎಲ್ಲಿಂದಲೋ ಏನೋ ತನ್ನ ಸ್ನೇಹಿತ ಬಂದ ಅರೆ ಇಲ್ಲಿರುವೆಯಾ? ನಿನ್ನನ್ನು ಎಷ್ಟೋ ಹುಡುಕಾಡಬೇಕು" "ಏಕೆ? ನೀನೆಲ್ಲಿದ್ದೆ. ಗೋಡೆಗಳೆಲ್ಲ ಬರಿವೆ ಇವೆಯಲ್ಲ. ಒಂದಾದರೂ ಮೊಳೆಯನ್ನು ಹೊಡೆಯಬಾರದೆ" "ಮೊಳೆ ಇಲ್ಲವಲ್ಲ" "ತೆಗೆದುಕೊ"
>
> "ಅವನ ಸ್ನೇಹಿತನ ಕೈಯಿಂದ ಮೊಳೆ ತೆಗೆದುಕೊಂಡು ಗೋಡೆಯಲ್ಲಿ ಹೊಡೆದ ಅದು ಸರಿಯಾಗಿ ಕೂಡಲಿಲ್ಲ. ಗೋಡೆಯ ತುಂಬ ಮೊಳೆಗಳನ್ನು ಹೊಡೆಯುವ ಪ್ರಯತ್ನ ಮಾಡಿದ. ಒಂದೂ ಮೊಳೆ ಗಟ್ಟಿಯಾಗಿ ನಿಲ್ಲಲಿಲ್ಲ. ಒಂದು ಮೂಲೆಯಲ್ಲಿ ಅವನು ಒಗೆದ ಮೊಳೆಗಳ ರಾಸಿ ಜಂತಿಯವರೆಗೆ ಏರಿತು. ಸ್ನೇಹಿತ ಕೈಯಲ್ಲಿದ್ದಾಗ ಅದು ಮೊಳೆಯಾಗಿರುತ್ತಿತ್ತು. ಅವನ ಕೈಗೆ ಬಂದಕೂಡಲೆ ಮೊಳೆ ಮೇಣದಬತ್ತಿಯಾಗಿರುತ್ತಿತ್ತು"
>
> (ನಾಲ್ಕನೆಯ ಆಯಾಮ, ಪುಟ ೩೨)

ಇಲ್ಲಿ ಲೇಖಕರು ಬಳಸಿದ ಮೇಣದ ಬತ್ತಿ, ಮೊಳೆಗಳು ಸಂಕೇತಗಳಾಗಿ ಬಂದಿವೆ.

ಮೇಣದಬತ್ತಿ - ನಾಯಕನ ಮನಸ್ಸಿನ ದುರ್ಬಲತೆ ಸೂಕ್ಷ್ಮತೆಯನ್ನು ಸೂಚಿಸುತ್ತಿರುವುದು

ಮೊಳೆ - ಅವನ ಗೆಳೆಯನ ಸದೃಢತೆಯ ಸೂಚನೆಯಾಗಿರಬಹುದು.

ಹೀಗೆ ಲೇಖಕರು ನಾಯಕನಿಗೆ ಬೀಳುವ ಕನಸನ್ನು ಹೇಳುವಾಗ ಸಂದರ್ಭಕ್ಕೆ ತಕ್ಕಂತೆ ಸಮುದ್ರ, ಕಾಗೆಗಳು, ಸವತಿಬಳ್ಳಿ, ಬುರುಗಮರ, ಗಿಳಿಮರಿಗಳು, ಮೊಳೆ, ಹಂಸ, ವಿಮಾನ, ಕಬ್ಬಿಣ ಪೆಟ್ಟಿಗೆ ಬಳಸುವ ಈ ಸಂಕೇತಗಳು ನಾಯಕನ ಮನಸ್ಥಿತಿಯನ್ನು ಇನ್ನೂ ಹೆಚ್ಚು ಅರ್ಥಪೂರ್ಣವಾಗಿ ತಿಳಿದುಕೊಳ್ಳಲು ಸಾಧ್ಯವಾಗುವಂತೆ ಮಾಡಿದ್ದಾರೆ. ಹೀಗೆ ಕಾದಂಬರಿಯಲ್ಲಿ ಕಥೆಗೆ ವಿಶೇಷ ಚಾಲನೆಯನ್ನು ಒದಗಿಸಿವೆ. ಕಥೆಗೆ ಪೂರಕವಾಗಿ ಗಾದೆಮಾತುಗಳನ್ನು ಬಳಸಿದ್ದರೆ ಇನ್ನೂ ಹೆಚ್ಚು ಸುಂದರವಾಗಿ ಹೇಳುವ ಅವಕಾಶವಿರುತ್ತಿತ್ತು.

ಆದರೂ ಕೂಡಾ ಕುಸುಮಾಕರರು ತಮ್ಮದೇ ಆದ ವಿಶಿಷ್ಟ ಶೈಲಿಯಿಂದ ಪ್ರಸ್ತಾಪಿಸಿದ್ದಾರೆ. ಅಂತೆಯೆ ಲೇಖಕರಿಗೆ ಶೈಲಿಗೆ ಅವರದೆ ಸ್ವಂತಿಕೆ ಇದೆ. ವಿಶಿಷ್ಟತೆ ಇದೆ. ಯಾವ ಕನಸನ್ನು ಎಂಥ ಸಂದರ್ಭದಲ್ಲಿ ತೆಗೆದುಕೊಂಡು ಬಂದರೆ ಹೇಳುವ ವಿಷಯವನ್ನು ಓದುಗರಿಗೆ ಮನವರಿಕೆ ಮಾಡಿಕೊಡಲು ಸಾಧ್ಯ ಎಂಬ ಕಲ್ಪನೆ ಅವರಿಗೆ ಇದೆ. ಓದುಗರನ್ನು ಕುತೂಹಲದಲ್ಲಿ ನಿಲ್ಲಿಸಿ ಮುಂದಿನ ಪುಟಗಳಿಗೆ ಕರೆದುಕೊಂಡು ಹೋಗುತ್ತಾರೆ. ಈ ರೀತಿಯಾಗಿ ಈ ಕಾದಂಬರಿಯ ಮುಕ್ಕಾಲು ಪಾಲು ಕನಸನ್ನು ಬಳಸಿರುವುದು ಒಂದು ಹೊಸ ಪ್ರಯೋಗವೇ ಸರಿ. ಈ ಕನಸುಗಳನ್ನು ಬಳಸುವುದರ ಜೊತೆಗೆ ಇನ್ನೊಂದು ಜೋಡಣೆ ಆಗಿದೆ. ಅದೇ ತಂತ್ರ.

ಕಾಲದ ಸಂಯೋಜನೆ, ನೆನಪುಗಳು ಮತ್ತು ಕನಸುಗಳ ಬಳಕೆ, ಕೃತಿಯ ನಾಯಕನ ಪಾತ್ರಕ್ಕೆ ಬದ್ಧವಾದ ದೃಷ್ಟಿಕೋನ ಇವುಗಳಲ್ಲಿ `ನಾಲ್ಕನೆಯ ಆಯಾಮ` ಪ್ರಜ್ಞಾಪ್ರವಾಹ ಕಾದಂಬರಿಗಳ ತಂತ್ರಗಳನ್ನು ಅಳವಡಿಸಿಕೊಂಡಿದೆ.

ಪ್ರಜ್ಞಾಪ್ರವಾಹ ತಂತ್ರವನ್ನು ಮೊಟ್ಟಮೊದಲಿಗೆ ಬಳಸಿದವರು ವಿಲಿಯಮ್ ಜೇಮ್ಸ್ ಎಂಬ ಮನೋವಿಜ್ಞಾನಿ ಅವನ ಪ್ರಕಾರ ಪ್ರಜ್ಞೆ ವ್ಯಕ್ತಿಯ ಅಂತರಗಕ್ಕೆ ಸಂಬಂಧಿಸಿದ್ದು ವ್ಯಕ್ತಿಗೆ ಒಂದು ಕ್ಷಣದಲ್ಲಿ ಆಗುತ್ತಿರುವ ಮತ್ತು ಅಲ್ಲಿಯವರೆಗೆ ಆದ ಎಲ್ಲ ಅನುಭವಗಳ ಮಿಶ್ರಣವಾಗಿರುತ್ತದೆ. ``ಒಂದು ಕೃತಿಯ ವಸ್ತು ವಿಶ್ಲೇಷಣೆ ಅದರ ತಂತ್ರದ ವಿಶ್ಲೇಷಣೆಯೇ ಆಗಬೇಕಾಗುತ್ತದೆ. ಶೋರರ್ ಇದಕ್ಕೂ ಮುಂದೆ ಹೋಗಿ ವಸ್ತು ಮತ್ತು ತಂತ್ರ ಎರಡೂ ಒಂದೆ ಎಂಬ ಅಭಿಪ್ರಾಯಕ್ಕೆ ಬರುತ್ತಾನೆ`` (ಕಾದಂಬರಿ : ವಸ್ತು ಮತ್ತು ತಂತ್ರ, ಪುಟ ೧೦)

ಒಬ್ಬ ವ್ಯಕ್ತಿಯನ್ನು ಸಂಪೂರ್ಣವಾಗಿ ತಿಳಿದುಕೊಳ್ಳಲು ಹೊರಗಿನ ರೂಪಕ್ಕೆ ಸಂಬಂಧಿಸಿದ ವಾಸ್ತವತೆ ಎಷ್ಟು ಮುಖ್ಯವಾಗುತ್ತದೆಯೋ ಅವನ ಅಂತರಂಗಕ್ಕೆ ಸಂಬಂಧಿಸಿದ ವಾಸ್ತವತೆಯೂ ಅಷ್ಟೇ ಮುಖ್ಯವಾಗಿರುತ್ತದೆ. ``ಪ್ರಜ್ಞಾಪ್ರವಾಹ ಕಾದಂಬರಿ ಸಂಪೂರ್ಣ ಅಂತರ್ಮುಖಿಯಾಗಿದ್ದು, ಅಸ್ಥಿರ ಸಮತೋಲನ ಸ್ಥಿತಿಯಲ್ಲಿರುವ ಪ್ರವಾಹಿ ರೂಪದ ವ್ಯಕ್ತಿತ್ವವನ್ನು ಚಿತ್ರಿಸಲು ಯತ್ನಿಸುತ್ತದೆ. ಮನಸ್ಸಿನ ಪ್ರಕ್ರಿಯೆಗಳ ಮೂಲಕವಾಗಿಯೆ ಪಾತ್ರದ ಸಾಧ್ಯತೆಗಳನ್ನು ಸೂಚಿಸುವ ಪ್ರಯತ್ನವಾಗಿರುತ್ತದೆ. ಹಾಗಾಗಿ ಪ್ರಜ್ಞಾಪ್ರವಾಹ ಕಾದಂಬರಿಯು ಘಟನೆಗಳಿಗಿಂತ ಗ್ರಹಿಕೆಗೆ, ಕ್ರಿಯೆಗಿಂತ ಆಲೋಚನೆಯ ಲಹರಿಗಳಿಗೆ, ಸಂವೇದನೆಗಳಿಗೆ, ಸನ್ನಿವೇಶ ನಿರ್ಮಾಣಕ್ಕಿಂತ ಮನೋಲೋಕದ ಭ್ರಾಮಕ ಕಲ್ಪನೆಗಳು ಮತ್ತು ಹಗಲುಗನಸುಗಳಿಗೆ ಪ್ರಾಮುಖ್ಯತೆ ನೀಡುತ್ತದೆ. (ಸಿ.ಆರ್.ಯರವಿನತೆಲಿಮಠ, ಪುಟ ೧೨೬)

ಪ್ರಜ್ಞಾಪ್ರವಾಹ ತಂತ್ರವನ್ನು ಮನೋಮುದ್ರಾವಾದ ಎಂದು ಕೂಡಾ ಕರೆಯುವುದುಂಟು. ಇದನ್ನು ಒಳಗೊಂಡ ನಾಲ್ಕನೆಯ ಆಯಾಮ ಸಂಪೂರ್ಣ ಅಂತರ್ಮುಖಿಯಾಗಿದ್ದು ಮನಸ್ಸಿನ ವಾತಾವರಣದಲ್ಲಿ, ವರ್ತಮಾನ ಕಾಲದಲ್ಲಿ ಕುಳಿತು ಭೂತಕಾಲದ ನೆನಪುಗಳೂ ಭವಿಷ್ಯತ್ತಿನ ಆಸೆ, ನಿರೀಕ್ಷೆ, ಭಯಗಳು ಒಟ್ಟಿಗೆ ಏಕಕಾಲದಲ್ಲಿ ಬಂದು ನಾಯಕನಿಗೆ ಅಪ್ಪಳಿಸುವುದನ್ನು ಈ ಕಾದಂಬರಿಯಲ್ಲಿ ಕಾಣಸಿಗುತ್ತದೆ.

ನಾಯಕ ವರ್ತನೆಗಳ ಮುಖಾಂತರವಾಗಿ ಕಾದಂಬರಿಯ ಪ್ರಾರಂಭದಲ್ಲೇ ನಾಯಕ ಕಾಲದೇಶಗಳ ಸಂವೇದನೆಯನ್ನು ಮೀರಿ ವರ್ತಮಾನದ ಹೆಡೆಯನ್ನು ತುಳಿದದ್ದು, ಭೂತವನ್ನು ಆಳವಾಗಿ ಅಗಿದದ್ದು ಮತ್ತು ಭವಿಷ್ಯತ್ತಿನಲ್ಲಿ ಗರಿಗೆದರಿದ್ದು ಕಂಡುಬರುತ್ತದೆ.

> "ಇಂದು ಅವನಲ್ಲಿ ಹಿಂದೆಂದೂ ಕಂಡುಬಾರದಂತಹ ವಿಲಕ್ಷಣ ಉತ್ಸಾಹ ಕಾಡುಬೇಗೆಯಂತೆ ಧಗಧಗಿಸುತ್ತಿದೆ. ಈ ಮೊದಲು ಅವನು ಅನೇಕಸಲ ಉತ್ಸಾಹದ ಸತ್ವವನ್ನು ಅನುಭವಿಸಿದ್ದಾನೆ. ಆದರೆ ಇಂದಿನ ಉತ್ಸಾಹದ ಬಗೆ ತೀರ ಹೊಸದು. ಹತ್ತಡಿ ಉದ್ದ ಹತ್ತಡಿ ಅಗಲದ ಕಿರುಕೋಣೆಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಬಿರುಗಾಳಿಯಂತೆ ಹರಿದಾಡಿದ ಮುಚ್ಚಿದ ಕಿಟಕಿಯನ್ನು ತೆರೆದ. ಮತ್ತೆ ಅದನ್ನು ಮುಚ್ಚಿದ. ಆರೆಂಟು ಪುಸ್ತಕಗಳನ್ನು ತೆರೆದು ತೆರೆದು ದೂರ ಬೀಸಿದ. ಬಟ್ಟೆಗಳನ್ನು ಹಾಕಿಕೊಂಡು ಹೊರಗೆ ಹೋಗಬೇಕೆಂದು ಎದ್ದ. ಬಾಗಿಲನ್ನು ತೆರೆದು ಹೊರಗೆ ಬಂದು ಬಾಗಿಲನ್ನು ಇಕ್ಕಿದ. ಮತ್ತೇನು ಎನ್ನಿಸಿತೊ! ಒಳಗೆ ಬಂದು ಹಾಗೆಯೇ ಕಾಟಿನ ಮೇಲೆ ಒರಗಿದ್ದ. ಹದಿನೆಂಟು ವರುಷಗಳ ಚಿತ್ರ ಕಣ್ಣೆದುರು ನಿಂತಿತು. ಹೀಗೆ ತನ್ನ ಬದುಕನ್ನು ಅವನು ಅನೇಕಸಲ ಅನುಭವಿಸಿದ್ದಾನೆ. ಕಾಲದೇಶಗಳ ಸಂವೇದನೆಯನ್ನು ಮೀರಿ ವರ್ತಮಾನದ ಹೆಡೆಯನ್ನು ತುಳಿದಿದ್ದಾನೆ. ಭೂತವನ್ನು ಅಗಿದಿದ್ದಾನೆ. ಭವಿಷ್ಯದಲ್ಲಿ ಗರಿಗೆದರಿದ್ದಾನೆ." (ನಾಲ್ಕನೆಯ ಆಯಾಮ, ಪುಟ ೫)

ನಾಯಕನ ಮನಸ್ಸು ಭೂತಕಾಲದ ಕಡೆಗೆ ಹರಿದಾಗ ಕತೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ನಾಯಕ ತಾನು ಬಾಲ್ಯ ಜೀವನದಲ್ಲಿ ಅನುಭವಿಸಿದ ಅಪಮಾನ, ಅವನ ಕಣ್ಣ ಮುಂದೆ ಕುಣಿಯಲು ಪ್ರಾರಂಭವಾಗುತ್ತದೆ. ಶಾಲೆಯಲ್ಲಿ ತಾನು ಹೇಳಿದ ಒಂದು ಶಬ್ದವನ್ನು ಕೇಳಿ ಶಿಕ್ಷಕರು ಎಲ್ಲಾ ಹುಡುಗರು ಎದುರಿಗೆ ಬೈದಂತಹ ಮಾತುಗಳು ಸ್ಟ್ರೋಕ್ ಆಫ್ ಪೆನ್ನಿನಿಂದ ನಿನ್ನ ಭವಿಷ್ಯವನ್ನೆಲ್ಲ ನಾನು ಹಾಳುಮಾಡಬಲ್ಲೆ ಎಂದು ಹೇಳಿದ ಈ ಮಾತುಗಳು ವರ್ತಮಾನದಲ್ಲಿ ಕುಳಿತ ನಾಯಕನಿಗೆ ಆ ಎಲ್ಲಾ ವಿಷಯಗಳು ಬಂದು ಎರಗುತ್ತಿವೆ. ಈಗ ಆ ಶಿಕ್ಷಕ ಬಂದರೆ ಮನಸ್ಪೂರ್ವಕವಾಗಿ ಬೈಯುತ್ತೇನೆ. ನಾಯಕನ ಮನಸ್ಸು ವರ್ತಮಾನದಿಂದ ಭೂತಕಾಲದಲ್ಲಿ ನಡೆದ ಘಟನೆಯ ಕಡೆಗೆ ತಿರುಗಿ ಮತ್ತೆ ವರ್ತಮಾನದಲ್ಲಿ ತನಗಾದ ಅಪಮಾನದ ಸೇಡನ್ನು ತೀರಿಸಿಕೊಳ್ಳುವ ಒಂದು ಬಯಕೆ, ಇಲ್ಲಿ ಲೇಖಕರು ಪ್ರಜ್ಞಾಪ್ರವಾಹದ ತಂತ್ರವನ್ನು ಬಳಸಿದ್ದಾರೆ. ಈ ತಂತ್ರಕ್ಕೆ ಸಂಬಂಧಿಸಿದ ಇನ್ನೊಂದು ಸಂದರ್ಭವನ್ನು ಕಾಣಬಹುದು. ಸಿನಿಮಾ ನೋಡಬೇಕೆಂಬ ನಾಯಕನ ಬಾಲ್ಯದ ಆಸೆಗೆ ತಂದೆಯ ಬಂದು ವಿರೋಧದಿಂದ ಮನಸ್ಸಿಗೆ ವೇದನೆಯುಂಟಾಗುತ್ತದೆ. ಆಗ ಅವನಿಗೆ ಬೀಳುವ ಕನಸು

> "ಕಣ್ಣೆದುರು ವಿಶಾಲವಾದ ಬಯಲು. ಪುಟ್ಟಪುಟ್ಟ ಮಾವಿನ ಸಸಿಗಳು ಎದ್ದಿದ್ದವು. ಏನು ಚೆಲುವು. ಏನು ಕೋಮಲತೆ. ಸಂತೋಷದಿಂದ ಅವನ ಹೃದಯ ಬೆಳಗಿತು. ಒಂದೇ ಒಂದು ನಿಮಿಷ. ಯಾರೋ ನಿರ್ದಯವಾಗಿ ರೋಡ್‌ರೋಲರನ್ನು ಹಾಯಿಸಿದರು. ಮಾವಿನ ಸಸಿಗಳಲ್ಲಿ ರಕ್ತವಿತ್ತು. ಆ ನೆಲವೆಲ್ಲಾ ಅವುಗಳ ರಕ್ತದಿಂದ ತೊಯ್ದು

ಹೋಯಿತು. ಅವನ ಹೃದಯ ಅಯ್ಯೋ ಎಂದು ಕೂಗಿತು. ಕಣ್ಣುಮುಚ್ಚಿದವು. ಭೀಕರವಾದ ಕತ್ತಲೆ. ಮುರುಕ ಮನೆ ಬಿದ್ದ ಗೋಡೆ ಕತ್ತಲಲ್ಲಿ ತಾನು ಕರಗಿಹೋದೆ ಅನಿಸಿತು ಅವನಿಗೆ." (ನಾಲ್ಕನೆಯ ಆಯಾಮ, ಪುಟ ೨೨)

ಕೋಮಲವಾದ ಅವನ ಆಸೆಗಳಿಗೆ ತಂದೆಯ ಒಂದು ಪ್ರತಿಕ್ರಿಯೆಯಿಂದ ಅದುಮಿಟ್ಟ, ತಂದೆಯ ಮೇಲಿನ ಸಿಟ್ಟು, ಕ್ರೋದ ಈ ರೀತಿಯಾಗಿ ಮನಸಿನ ಮೂಲಕ ವ್ಯಕ್ತವಾಗುತ್ತದೆ. ಎಳೆಯ ಸಸಿಗಳು ನಾಯಕನ ಕೋಮಲ ಆಸೆಗಳೆಂದೂ ರೋಡ್‌ರೋಲರು ಅಪ್ಪನ ದಬ್ಬಾಳಿಕೆಯೆಂದೂ ತಟ್ಟನೆ ಹೊಳೆಯುತ್ತದೆ. ಈ ರೀತಿಯಾಗಿ ವರ್ತಮಾನದಲ್ಲಿ ಕುಳಿತು ಭೂತಕಾಲದಲ್ಲಿ ಆದ ಘಟನೆಗಳ ಬಗ್ಗೆ ವಿಚಾರ ಮಾಡಿ ಅವುಗಳನ್ನೆಲ್ಲಾ ಭವಿಷ್ಯತ್ತಿನಲ್ಲಿ ಈಡೇರಿಸಿಕೊಳ್ಳುವ ಒಂದು ಬಯಕೆ.

ಈ ರೀತಿಯಾಗಿ ಅನೇಕ ಸಂದರ್ಭಗಳಲ್ಲಿ ನಾವು ಪ್ರಜ್ಞಾಪ್ರವಾಹ ತಂತ್ರವನ್ನು ಬಳಸಿರುವುದನ್ನು ಕಾಣಬಹುದು.

ಒಟ್ಟಿನಲ್ಲಿ ಈ 'ನಾಲ್ಕನೆಯ ಆಯಾಮ'ದ ಕಾದಂಬರಿಯ ಬಗ್ಗೆ ಜಿ.ಬಿ.ಸಜ್ಜನರು ಹೀಗೆ ಬರೆಯುತ್ತಾರೆ. "ಕತೆ ಸ್ಮೃತಿ ಪ್ರವಾಹ ಸಾಗಿದಂತೆ ಸಾಗುತ್ತದೆ. ೧೮ ವರ್ಷಗಳ ಮಧ್ಯಂತರದ ಘಟನೆಗಳ ಸ್ಮೃತಿಗಳು ಕಲಸಿದ ಇಸ್ಪೀಟೆಲೆಗಳಂತೆ ಹಿಂದು ಮುಂದಾಗಿ ಬರುತ್ತವೆ. ಕಥೆಯ ಪ್ರಾರಂಭದ ಕಾಲದ 'ಇಂದು' ೧೮ ವರ್ಷಗಳ ಚಿತ್ರವನ್ನು ಕಣ್ಣೆದುರು ನಿಲ್ಲಿಸುತ್ತದೆ. ಮೂರು ಪುಟದ ಮೇಲೆ ಉಲ್ಲೇಖಿತವಾಗಿರುವ ಪ್ರಸಂಗ ಮೂರು ವರ್ಷಗಳ ಕೆಳಗಿನವು. ೧೧ನೆಯ ಪುಟದ ಮೇಲೆ ಹೆಸರಿಸಲ್ಪಡುವ ಘಟನೆ ಜರುಗಿ ಹತ್ತು ವರ್ಷಗಳಾಗಿವೆ. ಪುಟ ೧೪೩ ತಲುಪುತ್ತಲೇ ಕಥಾ ನಾಯಕನು ಚಹಾ ಕಂಪನಿಯ ಏಜಂಟನಾಗಿ ನಾಲ್ಕು ತಿಂಗಳಾಗಿದ್ದುದು ವಿದಿತವಾಗುತ್ತದೆ. ಆತ ಗತಜೀವನದ ಅನುಭವಗಳ ಸ್ಮೃತಿಗಳನ್ನು ಮೆಲುಕು ಹಾಕುತ್ತಿದ್ದಾನೆ. ನಾಲ್ಕನೆಯ ಆಯಾಮದ ಶೋಧ ನಡೆದಿದೆ. ಕಾದಂಬರಿಯ ಮಿಕ್ಕ ಭಾಗ ಉಪಸಂಹಾರವಿದ್ದಂತೆ ಇದೆ. ಪ್ರಜ್ಞಾಪ್ರವಾಹ ಭೂತಕಾಲದ ಅಂಗಳದಲ್ಲಿ ಹರಿದುಕೊಂಡು ಬಂದು ವರ್ತಮಾನ ತಲುಪುತ್ತದೆ. ಆ ವರ್ತಮಾನದ ಕತೆ ಇನ್ನು ಮುಂದೆ ಭವಿಷ್ಯದಲ್ಲಿ ಬರುತ್ತದೆ. "ಬೆಳಗಿನ ಎಂಟಾಗಿತ್ತು ಅವನ ಚಿಂತನೆಗೆ ಕೊನೆ ಬಂತು. ಅವನು ಒಂದು ನೌಕರಿಯಲ್ಲಿದ್ದಾನೆ..." ಎಂದು ೧೪೩ನೆಯ ಪುಟದ ನಿರೂಪಣೆಯ ಕಾಲ ಬೇರೆ; ಕಾದಂಬರಿ ಕೊನೆಗೊಳ್ಳುವ ಕಾಲ ಬೇರೆ" (ಜಿ.ಬಿ.ಸಜ್ಜನ 'ಪ್ರಜ್ಞಾಪ್ರವಾಹ ತಂತ್ರ-ವ್ಯಾಸಂಗ', ಪುಟ ೩೭೨)

ಪ್ರಜ್ಞಾಪ್ರವಾಹ ತಂತ್ರದಲ್ಲಿ ಬರುವ ಸ್ಮೃತಿಚಿತ್ರಗಳು ಮತ್ತು ಕನಸುಗಳು ಈ ಮನೋವಿಶ್ಲೇಷಣೆಗೆ ಸಹಾಯಕವಾದ ಅಂಶಗಳಾಗಿ ಒದಗಿ ಬಂದಿವೆ. ಕಾದಂಬರಿಯಲ್ಲಿ ಬರುವ ಕಥಾನಾಯಕನ ಬಾಲ್ಯ ಜೀವನದಲ್ಲಿ ಅವನ ವ್ಯಕ್ತಿತ್ವದ ಮೇಲೆ ಪರಿಣಾಮವನ್ನುಂಟು ಮಾಡುತ್ತಿವೆ. ಕೆಲವೊಂದು ಕುಟುಂಬದ ಘಟನೆಗಳು ವ್ಯವಹಾರಗಳ್ಳಾದಲ್ಲಿ ಅವನ ಮನಸ್ಸಿಗೆ ಹೇಗೆ ಪೂರಕವಾಗುತ್ತವೆ. ಇದನ್ನು ಬಿಡಿಸಿ ತೋರಿಸುವಲ್ಲಿ ಲೇಖಕರು ಫ್ರಾಯ್ಡ್‌ನ ಆಧುನಿಕ ಮನೋವಿಜ್ಞಾನ ಸಿದ್ಧಾಂತಗಳನ್ನು ಲೇಖಕರು

ಉಪಯೋಗಿಸಿಕೊಂಡಿದ್ದಾರೆ.

೧. ಬಾಲ್ಯದ ಅನುಭವಗಳು ಮನುಷ್ಯನ ವ್ಯಕ್ತಿತ್ವವನ್ನು ರೂಪಿಸಿಸುವಲ್ಲಿ ನಿರ್ಧಾರಕ ಪ್ರಭಾವ ಬೀರುತ್ತವೆ.

ನಾಯಕನು ಬಾಲ್ಯದಲ್ಲಿ ಇರುವಾಗ ತಂದೆ ಹೇಳಿದ ಜೀವನದ ಭೀಕರತೆಯು ಅವನಲ್ಲಿದ್ದ ಆತ್ಮವಿಶ್ವಾಸ ಕಳೆದುಕೊಳ್ಳುವಂತೆ ಮಾಡುತ್ತದೆ. ಚಿಕ್ಕ ವಯಸ್ಸಿನಲ್ಲಿ ಪ್ರೀತಿ, ವಿಶ್ವಾಸದಿಂದ ಹೇಳುವ ವಿಚಾರಗಳನ್ನು ಈ ರೀತಿ ಹೇಳಿಕೆಯು ಅವನ ವ್ಯಕ್ತಿತ್ವವನ್ನು ರೂಪಿಸುವಂತಹ ಬಾಲ್ಯದ ಬುನಾದಿ ಅಲ್ಲಾಡಿ ಹೋಗುತ್ತದೆ.

> "ಇದು ಸ್ಪರ್ಧೆಯ ಯುಗ ಸ್ಪರ್ಧೆಯಲ್ಲಿ ಗೆದ್ದರೆ ಬದುಕು. ಇಲ್ಲದಿದ್ದರೆ ಸಾವು" (ಪು.೧೪)
>
> "ಇಲ್ಲಿ ನೋಡು ಇನ್ನೂ ಈಗೇನಾಗಿದೆ ಕಾಲ ತುಂಬಾ ಕಷ್ಟತರದ್ದಾಗುತ್ತಿದೆ. ನಮ್ಮ ಕಾಲ ಹೇಗೋ ಸರಿಯಿತು. ನೀವು ಏನೇನು ಅನುಭವಿಸಬೇಕಾಗುತ್ತದೆಯೋ ಯಾರು ಬಲ್ಲರು! ತಂದೆಯ ಈ ಧ್ವನಿ ಅವನ ಕೈಕಾಲು ನಡಗಿಸುತ್ತಿತ್ತು." (ಪುಟ ೧೬)

೨. ಪ್ರತಿ ಕುಟುಂಬದಲ್ಲಿ oedipus ಸನ್ನಿವೇಶವಿರುತ್ತದೆ. ತಂದೆಯ ಬಗ್ಗೆ ಮಗನ ದ್ವೇಷ ಹಾಗೂ ತಾಯಿಯ ಬಗ್ಗೆ ಸಹಾನುಭೂತಿ, ಪ್ರೀತಿ; ತಂದೆ-ಮಕ್ಕಳ ಪ್ರಚ್ಛನ್ನ ಯುದ್ಧ ಹಾಗೂ ತಂದೆಯ ಮೇಲೆ ವಿಜಯ ಸಂಪಾದಿಸಬೇಕೆನ್ನುವ ಹಾಗೂ ಆತನನ್ನು ನಿರ್ನಾಮ ಮಾಡಬೇಕೆನ್ನುವ ಮಗನ ಸುಪ್ತ ಪ್ರವೃತ್ತಿ ಇವು ಸನ್ನಿವೇಶದ ಭಾವಭೂಮಿಕೆ. ಮನಸಾ ಇಚ್ಛೆ ಮಾಡ ಬಯಸಿದ ಪ್ರತಿಯೊಂದು ಕೆಲಸಕ್ಕೂ ತಂದೆಯಿಂದ ವಿರೋಧಕ್ಕೆ ಒಳಗಾಗುವದು ಹೆಚ್ಚೆ ಹೆಚ್ಚೆಗೂ ಅಡ್ಡ ಬಂದು ತತ್ವಭೋದನೆಯನ್ನು ಮಾಡಿ ಎಲ್ಲಿಗೂ ಹೋಗದಂತೆ ಏನನ್ನು ಮಾಡದಂತೆ ಕಟ್ಟಿಹಾಕುವ ತಂದೆಯ ಈ ಪ್ರವೃತ್ತಿ. ಅವನಿಗೆ ತಂದೆಯ ಬಗ್ಗೆ ದ್ವೇಷ ಬೆಳೆಯಲು ಕಾರಣವಾಗುತ್ತದೆ.

"ಕಾಲೇಜಿಗೆ ಹೋಗುವ ಆಸೆಯನ್ನು ತಂದೆಯ ಎದುರು ಹೇಳಿದ. ಕಾಲೇಜಿಗೆ ಹೋಗಿ ಏನು ಮಾಡುವವ? ನಾನು ಹೇಳಿದಂತೆ ಮಾಡು ರೈಲ್ವೆ ಪಬ್ಲಿಕ್ ಸರ್ವಿಸ್ ಕಮಿಶನ್ ಪರೀಕ್ಷೆಗೆ ಕುಳಿತುಕೊ. ಆರೆಂಟು ತಿಂಗಳಲ್ಲಿ ನೌಕರಿ ಸಿಕ್ಕುತ್ತದೆ." (ಪುಟ ೨೨)

"ಉತ್ಸಾಹದಿಂದ ಕೇಳಿದ ಮನಗೆ ಬಂದವನೆ ತಂದೆಯನ್ನು ಕೇಳಿದ. ಸಹಪಾಠಿಗಳೆಲ್ಲ ಸಿನಿಮಾಕ್ಕೆ ಹೋಗುತ್ತಾರೆ. ಈ ಮಾತನ್ನು ಕಿವಿಗೆ ಹಾಕಿಕೊಳ್ಳದೆ ತಂದೆ ಕೇಳಿದ. ಯಾವ ಪೇಪರ್ ಇತ್ತು' ಇದೊಂದೇ ಸಲ ಸಿನಿಮಾಕೆ ಹೋಗಿ ಬರುತ್ತೇನೆ. ತಂದೆ ಊಹುಂ ಕೂಡ ಅನ್ನಲಿಲ್ಲ. ಇಂತಹ ಕೆಲವು ತಂದೆಯ ಮಾತುಗಳಿಂದ ಈ ಪ್ರವೃತ್ತಿ ಬೆಳೆಯಲು ಕಾರಣವಾಯಿತು.

೩. ಸುಪ್ತ ಮನಸ್ಸು: ಸ್ವಾಭಾವಿಕ ಪ್ರವೃತ್ತಿಗಳು ದಮನ ಮಾಡಲ್ಪಟ್ಟಾಗ ಕನಸು ಹಾಗೂ

ಗನಸುಗಳ ಮುಖಾಂತರ ಅಭಿವ್ಯಕ್ತಿಗೊಳ್ಳಲು ಯತ್ನಿಸುತ್ತದೆ.

ನಾಯಕನ ಕೆಲವೊಂದು ಸಹಜವಾದ ಬಾಲ್ಯದ ಆಸೆಗಳನ್ನು ತಂದೆಯ ಮುಖಾಂತರ ದಮನ ಮಾಡಲ್ಪಟ್ಟಾಗ ತನಗಾಗುತ್ತಿರುವ ವೇದನೆಯನ್ನು ತಂದೆಯ ಎದುರಿಗೆ ನಿಂತು ವಾದಮಾಡಲು ಸಾಧ್ಯವಾಗದೆ ಇದ್ದಾಗ ಅದನ್ನು ಕನಸುಗಳ ಮೂಲಕ ಈಡೇರಿಸಿಕೊಳ್ಳುತ್ತಾನೆ.

೪. ನೈಚ್ಯಾನುಭಾವವನ್ನು inferiority Complex ಮುಚ್ಚಿಕೊಳ್ಳಲು ಮನುಷ್ಯ ತನ್ನ ನಿಜವಾದ ವ್ಯಕ್ತಿತ್ವಕ್ಕೆ ತೀರ ವಿರುದ್ಧವಾದ ಮುಖವಾಡವನ್ನು ಧರಿಸಲು ಯತ್ನಿಸುತ್ತಾನೆ... ಪ್ರತಿಯೊಂದರಲ್ಲೂ ಭಯ, ಭೀತಿಯನ್ನು ಹುಟ್ಟಿಸಿಕೊಂಡ ನಾಯಕ ಬಂದಂತಹ ಸಮಸ್ಯೆಗಳನ್ನು ಎದುರಿಸುವ ಧೈರ್ಯ ಇರದೆ ಇದ್ದರು ಕೂಡಾ ತನ್ನನ್ನು ಸಮಾಜದಲ್ಲಿ ಗುರುತಿಸಬೇಕೆಂದು ಹುಚ್ಚು ಹುಮ್ಮಸ್ಸಿನಿಂದ ತನ್ನ ದೌರ್ಬಲ್ಯವನ್ನು ಮುಚ್ಚಿಕೊಳ್ಳಲು ಮುಖವಾಡ ಹಾಕಿಕೊಂಡು ಬದುಕುತ್ತಾನೆ. ಮುಖವಾಡ ಸಹಾಯದಿಂದ ಶ್ರೀಮಂತರ ಮಗಳ ಮೇಲೆ ಪ್ರಭಾವ ಬೀರಿ ಅವಳಿಗೆ ನೃತ್ಯದಲ್ಲಿ ಸಾಕಷ್ಟು ಆಸೆಗಳನ್ನು ಹುಟ್ಟುಹಾಕಿ ಕೊನೆಗೆ ಅವಳಿಂದಲೂ ಪಲಾಯನ ಮಾಡುತ್ತಾನೆ.

ಈ ರೀತಿಯಾಗಿ ಲೇಖಕರು ಮನೋವಿಶ್ಲೇಷಣೆಯ ಮೂಲಕ ನಾಯಕನ ಬದುಕಿನ ಚಿತ್ರಣವನ್ನು ಬಿಚ್ಚಿತೋರಿಸುವಲ್ಲಿ ವ್ಯಕ್ತಮಾಡಿದಂತಹ ಹಲವು ಪ್ರಯೋಗಗಳು ಆಕರ್ಷಕವಾಗಿದೆ. ಅಲ್ಲದೆ ಆಧುನಿಕ ಪ್ರಜ್ಞೆಯ ಸ್ಪರ್ಶದಿಂದ ಶೈಲಿಗೆ ವಿಶಿಷ್ಟವಾದ ಸಂವೇಧನಾಶಕ್ತಿ ಪ್ರಾಪ್ತವಾಗಿದೆ. ಇಲ್ಲಿ ಕುಸುಮಾಕರರು ಎತ್ತಿಕೊಂಡ ಮಾನವಿಯ ಸ್ವಭಾವಗಳ ಪ್ರಶ್ನೆ ಎಲ್ಲಾ ಕಾಲಕ್ಕೂ ಪ್ರಸ್ತುತವಾದದ್ದೇ.

ಈ ಕಾದಂಬರಿಯಲ್ಲಿ ನಾಯಕನ ಸ್ವಾಭಾವವು ಮನೋವಿಶ್ಲೇಷಣೆ ಹಿನ್ನೆಲೆಯಲ್ಲಿ ವ್ಯಕ್ತವಾಗುವುದರೊಂದಿಗೆ, ಅವನಿಗೆ ಇರುವ ಹೆಸರು ಕೂಡ `ಮನೋಜ ಕುಮಾರ' (ಮನ-ಮನಸ್ಸು, ಜೋ-ಹುಟ್ಟು) ಈ ನಾಯಕನಿಗೆ ಇಟ್ಟ ಹೆಸರು ಕೂಡಾ ಲೇಖಕರ ಮನಸ್ಸಿನ ಒಂದು ತಿಳುವಳಿಕೆ ಮಾತ್ರ ಏಕೆಂದರೆ ಇಡೀ ಕಾದಂಬರಿಯಲ್ಲಿ ನಾಯಕನಿಗೆ ಹೆಸರನ್ನು ಎಲ್ಲೂ ಪ್ರಸ್ತಾಪ ಮಾಡಿಲ್ಲ ಎಲ್ಲೋ ಒಂದೇ ಒಂದು ಸಂದರ್ಭದಲ್ಲಿ ವ್ಯಕ್ತವಾಗಿರುವದು ಕಾಣಸಿಗುತ್ತದೆ. `ಅವನು' ಎಂಬ ಅಂಕಿತನಾಮ ಮಾತ್ರ ಉಳಿಯುತ್ತದೆ. ಇದು ಲೇಖಕರ ಒಂದು ಶೈಲಿ ಎನ್ನಬಹುದು.

ಕುಸುಮಾಕರರ ಈ ಕಾದಂಬರಿಯಲ್ಲಿ ಇನ್ನೊಂದು ವೈಶಿಷ್ಟ್ಯತೆಯನ್ನು ಕಾಣಬಹುದು. ಸಂದರ್ಭಕ್ಕೆ ತಕ್ಕಂತೆ ಬಳಸಿಕೊಂಡ ಹಿಂದಿ ಮಾತುಗಳು. ಈ ಕಥೆಯಲ್ಲಿ ಬರುವ ಯಾವುದೇ ಪಾತ್ರಗಳಿರಬಹುದು ಪ್ರತಿಯೊಬ್ಬರು ಗ್ರಾಂಥಿಕ ಭಾಷೆಯನ್ನು ಬಿಟ್ಟು ಆಡುಮಾತನ್ನು ಯಾವುದೇ ಸಂದರ್ಭದಲ್ಲಿ ಬಳಸಿರುವುದು ಕಂಡುಬರುವುದಿಲ್ಲ. ಆದರೆ ಕೆಲವು ಕಡೆ ಲೇಖಕರು ನಾಯಕನ ಪಾತ್ರದ ಸಂದರ್ಭದಲ್ಲಿ ವಿಷಯಕ್ಕೆ ತಕ್ಕಹಾಗೆ ಹಿಂದಿ ಮಾತುಗಳನ್ನು ಬಳಸಿರುವುದು ಕಂಡುಬರುತ್ತದೆ. ಬಹುಶಃ ಲೇಖಕರು ಮಹಾರಾಷ್ಟ್ರದವರಾದ ಕಾರಣ ಅವರ ಒಂದು ಪ್ರಾದೇಶಿಕತೆಯ ಛಾಯೆ ಈ ಕಾದಂಬರಿಯ ಮೇಲೆ ಬಹು ಪ್ರಮಾಣದಲ್ಲಿ

ಅಲ್ಲದಿದ್ದರು ಅದರ ಪ್ರಭಾವದ ಸೂಕ್ಷ್ಮ ಎಳೆಯನ್ನಾದರೂ ಇಲ್ಲಿ ನೋಡಬಹುದು.

> "ನಮೇರಿ ಆತ್ಮಾ ದುಃಖಿನ ಮೇರಾ ದಿಲ್ ಜಖ್ಮೋಸೆ ಚೂರ್ ಹೈ, ಬಲ್ಕಿ ಏ ದುನಿಯಾ ಜಿಸಮೆ ಮೈ ರಹತಾ ಹೂಂ ದುಃಖ ಔರ್ ದರ್ದಸೆ ಭರೀಹೈ" (ಪು.೬೫)
>
> "ಗುನಾಹಹೀ ಇನ್ಸಾನ್‌ಕೆ ಲಿಯೆ ಏಕಮಾತ್ರ ವಿಧಾಯಕ ಕಾಮ್ ರಹಗಯಾ ಹೈ" (ಪುಟ ೬೫)
>
> "ಕಿಸಿ ಚೀಜ್‌ಕೊ ಪಾನೆಕಿ ಆಶಾ ಕರನಾ ಔರ್ ಉಸೆ ನ ಪಾನಾ ಫಿರ್ ಪಾನೆಕೆ ಕಾರಣ್ ಶರ್ಮ್ ಕಾ ಅನುಭವ ಕರನಾ ಇಸಸೆ-ಮೈ-ಅಪನೆ ಆಪ್ ಬಟಾಯೆ ರಖಿನಾ ಚಾಹತಾ ಹೂಂ" (ಪುಟ ೯೦)
>
> "ಕಿಸೀಕೆಲಿಯೆ ಇಸಸೆ ಬಢಕರ್ ಔರ್ ಸಜಾ ಕ್ಯಾ ಹೋ ಸಕತಿ ಹೈ ಕಿಸೀಕೆ ಚಾಹತ್‌ಮೆ ತೊ ಜಲೆ ಪರ್ ಉಫ್‌ತಕ್ ನಕರೆ" (ಪುಟ ೯೦)
>
> "ಮೇರಿ ಮುಹಬ್ಬತ್ ಜವಾಂ ರಹೇಗಿ| ಸದಾ ರಹೀ ಹೈ, ಸದಾ ರಹೇಗಿ... ಚಿತಾಮೆ ಜಲಕರ್‌ಬೀ ನಾ ಮಿಟೇಗಿ"
>
> "ತಮನೆ ಪ್ಯಾರ್‌ಸೇ ಜೀನಾ ಸಿಖಾಯಾ" (ಪುಟ ೧೦೭)

ಕುಸುಮಾಕರರು ಈ `ನಾಲ್ಕನೆಯ ಆಯಾಮ`ದಲ್ಲಿ ನವ್ಯದ ತಂತ್ರವನ್ನು ಯಾವ ರೀತಿಯಾಗಿ ಮಾಡಲಾಗಿದೆ ಎಂಬುದನ್ನು ನವ್ಯ ಅಂಶಗಳ ಮೂಲಕ ಇಲ್ಲಿ ಕಟ್ಟಿಕೊಡಲಾಗಿದೆ. ಅವುಗಳನ್ನು ಈ ಕೆಳಗಿನಂತೆ ಒಂದೊಂದಾಗಿ ಸಂದರ್ಭಗಳನ್ನು ತೆಗೆದುಕೊಂಡು ವಿವರಿಸಲಾಗಿದೆ.

ನವ್ಯದ ಪ್ರಮುಖ ಅಂಶವಾದ ಪ್ರತಿಭಟನೆ ಮತ್ತು ಬಂಡಾಯ ಧ್ವನಿಯನ್ನು ಕುಸುಮಾಕರರು ನಾಲ್ಕನೆಯ ಆಯಾಮ ಕಾದಂಬರಿಯಲ್ಲಿ ಸಂದರ್ಭಕ್ಕೆ ತಕ್ಕಂತೆ ಬಳಸಿಕೊಂಡಿದ್ದಾರೆ. ನಾಯಕನ ತಂದೆ ಕಾಲೇಜಿಗೆ ಹೋಗಲು ಮಗನಿಗೆ ಅನುಮತಿ ನೀಡದೆ ಇದ್ದ ಸಂದರ್ಭದಲ್ಲಿ ನಾಯಕನ ತಾಯಿ ಪ್ರತಿಭಟಿಸಿದ ರೀತಿ ತುಂಬಾ ಸೊಗಸಾಗಿ ಚಿತ್ರಿಸಿದ್ದಾನೆ.

> "ಅವನನ್ನು ಕಾಲೇಜಿಗೆ ಹಾಕದಿದ್ದರೆ ನಾನು ಯಾವುದಕ್ಕೂ ಹಿಂದೆ ಸರಿಯುವುದಿಲ್ಲ ಇಲ್ಲಿಯವರೆಗೆ ನಾನು ಯಾವುದಕ್ಕೂ ಪ್ರತಿಯಾಡಲಿಲ್ಲ. ಎಲ್ಲವನ್ನೂ ಸಹಿಸಿದ್ದೇನೆ. ಮನೆಯೊಡೆದರೂ ಚಿಂತೆಯಿಲ್ಲ ನಾನು ಮಗನ ಬದಿಗೆ ನಿಲ್ಲುತ್ತೇನೆ. ರಟ್ಟೆಗಳಲ್ಲಿ ಬಲವಿರುವವರೆಗೆ ದುಡಿದು ಅವನನ್ನು ಕಲಿಸುತ್ತೇನೆ. ತಂದೆ ಈ ನಿರ್ಧಾರವನ್ನು ಹಿಂದೆ ಎದುರಿಸಿರಲಿಲ್ಲ. ತನ್ನ ಹೆಂಡತಿಯಲ್ಲಿಯ ಸ್ಥಿರತೆಯಿಂದ ಮೂಕವಿಸ್ಮಿತನಾದ" (ನಾಲ್ಕನೆಯ ಆಯಾಮ, ಪುಟ ೪೨)

ಮೊದಲಿನಿಂದಲೂ ನಡೆಸಿಕೊಂಡು ಬಂದ ಹಳೆಯ ಪದ್ಧತಿಯನ್ನು ನಾಯಕನ ತಾಯಿಯ ಮೂಲಕ ಕಿತ್ತೊಗೆಯುವ ಸಾಹಸ ಮಾಡಿರುವುದು ಗೊತ್ತಾಗುವುದರೊಂದಿಗೆ ಕುಟುಂಬದಲ್ಲಿ ತಾಯಿಗೂ ಸ್ಥಾನವಿರುವುದನ್ನು ವ್ಯಕ್ತ ಮಾಡಿದಂತಾಗಿದೆ. ಇದೇ ರೀತಿಯಾಗಿ ನಾಯಕ ತನಗಾದ ಅಪಮಾನ

ಮನಸ್ಸಿನಲ್ಲಿಯಾದ ತೊಳಲಾಟವನ್ನು ಈ ಮೂಲಕವಾಗಿ ವ್ಯಕ್ತಪಡಿಸುತ್ತಾನೆ.

"ಇಂದಿನಿಂದ ನಾನೊಬ್ಬ ಬೇರೆಯೇ ವ್ಯಕ್ತಿ ದಬ್ಬಾಳಿಕೆಯ ವಿರುದ್ಧ, ಅನ್ಯಾಯದ ವಿರುದ್ಧ ನಾನು ಬಂಡೇಳುತ್ತೇನೆ? ಮೊದಲು ಸ್ನೇಹಿತನ ಭಾರವನ್ನು ತೆಗೆದೊಗೆಯುತ್ತೇನೆ. ತಂದೆಯ ಅಧಿಕಾರವನ್ನು ಕಿತ್ತೊಗೆಯುತ್ತೇನೆ. ಸಂಸ್ಕೃತಿಯ ವಿರುದ್ಧವೇ ಹೋರಾಟ ಹೂಡುತ್ತೇನೆ. ನನ್ನ ಮೇಲಿರುವ ಪರಂಪರೆಯನೊಗವನ್ನು ತೆಗೆದುಹಾಕುತ್ತೇನೆ" (ಪುಟ ೫೧)

ಈ ರೀತಿಯಾಗಿ ಹಳೆಯ ಮೌಲ್ಯಗಳ ಮೇಲೆ ಹೊಸ ದೃಷ್ಟಿಕೋನವನ್ನು ಬೀರಿದ್ದಾರೆ. ಈ ಸಾಲುಗಳಲ್ಲಿ ಹಳೆಯ ಮೌಲ್ಯಗಳ ಮೇಲೆ ತಿರಸ್ಕಾರವಿದೆ. ಹಳೆಯ ಆದರ್ಶವಾದದ ವಿರುದ್ಧ ಬಂಡಾಯವಿದೆ.

ನವ್ಯದ ಮತ್ತೊಂದು ಪ್ರಮುಖ ಅಂಶ ಬುದ್ಧಿಯ ಪ್ರಾಧಾನ್ಯತೆ ಹಳೆಯ ಮೌಲ್ಯಗಳನ್ನು ಒರೆಗೆ ಹಚ್ಚಿನೋಡುವುದಕ್ಕಾಗಲಿ, ಜೀವನದ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಅದರ ಸಹಾಯಕ್ಕೆ ಬರುವುದು ತೀಕ್ಷ್ಣ ಬುದ್ಧಿಯೇ ಹೊಂತು ಭಾವುಕತೆಯಲ್ಲ. ಈ ಕಾದಂಬರಿಯಲ್ಲಿ ನಾಯಕ ಹೇಳುವ ಕೆಲವೊಂದು ಮಾತುಗಳಾಗಲಿ ಹಾಗೂ ಸ್ನೇಹಿತನು ನಾಯಕನಿಗೆ ಹೇಳುವ ಮಾತಾಗಿರಬಹುದು ಇವರಿಬ್ಬರಿಗೂ ಜೀವನದ ಬಗ್ಗೆ ಇರುವ ಅವರ ದೂರದೃಷ್ಟಿಕೋನ ತಿಳಿಯುವುದರೊಂದಿಗೆ ಅವರಲ್ಲಿರುವ ಬುದ್ಧಿ ಪ್ರಾಧಾನ್ಯತೆಯ ಪರಿಚಯವಾಗುತ್ತದೆ.

> "ಉಪದೇಶವನ್ನು ಕೊಡವಂತೆ ಜನರು ಧಾರಾಳವಾಗ ಬೇರೆ ಏನನ್ನೂ ಕೊಡುವುದಿಲ್ಲ" (ಪುಟ ೯೧)
>
> "ವ್ಯಕ್ತಿ ಹಾಳಾಗುವದಕ್ಕೆ ಸಮಾಜ ಕಾರಣವೋ ಹೇಗೆ? ನಾವು ಹೀಗೆ ತಾತ್ವಿಕವಾಗಿ ಚರ್ಚಿಸುವುದಕ್ಕಿಂತ ನೇರವಾಗಿ ಮಾತನಾಡುವುದು ಒಳ್ಳೆಯದು. ನಿಮ್ಮ ಅಭಿಪ್ರಾಯ ಒಂದಿರಬಹುದು. ನನ್ನ ಅಭಿಪ್ರಾಯ ಒಂದಿರಬಹುದು. ಅಭಿಪ್ರಾಯಗಳಿಂದ ಆಗಬಹುದಾದುದೇನು? ನೀವು ಹೇಳುವುದು ನಿಮ್ಮ ಚಾರಿತ್ರ್ಯ ಸುತ್ತಲಿನ ವಾತಾವರಣದ ಪ್ರತಿಕ್ರಿಯೆ ಎಂದು ಒಪ್ಪಿಕೊಳ್ಳೋಣ. ಒಪ್ಪಿಕೊಂಡಿದ್ದರಿಂದ ಏನು ಬಂತು? ನಿಮ್ಮ ಚಾರಿತ್ರ್ಯ ಬದಲಾಯಿತೆ? ನಿಮ್ಮ ಸಮಸ್ಯೆಗೆ ಪರಿಹಾರ ದೊರೆಯಿತೆ? ಬಹಳವಾದರೆ ಹೊಣೆ ನನ್ನದಲ್ಲ ಎಂಬುದರಿಂದ ಒಂದಿಷ್ಟು ಮನಸ್ಸಿಗೆ ಸಮಾಧಾನವಾಗಬಹುದು ಆದರೆ ಸಮಾಜಧಾನದಿಂದ ಏನು ಲಾಭ" (ನಾಲ್ಕನೆಯ ಆಯಾಮ, ಪುಟ ೬೭)
>
> "ಜೀವನಕ್ಕೊಂದು ಉದ್ದೇಶವಿರಬೇಕು. ಬರೀ ಹೊಟ್ಟೆ ತುಂಬಿಕೊಳ್ಳುವುದೊಂದೆ ಈ ಜೀವನದ ಉದ್ದೇಶವಲ್ಲ" (ನಾಲ್ಕನೆಯ ಆಯಾಮ, ಪುಟ ೫೮)

ಈ ಎಲ್ಲಾ ಮಾತುಗಳು ಅವರವರ ಬುದ್ಧಿಪ್ರಾಧಾನ್ಯತೆಯನ್ನು ಎತ್ತಿತೋರಿಸುತ್ತದೆ.

ನವ್ಯದ ಪ್ರಮುಖ ಅಂಶವಾದ ಅನನ್ಯ ಕಾಲದ ಕಲ್ಪನೆಯು ಕೂಡಾ ಚನ್ನಾಗಿ ಮೂಡಿಬಂದಿದೆ. ಅನನ್ಯ ಕಾಲದ ಪ್ರಕಾರ ಭೂತ, ವರ್ತಮಾನ ಮತ್ತು ಭವಿಷ್ಯತ್ತುಗಳು ಒಂದರ ಹಿಂದೊಂದು ಬರುವ ಕಾಲಘಟ್ಟಗಳಾಗಿರದೆ, ಮೂರು ಒಂದೇ ಕ್ಷಣದಲ್ಲಿ ಒಟ್ಟಿಗೆ ಸಂಧಿಸುವ ಕಾಲಾವಧಿಯಾಗಿರುತ್ತದೆ. ಕಥಾನಾಯಕನು ಚಿಕ್ಕ ಕಿರುಕೋಣೆಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಓಡಾಡುತ್ತಾ ತನಗೆ ಬಾಲ್ಯಜೀವನದಲ್ಲಿ ಆದ ಅವಮಾನ ಘಟನೆಗಳನ್ನು ನೆನಪು ಮಾಡಿಕೊಳ್ಳುತ್ತಾ.

> "ತನ್ನ ಬದುಕನ್ನು ಅನೇಕ ಸಲ ಅನುಭವಿಸಿದ್ದಾನೆ. ಕಾಲ ದೇಶಗಳ ಸಂವೇದನೆಯನ್ನು ಮೀರಿ ವರ್ತಮಾನದ ಹೆಡೆಯನ್ನು ತುಳಿದಿದ್ದಾನೆ. ಭೂತವನ್ನು ಅಗಿದಿದ್ದಾನೆ. ಭವಿಷ್ಯದಲ್ಲಿ ಗರಿಗೆದರಿದ್ದಾನೆ" (ನಾಲ್ಕನೆಯ ಆಯಾಮ, ಪುಟ ೫)

ಇಲ್ಲಿ ಲೇಖಕರು ಪ್ರಜ್ಞಾಪ್ರವಾಹ ತಂತ್ರವನ್ನು ಉಪಯೋಗಿಸಿಕೊಂಡಿದ್ದಾರೆ. ಈ ತಂತ್ರವನ್ನು ಮನೋವಿಶ್ಲೇಷಣೆಯ ಮುಖಾಂತರ ಹೇಳಿದ್ದಾರೆ. ಏಕೆಂದರೆ ವ್ಯಕ್ತಿಯನ್ನು ಇಡಿಯಾಗಿ ಚಿತ್ರಿಸುವುದಕ್ಕೆ ಸಾಧ್ಯವಾಗುತ್ತದೆ.

ಭ್ರಮನಿರಸನವು ಕೂಡಾ ನವ್ಯದ ಒಂದು ಅಂಶವಾದ್ದರಿಂದ ಇದನ್ನು ನಾವು ನಾಯಕನ ಪಾತ್ರದ ಮೂಲಕ ತಿಳಿದುಕೊಳ್ಳಬಹುದು. ಈ ಕಾದಂಬರಿಯಲ್ಲಿ ಕಥಾನಾಯಕನು ತನ್ನ ಜೀವನಕ್ಕೆ ನಾಲ್ಕನೆಯ ಆಯಾಮವನ್ನು ಅಳವಡಿಸಿಕೊಳ್ಳಬೇಕೆಂಬ ಬಯಕೆಯಿಂದ ಎಲ್ಲದರಲ್ಲೂ ಕಾಲಿಡುತ್ತಾನೆ. ಆದರೆ ಅವನು ಇಡುತ್ತಿರುವ ಹೆಜ್ಜೆಯು ಸರಿಯಾದ ಮಾರ್ಗ ಅವನಿಗೆ ತಿಳಿಯದು. ಇದರಿಂದಾಗಿ ಅವನು ಹುಡುಕುತ್ತಿದ್ದ ಜೀವನದ ಆ ನಾಲ್ಕನೆಯ ಆಯಾಮ ಸಿಗದೆ ಕೊನೆಗೆ ನಾಯಕನ ಕಣ್ಣೀರು ಹರಿಯುವುದರ ಮೂಲಕ ಕಾದಂಬರಿ ಅಂತ್ಯಗೊಳ್ಳುತ್ತದೆ.

"ನವ್ಯ ಸಾಹಿತ್ಯದ ಉಗಮ ಜೀವನದ ಯಶಸ್ಸಿನಲ್ಲಿರದೆ ಅದರ ವೈಫಲ್ಯದಲ್ಲಿದೆ ಎನ್ನುವ ಹೇಳಿಕೆ ನವ್ಯ ಸಾಹಿತ್ಯದ ಮೂಲವನ್ನು ಗುರುತಿಸಲು ಸಹಾಯ ಮಾಡುತ್ತದೆ" ವಿ.ಜಿ.ಭಟ್ಟರ "ಆತ್ಮಶೋಧನೆ" ನವ್ಯದ ಈ ಒಂದು ಹೇಳಿಕೆಯ ಮಾತನ್ನು ಈ ಕಾದಂಬರಿಯು ಸಂಪೂರ್ಣವಾಗಿ ಆವರಿಸಿಕೊಂಡಿದೆ.

ನವ್ಯ ಸಾಹಿತ್ಯದಲ್ಲಿ ಮೌಲ್ಯಗಳ ಪುನರ್ವಿಮರ್ಶೆ ನಡೆದದ್ದು ಬಹಳ ಮಹತ್ವದ ಅಂಶ. ಯಾವುದು ಸಾಂಪ್ರದಾಯದ ದೃಷ್ಟಿಯಲ್ಲಿ ಅನೈತಿಕ ಒಳ್ಳೆಯದಲ್ಲ ಎಂದು ಭಾವಿಸಲಾಗುತ್ತದೆಯೋ ಅದು ನವ್ಯದ ದೃಷ್ಟಿಯಲ್ಲಿ ಆರೋಗ್ಯಕರವೆಂದು ಗ್ರಹಿಸಲಾಯಿತು. ಈ ನವ್ಯದ ದೃಷ್ಟಿಕೋನವನ್ನು ಕಥಾನಾಯಕನ ಮೂಲಕ ವ್ಯಕ್ತಪಡಿಸಿದ್ದಾರೆ.

> "ನಮ್ಮ ಸಂಸ್ಕೃತಿಯೇ ಹಾಳು ಅದನು ಮಾಡಬೇಡ ಇದನ್ನೂ ಮಾಡಬೇಡ. ಇಲ್ಲಿ ಸ್ಕರ್ಟ್ ಹಾಕಿದರೇ ಗಾಬರಿಯಾಗುವ ಜನ. ಕೂಪಮಂಡೂಕ. ಏಕೆ ಕುಡಿಯಬಾರದು" ಚರ್ಚಿಲ್ ತುಂಬ ಕುಡಿಯುತ್ತಿದ್ದನಂತೆ. ಆದರೂ ಚರ್ಚಿಲ್ ಎಂಥಹ [illegible]

> ಸೇದಬಾರದು ಅಮೇರಿಕಾ ಬ್ರಿಟನ್‌ಗಳಲ್ಲಿ ತಂಬಾಕಿನ ವಿಷಯದಲ್ಲಿ ಸಂಶೋಧನೆಯಾಗಿದೆ. ಅದು ಆರೋಗ್ಯಕ್ಕೆ ಅಹಿತಕರ ದೂರದೃಷ್ಟಿಯೇ ಇಲ್ಲ. ಭಾರತೀಯ ಹಣೆಬರಹವೇ ಇಷ್ಟು ನೀತಿ ನೀತಿ ದೌರ್ಬಲ್ಯದ ಪರಮಾವಧಿ. ಅಯ್ಯೋ ನಮ್ಮ ಊಟವೇ ರೊಟ್ಟಿಯಿದ್ದರೆ ಪಲ್ಯ ಇಲ್ಲ. ಹಾಲಿಲ್ಲ ಮೊಸರಿಲ್ಲ. ಅಡುಗೆಯಲ್ಲಿ ವಿವಿಧತೆಯಂತೂ ಮೊದಲಿಲ್ಲ. ಸ್ನೇಹಿತನಿಗೆ ಹೇಳಬೇಕು - ಹೀಗಾಗಿ ನಮ್ಮ ದೇಶ ಹಾಳಾಗಿದೆ. ನಾಡಿನ ತುಂಬ ದ್ರಾಕ್ಷಿ ಬೆಳೆಸಿ ಮದ್ಯ ಮಾರಿದರೆ ಕಾಲೇಜಿನಲ್ಲಿ ಒಂದು ಬಾರ್ ತೆರೆದರೆ-ಸ್ನೇಹಿತ ಪತ್ರಿಕೆಗಳನ್ನೇ ನೋಡುತ್ತಿರಲಿಕ್ಕಿಲ್ಲ. Life push ಇರಬೇಕು ಬದುಕಬೇಕಾದರೆ" (ನಾಲ್ಕನೆಯ ಆಯಾಮ, ಪುಟ ೭೧)

ಮೌಲ್ಯಗಳ ಪುರ್ನವಿಮರ್ಶೆಯಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ದಟ್ಟ ಪ್ರಭಾವಬೀರುವುದು ಕಂಡಬರುತ್ತದೆ.

ನವ್ಯದ ಇನ್ನೊಂದು ಅಂಶವಾದ ವಿಜ್ಞಾನದ ಪ್ರಭಾವವನ್ನು ಈ ಕಾದಂಬರಿಯಲ್ಲಿ ಕಾಣಬಹುದು. ೨೦ನೆಯ ಶತಮಾನವನ್ನು ವಿಜ್ಞಾನದ ಯುಗ ಎಂದು ಕರೆಯಲಾಗುತ್ತದೆ. ಈ ವೈಜ್ಞಾನಿಕದ ಪ್ರಭಾವ ಸಾಹಿತ್ಯದ ಮೇಲೂ ಆಗಿರುವುದರಿಂದ ಸಾಹಿತ್ಯದಲ್ಲಿ ಮಾನಸಶಾಸ್ತ್ರ, ವಿಜ್ಞಾನ, ಪಾಶ್ಚಾತ್ಯರ ವಿಚಾರಗಳು ಇವೆಲ್ಲವುಗಳಿಂದ ಕಂಡುಕೊಂಡ ಹೊಸಹೊಸ ಚಿಂತನೆಗಳು ನವ್ಯ ಸಾಹಿತ್ಯದ ಮೇಲೆ ಪ್ರಭಾವ ಬೀರಿದವು. ಇದರ ಪರಿಣಾಮವಾಗಿ ಪ್ರಜ್ಞಾಪ್ರವಾಹ ತಂತ್ರ, ಫ್ರಾಯ್ಡ್‌ನ ಮನೋವಿಶ್ಲೇಷಣ ವಿಧಾನ ಸಾಹಿತ್ಯದಲ್ಲಿ ಬಳಸಿಕೊಂಡು ಒಬ್ಬ ವ್ಯಕ್ತಿಯ ಮಾನಸಿಕ ವಿಷಯಗಳನ್ನು ವಿಶ್ಲೇಷಿಸಲು ಸಾಧ್ಯವಾಯಿತು. ಇಂತಹ ಒಂದು ಪ್ರಭಾವವನ್ನು ಈ ಕಾದಂಬರಿಯ ಮೇಲೆ ಆಗಿರುವುದು ಕಂಡುಬರುತ್ತದೆ. 'ನಾಲ್ಕನೆಯ ಆಯಾಮ' ಸಂಪೂರ್ಣವಾಗಿ ಮನೋವಿಶ್ಲೇಷಣೆಯ ಹಿನ್ನೆಲಯಲ್ಲಿ ಮೂಡಿಬಂದಿದೆ. ಆಧುನಿಕ ಮನೋವಿಜ್ಞಾನಿ ಫ್ರಾಯ್ಡ್ ಹೇಳಿದ ಮನೋವಿಶ್ಲೇಷಣೆಯ ೫ ತತ್ವಗಳನ್ನು ಇಲ್ಲಿಬರುವ ಕಥಾನಾಯಕನಿಗೆ ಸಂದರ್ಭಕ್ಕೆ ತಕ್ಕಂತೆ ಬಳಸಿಕೊಂಡು ಅವನ ಮನಸ್ಸನ್ನು ಪದರುಪದರಾಗಿ ಬಿಚ್ಚಿ ತೋರಿಸುವಲ್ಲಿ ಯಶಸ್ಸನ್ನು ಕಂಡಿದೆ. ಅಷ್ಟೇ ಅಲ್ಲದೆ ಕುಸುಮಾಕರರು ಕಲಿಕೆಯ ವಿಷಯದಲ್ಲೂ ವಿಜ್ಞಾನಕ್ಕೆ ಹೆಚ್ಚಿನ ಮಹತ್ವ ನೀಡಿರುವುದು ಗೋಚರಿಸುತ್ತದೆ.

> "ಈಗ ಅವನ ಧ್ಯೇಯ ಬದಲಾಗಿದೆ. ಡಾಕ್ಟರ್ ಇಂಜಿನಿಯರ್ ಇವುಗಳಲ್ಲಿಅವನಿಗೆ ಆಸಕ್ತಿ ಇಲ್ಲ. ಹ್ಯೂಮಾಸನ್, ಐನಸ್ಟೀನ್, ಹಾಲ್ಡೇನ್ ಇವರು ಅವನ ಮಾನಸ ಕ್ಷಿತಿಜವನ್ನು ವಿಸ್ತರಿಸಿದ್ದಾರೆ. ವಿಜ್ಞಾನ ಇಂದಿನ ಮಂತ್ರ. ನಮ್ಮ ಭಾರತವನ್ನು ಮುಂದೆ ತರಬೇಕು. ನೋಬೆಲ್ ಪಾರಿತೋಷಕವನ್ನು ವಿಜ್ಞಾನದ ಶೋಧಗಳಿಗಾಗಿ ಪಡೆಯಬೇಕು. ಅಸಾಧ್ಯವಾದದ್ದೇನಿದೆ. ಪ್ರಯತ್ನ ಮಾಡಬೇಕು. 'ಸಂಶೋಧಕರ ಜೀವನ ಚರಿತ್ರೆ' 'ವಿಜ್ಞಾನದ ಇತಿಹಾಸ' ಇವುಗಳಿಂದ ಅವನ ಜೀವನ ವಿಕಾಸವಾಗುತ್ತಲಿದೆ. ಅವರಿಬ್ಬರೂ ಕೂಡಿ ವಿಜ್ಞಾನಿಗಳ ವೈಶಿಷ್ಟ್ಯಗಳನ್ನು ಕಲೆಹಾಕಿದರು. ಅವರ ಜೀವನದ ರೀತಿನೀತಿಗಳನ್ನು ಕೂಲಂಕುಷವಾಗಿ ಅಭ್ಯಾಸ ಮಾಡಿದರು. ಸಂಶೋಧನೆಗಾಗಿ [illegible] ಆರಿಸಿಕೊಳ್ಳಬಹುದು? ಅವನು ಸ್ನೇಹಿತನನ್ನು ಕೇಳಿದ.

"ನ್ಯೂಕ್ಲಿಯರ್ ಫಿಜಿಕ್ಸ್, ನ್ಯೂಕ್ಲಿಯರ್ ಕೆಮಿಸ್ಟ್ರಿ, ಬೈಯಾಲಜಿ, ಪ್ಯೂರ್ ಮೆಥಮೆಟಿಕ್ಸ್ ಕ್ಷೇತ್ರ ಎಷ್ಟು ವಿಶಾಲವಾಗಿದೆ" (ನಾಲ್ಕನೆಯ ಆಯಾಮ, ಪುಟ ೩೮)

ಈ ರೀತಿಯಾಗಿ ಲೇಖಕರು ಕಥಾನಾಯಕ ಹಾಗೂ ಆತನ ಸ್ನೇಹಿತನ ಮೂಲಕ ವಿಜ್ಞಾನಕ್ಕೆ ಇರುವ ಮಹತ್ವವನ್ನು ಬಿಚ್ಚಿತೋರಿಸಿದ್ದಾರೆ.

ಕುಸುಮಾಕರರು ದಾರ್ಶನಿಕ ಬರಹಗಾರರಾಗಿದ್ದರಿಂದ ಇವರು ನಾಲ್ಕನೆಯ ಆಯಾಮದಲ್ಲಿ ನಾಯಕ ಪಾತ್ರದ ಮೂಲಕ ಈ ಹುಡುಕಾಟವನ್ನು ಚಿತ್ರಿಸಿದ್ದಾರೆ. ನಾಯಕ ತನ್ನ ಜೀವನಕ್ಕೆ ಬೇಕಾದ ನಾಲ್ಕನೆಯ ಆಯಾಮದ ಬೆನ್ನಹತ್ತುತ್ತಾನೆ. ಆದರೆ ಅದರ ಸರಿಯಾದ ಕಲ್ಪನೆ ಕೂಡಾ ಅವನಿಗೆ ಇಲ್ಲ. ಇನ್ನೊಬ್ಬರ ಅನುಕರಣೆ ಮಾಡುತ್ತಾನೆ. ಮುಖವಾಡ ಹಾಕಿ ಬದುಕುತ್ತಾನೆ. ಏನೆ ಆದರೂ ಆ ನಾಲ್ಕನೆಯ ಆಯಾಮ ಸಿಗದೆ ಹೋಗುತ್ತದೆ. ಇಲ್ಲಿ ಅವನ ಹುಡುಕಾಟ ನಿರರ್ಥಕವಾಗಿದೆ.

ಈ ರೀತಿಯಾಗಿ ನವ್ಯದ ಅಂಶಗಳನ್ನು ಕುಸುಮಾಕರರು ಈ ಕಾದಂಬರಿಯಲ್ಲಿ ಅರ್ಥಪೂರ್ಣವಾಗಿ ಬಳಸಿರುವುದು ಕಂಡುಬರುತ್ತದೆ.

ಒಟ್ಟಾರೆಯಾಗಿ ಭಾಷೆ ಶೈಲಿ ಎಲ್ಲದರಲ್ಲಿಯೂ ಹೊಸದನ್ನು ಹುಡುಕುವ ಪ್ರಯತ್ನ ಮಾಡಿದ್ದಾರೆ. ವ್ಯಕ್ತಿಯ ಆಂತರಿಕ ಆಂದೋಲನವನ್ನು ಭಾಷೆಯಲ್ಲಿ ಎಷ್ಟು ಸಮರ್ಥವಾಗಿ ಸೆರೆ ಹಿಡಿಯಬಹುದು ಎಂಬುದನ್ನು ತೋರಿಸುವುದರೊಂದಿಗೆ ಕಥಾನಾಯಕನ ಒಳತುಮುಲಗಳನ್ನು ಅವನ ಮನಸ್ಸಿನ ವ್ಯಾಪಾರವನ್ನು ಎಷ್ಟು ಸಮರ್ಥವಾಗಿ ಕಟ್ಟಬಹುದು ಎಂಬುದಕ್ಕೆ ಆದರ್ಶಕೃತಿಯಾಗಿದೆ. ಸಾಂಪ್ರದಾಯಿಕ ಕಾದಂಬರಿ ಕಥನ ಪರಂಪರೆಯನ್ನು ಮುರಿದು ವಿಶಿಷ್ಟ ಕ್ರಮವನ್ನು ಸಾಧಿಸಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಟಿಪ್ಪಣಿಗಳು

೧. ಗಿರಡ್ಡಿ ಗೋವಿಂದರಾಜ, ೧೯೮೭, **ಕಾದಂಬರಿ ವಸ್ತು ಮತ್ತು ತಂತ್ರ**, ಸ್ನೇಹಾ ಪ್ರಕಾಶನ, ಬೆಂಗಳೂರು

೨. ಸಿ.ಆರ್.ಯರವಿನತೇಲಿಮಠ, ೨೦೦೦, **ಪಾಶ್ಚಾತ್ಯ ಸಾಹಿತ್ಯ ವಾದಗಳು ಮತ್ತು ಕನ್ನಡ ಸಾಹಿತ್ಯ ಸಂದರ್ಭ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಧ್ಯಾಯ ನಾಲ್ಕು

ಸಮಾರೋಪ

ಅಧ್ಯಾಯ ನಾಲ್ಕು

ಸಮಾರೋಪ

"ಕುಸುಮಾಕರ ದೇವರಗೆಣ್ಣೂರರ ನಾಲ್ಕನೆಯ ಆಯಾಮ ಒಂದು ಅಧ್ಯಯನ" ಎಂಬ ಶೀರ್ಷಿಕೆಯನ್ನು ಒಳಗೊಂಡ ಈ ನಿಬಂಧವು ಈ ಕಾದಂಬರಿಯನ್ನು ಕುರಿತು ಸಮಗ್ರವಾಗಿ ವಿಶ್ಲೇಷಿಸುವ ಒಂದು ಪ್ರಯತ್ನವಾಗಿದೆ. ಸಾಹಿತ್ಯ ಲೋಕದಲ್ಲಿ ಈ ಕೃತಿಯನ್ನು ಕುರಿತು ಅಶಿಕ ನೆಲೆಯಲ್ಲಿ ಚರ್ಚೆಯಾಗಿರುವುದು ಹೊರತುಪಡಿಸಿದರೆ ಸಂಪೂರ್ಣವಾಗಿ ಪರಿಗಣಿಸದೆ ಇರುವುದು ನಮಗೆ ಕಂಡುಬರುತ್ತದೆ. ಈ ಅಂಶದ ಹಿನ್ನೆಲೆಯಲ್ಲಿ ಪ್ರಸ್ತುತ ಕಾದಂಬರಿಯನ್ನು ತಲಸ್ಪರ್ಶಿಯಾಗಿ ಅಧ್ಯಯನ ಕೈಗೊಳ್ಳುವುದು ಪ್ರಮುಖ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಸಾಹಿತ್ಯಕ ಚರ್ಚೆಯಾಗಿ ಕೆಲ ಅಂಶಗಳು ಈ ರೀತಿಯಾಗಿವೆ. ಸೃಜನಶೀಲ ಪ್ರತಿಭೆ, ಸಮಕಾಲೀನ ನಿಲುವು ಮತ್ತು ಒಟ್ಟು ಆಶಯವನ್ನು ಸಮಗ್ರ ನೋಟವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

೧. ಪ್ರಸ್ತುತ ನಾಲ್ಕನೆಯ ಆಯಾಮ ಕಾದಂಬರಿ ಅಧ್ಯಯನದ ಮೂಲಕ ಕುಸುಮಾಕರರ ಸೃಜನಶೀಲ ಪ್ರತಿಭೆ ಒಡಮೂಡಿ ಬಂದ ರೀತಿಯನ್ನು ಕೆಲವೊಂದು ಅಂಶಗಳಿಂದ ಗ್ರಹಿಸಬಹುದಾಗಿದೆ. ಈ ಕೃತಿಯನ್ನು ಕಟ್ಟಿಕೊಡುವಲ್ಲಿ ಲೇಖಕರು ಬಳಸಿದಂತಹ ತಂತ್ರ ಈ ಕಾದಂಬರಿಗೆ ಹೊಸ ಸಾಧ್ಯತೆಯನ್ನು ತಂದುಕೊಟ್ಟಿದೆ ಎಂಬುದನ್ನು ಗುರುತಿಸಲಾಗಿದೆ. ಈ ಕಥೆಯಲ್ಲಿ ಕನಸಿನ ಮೂಲಕವೇ ಒಬ್ಬ ವ್ಯಕ್ತಿಯ ಸೂಕ್ಷ್ಮ ಸಂವೇದನೆಯನ್ನು ಬಿಚ್ಚಿತೋರಿಸಿದ್ದಾರೆ. ಲೇಖಕರು ಹೆಣೆದಂತಹ ಕನಸುಗಳು ಕೇವಲ ಭ್ರಮಲೋಕವನ್ನು ಸೃಷ್ಟಿಸದೆ, ವಾಸ್ತವ ಪ್ರಪಂಚದ ಹಲವಾರು ವಿಷಯಗಳನ್ನು ಕಟ್ಟಿಕೊಡುವ ನಿಟ್ಟಿನ ಮೇಲೆ ದೃಷ್ಟಿ ಬೀರಿರುವುದು ಗೋಚರವಾಗುತ್ತದೆ. ಅಷ್ಟೇ ಅಲ್ಲದೆ, ಸ್ವಪ್ನಗಳನ್ನು ಬೇರೆ ಬೇರೆ ದೃಷ್ಟಿಕೋನಗಳ ಮೂಲಕ ವ್ಯಕ್ತಪಡಿಸುವುದರೊಂದಿಗೆ ಅದರಲ್ಲಿ ಬಳಸಿಕೊಂಡ ಪ್ರತಿಮೆಗಳು ಹೊಸ, ಹೆಚ್ಚಾಗಿ ವ್ಯಕ್ತಿಯ ಮನಸ್ಸನ್ನು ವಿಶ್ಲೇಷಣೆಗೆ ಅನುವು ಮಾಡಿಕೊಟ್ಟಿದೆ ಎಂಬುದನ್ನು ಗುರುತಿಸಲಾಗಿದೆ.

ಈ ಕಾದಂಬರಿಯಲ್ಲಿ ಲೇಖಕರು ಒಬ್ಬ ವ್ಯಕ್ತಿಯ ವಿಚಾರದ ಸರಮಾಲೆಯಲ್ಲಿ ಭೂತ ಭವಿಷ್ಯ ಮತ್ತು ವರ್ತಮಾನಗಳನ್ನು ನಿರೂಪಿಸಿ ವ್ಯಕ್ತಿಯ ವರ್ತನೆ ಯಾವ ರೀತಿ ಇರುತ್ತದೆ ಎಂಬುದನ್ನು ತೋರಿಸುವ ಕೌಶಲ್ಯದೊಂದಿಗೆ ಕಥನ ಕ್ರಿಯೆಯ ಹಿಂದಿದ್ದ ಹೊಸ ದೃಷ್ಟಿಕೋನ ತಿಳಿದುಬರುತ್ತದೆ. ಪಾಶ್ಚಾತ್ಯ ವಾದವನ್ನು ಕಾದಂಬರಿಯುದ್ದಕ್ಕೂ ಅಲೆಗಳ ರೂಪದಲ್ಲಿ ಚಿತ್ರಿಸುವುದರೊಂದಿಗೆ ಸಮಕಾಲೀನ ವಸ್ತು ಮತ್ತು ಆಧುನಿಕ ಪ್ರಜ್ಞೆಯನ್ನು ಸಮರ್ಥನಾಗಿ ಬಳಸುತ್ತಲೇ ಬದಲಾಗುತ್ತಿರುವ ಬಾಹ್ಯ ಪ್ರಪಂಚ ಇವೆಲ್ಲದರ ನಡುವೆ ಸಿಕ್ಕ ಮನುಷ್ಯನ ಸೃಷ್ಟಿಸುವುದರೊಂದಿಗೆ ಈ ಕಾದಂಬರಿಯ ಮೂಲಕ ಹೊಸತನವನ್ನು ತಂದಿದ್ದಾರೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ಒಟ್ಟಾರೆಯಾಗಿ ಈ ಕಾದಂಬರಿಯಲ್ಲಿ ಲೇಖಕರು ತಾಂತ್ರಿಕ ನೈಪುಣ್ಯತೆ ಮೆಚ್ಚುವಂತಹುದು. ಕನಸಿನ ರೂಪ, ವಾಸ್ತವಿಕ ರೂಪ, ಸಾಂಕೇಥ ರೂಪ, ಮನಃಶಾಸ್ತ್ರೀಯ ರೂಪ ಇವೆಲ್ಲಾ ಅಂಶಗಳ ಹಿನ್ನೆಲೆಯಾಗಿ ಅವರ ಸೃಜನಶೀಲ ಪ್ರತಿಭೆಯನ್ನು ಗುರುತಿಸಬಹುದೆಂಬುದನ್ನು ನಿಬಂಧದ ಉದ್ದಕ್ಕೂ ತೋರಿಸಲಾಗಿದೆ.

೨. ಕುಸುಮಾಕರ ದೇವರಗೆಣ್ಣೂರ ಅವರು ಸಮಕಾಲೀನ ಲೇಖಕರಿಗಿಂತ ವಿಭಿನ್ನ ವ್ಯಕ್ತಿತ್ವವನ್ನು ಅವರ ಕಾದಂಬರಿಯ ಶೈಲಿಯಿಂದ ಗುರುತಿಸಬಹುದಾಗಿದೆ. ಅವರ ಸಮಕಾಲೀನ ಲೇಖಕರು ವ್ಯಕ್ತಿಯನ್ನೇ ಕೇಂದ್ರವಾಗಿಟ್ಟುಕೊಂಡು ಸಾಮಾಜಿಕ ಸಮಸ್ಯೆಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದರೆಂಬುದನ್ನು ಹಲವು ಉದಾಹರಣೆಗಳ ಮೂಲಕ ಸಮರ್ಥಿಸಿದೆ. ಇದೇ ಕ್ರಮವನ್ನು ಕುಸುಮಾಕರ ಅನುಸರಿಸಿದರು. ಅವರಿಗಿಂತ ಭಿನ್ನವಾದ ನೆಲೆಯಲ್ಲಿ ಒಬ್ಬ ವ್ಯಕ್ತಿಯ ಮನಸ್ಸನ್ನು ಮನೋವಿಶ್ಲೇಷಣೆಯ ತಾತ್ವಿಕ ನೆಲೆಗಳ ಹಿನ್ನೆಲೆಯಲ್ಲಿ ಕಟ್ಟಿಕೊಡುತ್ತಲೆ, ನಗರದ ಯಾಂತ್ರಿಕ ಬದುಕು, ನಶಿಸುತ್ತಿರುವ ಕೌಟುಂಬಿಕ ಮೌಲ್ಯಗಳು, ಅನಾಥಪ್ರಜ್ಞೆ ಇವುಗಳನ್ನೆಲ್ಲಾ ಸಮರ್ಥವಾಗಿ ಸಮಕಾಲೀನ ಲೇಖಕರಿಗಿಂತ ಭಿನ್ನ ದೃಷ್ಟಿಕೋನಗಳ ಮೂಲಕ ವಿಶ್ಲೇಷಿಸಿರುವುದು ಕಂಡುಬರುತ್ತದೆ ಎಂಬುದನ್ನು ತೋರಿಸಿದೆ. ಅಷ್ಟೇ ಅಲ್ಲದೆ ಈ ಕಾದಂಬರಿಯ ಮೂಲಕ ಲೇಖಕರು ಕುಟುಂಬ ಜಗತ್ತಿನ ಮೂಲಕ ಸಾಮಾಜಿಕ ಜಗತ್ತನ್ನು ಅರ್ಥೈಸುತ್ತಾರೆ. ಸಾಮಾಜಿಕ ದೃಷ್ಟಿಕೋನವನ್ನು ಅಳವಡಿಸಿಕೊಂಡು ಬರೆಯುವ ಸಮಕಾಲೀನರಿಗಿಂತ ಕುಸುಮಾಕರರು ವೈಯಕ್ತಿಕ ಬದುಕಿನ ನಂಬಿಕೆ, ನೋವು, ಆಸೆ, ತೃಪ್ತಿಗಳತ್ತ ತಿರುಗಿದ್ದಾರೆ. ಸಮಸ್ಯೆಗಳು ಸಾಮಾಜಿಕ ಸ್ವರೂಪ ಪರಿಣಾಮಗಳಿಗಿಂತ ಆ ಸಮಸ್ಯೆಗಳ ಮಿತಿಯಲ್ಲೇ ವ್ಯಕ್ತಿಗಳು ಪಡೆಯುವ ಅನುಭವ ಮತ್ತು ಆ ಅನುಭವಗಳ ಬಗೆಗಿರುವ ಲೇಖಕರ ಆಸಕ್ತಿ ಇವರ ಈ ಕಾದಂಬರಿಗೆ ಹೊಸ ಆಯಾಮವನ್ನು ಕೊಟ್ಟಿದೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕುಸುಮಾಕರರು ಸಮಕಾಲೀನ ಲೇಖಕರಿಗಿಂತ ಸ್ವಲ್ಪ ಭಿನ್ನವಾಗಿ ನಿಲ್ಲುತ್ತಾರೆ ಎಂಬುದನ್ನು ನಿಬಂಧದ ಹಲವು ಅಧ್ಯಾಯಗಳಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೩. ಕುಸುಮಾಕರರ ನಾಲ್ಕನೆಯ ಆಯಾಮ ಕಾದಂಬರಿಯ ಆಶಯವನ್ನು ಬೇರೆ ಬೇರೆ ಅಂಶಗಳಿಂದ ವಿಶ್ಲೇಷಿಸಬಹುದೆಂಬುದನ್ನು ನಿಬಂಧದಲ್ಲಿ ಗುರುತಿಸಲಾಗಿದೆ. ಸಂಭಾಷಣೆಯ ಸ್ವಾರಸ್ಯ, ಭಾಷಾಶೈಲಿ, ಪಾತ್ರಚಿತ್ರಣ, ಅಭಿವ್ಯಕ್ತಿಯ ಸಾಮರ್ಥ್ಯ ಇವುಗಳ ಮೂಲಕ ಕೃತಿಕಾರರ ಒಟ್ಟು ಆಶಯವನ್ನು

ಗ್ರಹಿಸುವ ಪ್ರಯತ್ನವಿದೆ. ಸಂಭಾಷಣೆಗಳಿಗೆ ಆಡುಮಾತನ್ನು ಬಳಸುವುದು ಸಾಮಾನ್ಯವಾಗಿರುವ ಈ ದಿನಗಳಲ್ಲಿ ಇವರು ತನ್ನ ಕೃತಿಯಲ್ಲಿ ಗ್ರಾಂಥಿಕ ಭಾಷೆಯನ್ನು ಬಳಸಿರುವುದು ಕಂಡುಬರುತ್ತದೆ. ಅಷ್ಟೇ ಅಲ್ಲದೆ ಚಿಕ್ಕ ಸಂಭಾಷಣೆಗಿಂತ ದೀರ್ಘ ಸಂಭಾಷಣೆಯು ಹೆಚ್ಚು ಪ್ರಭಾವ ಬೀರುವ ರೀತಿಯಲ್ಲಿ ಹೆಣೆಯುವುದರೊಂದಿಗೆ ಎರಡು ಪಾತ್ರಗಳ ಮೂಲಕ ನಡೆಸುವ ನೇರ ಸಂಭಾಷಣೆಗಿಂತ ನಾಯಕನ ಮನಸ್ಸಿನಲ್ಲಿ ನಡೆಯುವ ವಿಚಾರಗಳ ತಾಕಲಾಟಗಳ ರೀತಿ ಹೆಚ್ಚು ಚೆನ್ನಾಗಿ ಸಂಭಾಷಣೆಯ ಮೂಲಕ ತಿಳಿಪಡಿಸಿದ್ದಾರೆಂಬುದ್ದನ್ನು ಆಯಾ ಅಧ್ಯಾಯಗಳಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಈ ಕಾದಂಬರಿಯಲ್ಲಿ ಬಳಕೆಯಾದ ಸರಳವಾದ ಭಾಷಾಶೈಲಿಯಲ್ಲಿ ಕಟ್ಟಿಕೊಟ್ಟ ಬಗೆಯನ್ನು ಕಾಣಬಹುದು. ಈ ಅಂಶಗಳನ್ನು ಇಟ್ಟುಕೊಂಡು ಅಭಿವ್ಯಕ್ತಿ ಸಾಮರ್ಥ್ಯದಲ್ಲಿ ಕುಸುಮಾಕರರ ಈ ಆಕೃತಿಯಲ್ಲಿ ಪಡಿಮೂಡಿಸಿದ ಬಗೆಯನ್ನು ಈ ನಿಬಂಧದ ಆರು ಅಧ್ಯಾಯಗಳಲ್ಲಿ ಚರ್ಚೆ ಮಾಡಲಾಗಿದೆ. ಈ ಎಲ್ಲಾ ಅಂಶಗಳನ್ನು ವ್ಯವಸ್ಥಿತ ರೀತಿಯಲ್ಲಿ ಕಟ್ಟಿಕೊಡುವುದರೊಂದಿಗೆ ಜೀವನವನ್ನು ಅನೇಕ ದೃಷ್ಟಿಕೋನಗಳಲ್ಲಿ ಶೋಧನೆ ಮಾಡಿದ್ದಾರೆ ಎಂಬುದನ್ನು ತೋರಿಸಿದೆ. ಇದು ಈ ಅಧ್ಯಯನದ ಒಂದು ಸಣ್ಣ ಪ್ರಯತ್ನದೊಂದಿಗೆ ಅದರ ಸಾಧ್ಯತೆಯನ್ನು ಇಲ್ಲಿ ಗುರುತಿಸಲಾಗಿದೆ.

ಪ್ರಸ್ತುತ ಅಧ್ಯಯನದ ಹೊರತಾಗಿ ಇನ್ನು ಬೇರೆ ಮಾದರಿಗಳಲ್ಲಿ ಆಶಯ, ಪರಿಕಲ್ಪನೆಗಳಡಿಯಲ್ಲಿ ಇವರ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ. ಈ ಎಲ್ಲಾ ಕಾದಂಬರಿಗಳ ವಿಭಿನ್ನ ದೃಷ್ಟಿಕೋನಗಳನ್ನು ವಿಮರ್ಶೆಗೆ ಒಳಪಡಿಸುವ ಸಾಧ್ಯತೆಯನ್ನು ಕೆಲವು ಕಡೆ ಸೂಚಿಸಲಾಗಿದೆ. ಪ್ರಸ್ತುತ ಅಧ್ಯಯನವು ಈ ನಿಟ್ಟಿನಲ್ಲಿ ಒಂದು ಪ್ರಾರಂಭಿಕ ಪ್ರಯತ್ನವಾಗಿದೆ.

ಅನುಬಂಧಗಳು

ಆಕರ ಗ್ರಂಥಗಳು

೧. ಪ್ರೊ.ಕೀರ್ತಿನಾಥ ಕುರ್ತಕೋಟಿ, ೨೦೦೨, **ಯುಗಧರ್ಮ ಹಾಗೂ ಸಾಹಿತ್ಯ ದರ್ಶನ**, ಮನೋಹರ ಗ್ರಂಥಮಾಲೆ, ಧಾರವಾಡ

೨. ಎಚ್.ಶಶಿಕಲಾ, ೨೦೦೫, **ಏಕ-ಅನೇಕ**, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು

೩. ಜಿ.ಎಸ್.ಆಮೂರ, ೧೯೯೪, **ಅರ್ಥಲೋಕ**, ಪ್ರಿಯಾದರ್ಶಿನಿ ಪ್ರಕಾಶನ ವಿಜಯನಗರ, ಬೆಂಗಳೂರು

೪. ಡಾ.ಕೆ.ವಿಜಯಶ್ರೀ, ೨೦೦೨, **ಕನ್ನಡ ನವ್ಯ ಕಾದಂಬರಿಗಳು**, ಶ್ರೀ ರಾಮಕೃಷ್ಣ ಪ್ರಕಾಶನ, ಬೆಂಗಳೂರು

೫. ಪ್ರೊ.ಎಲ್.ಎಸ್.ಶೇಷಗಿರಿರಾವ್, **ಹೊಸಗನ್ನಡ ಸಾಹಿತ್ಯ ರೂಪಗಳು**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೬. ಸಂ.ಮುರಳೀಧರ ಉಪಾಧ್ಯ ಹಿರಿಯಡಕ, ೧೯೯೦, **ಸಾಹಿತ್ಯ ವಿಮರ್ಶೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಬೆಂಗಳೂರು

೭. ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ೧೯೯೦, **ನವ್ಯತೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೮. ಪ್ರೊ.ಟಿ.ಪಿ.ಅಶೋಕ, ೧೯೯೧, **ಸಾಹಿತ್ಯ ಸಂದರ್ಭ**, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ

೯. ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ, ೧೯೯೮, **ಪ್ರಜ್ಞಾಪ್ರವಾಹ ತಂತ್ರ**, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು

೧೦. ಡಾ.ಯು.ಆರ್.ಅನಂತಮೂರ್ತಿ, ೧೯೭೧, **ಪ್ರಜ್ಞೆ ಮತ್ತು ಪರಿಸರ**, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ

೧೧. ಡಾ.ಯು.ಆರ್.ಅನಂತಮೂರ್ತಿ, **ನವ್ಯಲೋಕ**, ಅಕ್ಷರ ಪ್ರಕಾಶನ ಹೆಗ್ಗೋಡು

೧೨. ಜಿ.ಎಸ್.ಆಮೂರ, ೧೯೮೧, **ಸಮಕಾಲೀನ ಕಥೆ ಕಾದಂಬರಿ: ಹೊಸ ಪ್ರಯೋಗಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೩. ಡಾ.ರಾಗೌ, ೨೦೦೫, **ಪಕ್ಷಿ ಸಂಪದ**, ಸಂವಹನ ಪ್ರಕಾಶನ, ಮೈಸೂರು

೧೪. ಸಿ.ಆರ್.ಯೆರವಿನತೆಲಿಮಠ, ೨೦೦೦, **ಪಾಶ್ಚಾತ್ಯ ಸಾಹಿತ್ಯ ವಾದಗಳು ಮತ್ತು ಕನ್ನಡ ಸಾಹಿತ್ಯ ಸಂದರ್ಭ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೧೫. ಪ್ರೊ.ಬರಗೂರು ರಾಮಚಂದ್ರಪ್ಪ, (ಸಂ), ೨೦೦೨, **ಕರ್ನಾಟಕ ಸಂಗಾತಿ**, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

೧೬. ಗಿರಡ್ಡಿ ಗೋವಿಂದರಾಜ, ೧೯೮೧, **ಕಾದಂಬರಿ: ವಸ್ತು ಮತ್ತು ತಂತ್ರ**, ಸ್ನೇಹಾ ಪ್ರಕಾಶನ ಬೆಂಗಳೂರು

೧೭. ಪ್ರೊ.ಕೆ.ವಿ.ನಾರಾಯಣ, **ಶೈಲಿಶಾಸ್ತ್ರ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೧೮. ಸಂಚಯ (ದ್ವೈಮಾಸಿಕ) ಕುಸುಮಾಕರ ದೇವರಗೆಣ್ಣೂರ ವಿಶೇಷ ಸಂಚಿಕೆ, ಸಂಪುಟ ೧೪, ಸಂಚಿಕೆ ೩-೪, (೭೮-೭೯, ಆಗಸ್ಟ್ ೨೦೦೫, ಜನವರಿ ೨೦೦೬)

ಕುಸುಮಾಕರ ದೇವರಗೆಣ್ಣೂರ ಕೃತಿ ವಿವರ :

ಕುಸುಮಾಕರರು ಒಂದು ಕವನ ಸಂಕಲನವನ್ನು ಮತ್ತು ಇಲ್ಲಿಯವರೆಗೆ ಒಟ್ಟು ಐದು ಕಾದಂಬರಿಗಳನ್ನು ಬರೆದಿದ್ದಾರೆ. ಅವುಗಳ ವಿವರ ಈ ರೀತಿಯಾಗಿವೆ.

೧. ಸ್ವಪ್ನ ನೌಕೆ (ಕವನ ಸಂಗ್ರಹ)

ಕುಸುಮಾಕರರ ಕಾದಂಬರಿಗಳು :

೧. ಮುಗಿಯದ ಕತೆ (೧೯೬೫)

೨. ನಾಲ್ಕನೆಯ ಆಯಾಮ (೧೯೬೭)

೩. ನಿರಿಂದ್ರಿಯ (೧೯೯೩)

೪. ಪರಿಘ (೨೦೦೧)

೫. ಬಯಲು - ಬಸಿರು (೨೦೦೫)